
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 20
ಮೇ 18, 2003 ಬೆಲೆ ರೂ. 3.00




ಮೇ 21
ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ದುಡಿವ ಜನರ ಮಹಾಸಮರ

ಭಾರತವೆಲ್ಲಾ ಬಂದ್!

ಎನ್‌ಡಿಎ ಸರ್ಕಾರದ ಮಹಿಳಾ ದ್ರೋಹ


ಗ್ರಾಮೀಣ ಕೃಪಾಂಕ ಮುಂದೇನು?



ಟಿಪ್ಪು ಸ್ಮರಣೆ

ಕೋಮುವಾದಿ ವಿಕೃತಗಳಿಗೆ ಉತ್ತರ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

26



ಹಿಂದಿನ ಸಂಚಿಕೆಯುಲ್ಲಿ ಸಂಘಟನೆಯುಲಿಲ್ಲದ ಸೈನಿಕರು ಬಂಡೇಳುತ್ತಿದ್ದರು, ಇಂಥ ದೊಡ್ಡ ಸಂಘಟನೆ ಶತ್ರು ಪಾಳೆಯದಲ್ಲೇ ಇತ್ತು. ಈ ನಡುವೆ ಬ್ರಿಟಿಷ್ ಪಡೆಗಳು ಕೂಡಾ ಯುದ್ಧದಿಂದ ದಣಿದಿದ್ದವು. ಇನ್ನೂ ಭಾರತೀಯ ಸೈನ್ಯವನ್ನು ತಟ್ಟದಿದ್ದ ಕೋಮುವಾದಿ ವೈರಸ್ ಮತ್ತು ರಾಷ್ಟ್ರೀಯ ವಿಮೋಚನಾ ಸಮರದಲ್ಲಿನ ಬಿಕ್ಕಟ್ಟನ್ನು ಬಗೆಹರಿಸಲು ಗಾಂಧೀಜಿ, ಪಟೇಲ್, ನೆಹರೂ ಮತ್ತು ಕಾಂಗ್ರೆಸ್ ನಾಯಕರು ನಂಬಿಕೆಗೆ ಅನರ್ಹರಾಗಿದ್ದರು. ಮುಂದೆ....

ಕನ್ನಡಕ್ಕೆ: **ವಿಶ್ವ ಕುಂದಾಪುರ**

ಮೇಜರ್ ಈಗ ಬಂಡಾಯ ಮಂಡಳಿಯ ಕಾರ್ಯದರ್ಶಿ

ಕ್ರಾಂತಿಕಾರಿ ತ್ರಿಮೂರ್ತಿಗಳಾದ ಜಯಪ್ರಕಾಶ ನಾರಾಯಣ್, ಲೋಹಿಯಾ ಮತ್ತು ಅರುಣಾ ಅಸಫ್ ಅಲಿಯವರನ್ನು ವೇಷ ಮರೆಸಿಕೊಂಡು ಅನೇಕ ಬಾರಿ ಸಂಪರ್ಕಿಸಲಾಯಿತು. ಆದರೆ ಆಗಲೇ ಹೇಳಿರುವಂತೆ ಅವರು ಮನಬಿಚ್ಚಿ ಮಾತಾಡಲಿಲ್ಲ. ಹಲವು ಸಂದರ್ಭಗಳಲ್ಲಿ ಅವರು ಈ ವಿಷಯಗಳನ್ನು ಚರ್ಚಿಸಲು ನಿರಾಕರಿಸಿದರು ಎಂದೂ ಹೇಳಲಾಗಿದೆ.

ಇವರು ಭಾರತದ ಜನತೆಯ, ಅದರಲ್ಲೂ ಯುವಜನರ ಹೃನ್ಮನ ಗೆದ್ದಿದ್ದರು. ಪರಿಸ್ಥಿತಿ ಕುರಿತ ಅವರ ವಿಶ್ಲೇಷಣೆ, ಬ್ರಿಟಿಷರ ಜತೆಗಿನ ಸಂಧಾನ ಕುರಿತ ಅವರ ಟೀಕೆ ಟಿಪ್ಪಣಿಗಳು ನಮ್ಮ ನಿಲುವಿಗೆ ಸರಿಹೊಂದುತ್ತಿದ್ದವು. ಹೀಗಾಗಿ ಅವರನ್ನು ಸಂಪರ್ಕಿಸಬೇಕು, ಬಂಡಾಯದ ಯೋಜನೆ ಬಗ್ಗೆ ಅವರೊಂದಿಗೆ ಸಮಾಲೋಚಿಸಬೇಕು ಎಂದು ನಾವು ನಿರ್ಧರಿಸಿದೆವು. ಈಗ ಸೇನೆಯಲ್ಲಿ ಫೀಲ್ಡ್ ಆಫೀಸರ್ ಆಗಿರುವ, ನಮ್ಮ ಗೆಳೆಯರಲ್ಲೊಬ್ಬ ಇದನ್ನು ವಿರೋಧಿಸಿದರು. ''ನಾವು ಏಕಾಂಗಿಯಾಗಿಯೇ ಹೋರಾಡೋಣ ನಾನು ಈ ಜನರನ್ನು ನಂಬುವುದಿಲ್ಲ'' ಎಂದು ಅವರು ಹೇಳಿದರು.

ಆಗ ನನಗೆ ರಾಜಕೀಯ ಸ್ಪಷ್ಟನೆ ಇರಲಿಲ್ಲ. ಹೊರಗಡೆಯಿಂದ ಸರಿಯಾದ ರಾಜಕೀಯ ನಾಯಕತ್ವವಿಲ್ಲದೆ ಬಂಡಾಯವೇಳುವುದನ್ನು ಯೋಚಿಸಿ ನನ್ನ ಮೈ ನಡುಗಿತು. ಬಂಡಾಯಗಳಲ್ಲಿ ಮಿಲಿಟರಿ ಯಶಸ್ಸು ಮಹತ್ವವಾದುದು. ಆದರೆ ಆ ಹಾದಿಯನ್ನು ಬೆಳಗುವ ರಾಜಕೀಯ ದೃಷ್ಟಿಕೋನವೇ ನಿರ್ಣಾಯಕವಾದುದು. ಬ್ರಿಟಿಷರ ಸ್ಥಾನದಲ್ಲಿ ಮಿಲಿಟರಿ ಸರ್ವಾಧಿಕಾರವನ್ನು ನಾವು ಯಾವತ್ತೂ ಯೋಚಿಸಲಿಲ್ಲ. ನಾವು ಪ್ರಜಾಸತ್ತಾತ್ಮಕ ಚಳುವಳಿಯ ಮಕ್ಕಳು. ಬಂಡಾಯದ ಫಲವಾಗಿ ಬ್ರಿಟಿಷರ ಸ್ಥಾನಕ್ಕೆ ಬರುವ ಆಡಳಿತ ತುಂಬಾ ವಿಭಿನ್ನವಾಗಿರಲಿತ್ತು. ಬಂಡಾಯ ಯಶಸ್ವಿಯಾದರೆ ನಮ್ಮ ರಾಜಕೀಯ ರಂಗದ ಎಲ್ಲಾ ಶಕ್ತಿಗಳನ್ನೊಳಗೊಂಡ ಸರ್ವಪಕ್ಷ ಸರಕಾರವೊಂದು ಸ್ಥಾಪನೆಯಾಗಬೇಕೆಂಬುದು ನಮ್ಮ ಒಮ್ಮತದ ಅಭಿಪ್ರಾಯವಾಗಿತ್ತು.

ಇಂಥ ರಾಜಕೀಯ ಪರಿಕಲ್ಪನೆಯೊಂದನ್ನು ಹೊಂದಿದ್ದ ನಾವು ಏಕಾಂಗಿಯಾಗಿ ಹೋರಾಡುವುದನ್ನು ಯೋಚಿಸುವುದಾದರೂ ಹೇಗೆ ಸಾಧ್ಯವಿತ್ತು. ರಾಜಕೀಯ ಪಕ್ಷಗಳು ಸಹಕರಿಸದಿದ್ದರೆ ವಶಪಡಿಸಿಕೊಂಡ 'ಪಟ್ಟಕ್ಕೆ' ಅವುಗಳನ್ನು ಎಳೆದು ತರಲು ಸಾಧ್ಯವಿಲ್ಲ. ಇದು ನಮ್ಮ ದ್ವಂದ್ವವಾಗಿತ್ತು. ಈ ಸಮಸ್ಯೆ ನಮ್ಮೆಲ್ಲರನ್ನು ಕಾಡಿತು. ಇದರಿಂದ ಹಲವು ಬಾರಿ ಹತಾಶೆಗೂ ಒಳಗಾದೆವು.

ಕಮ್ಯುನಿಸ್ಟ್ ವಿರೋಧಿ ಪೂರ್ವಾಗ್ರಹಪೀಡಿತ ಭಾವನೆ

ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳ ವ್ಯಾಪಕ ಧೃವೀಕರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಮ್ಯುನಿಸ್ಟರು ಯುದ್ಧ ಪ್ರಯತ್ನಗಳಲ್ಲಿ ಸಹಕಾರ ನೀಡಿದ್ದರು. ಈಗ ದೇಶದಲ್ಲಿ ಅವರೇ ಅತಿ ಸಕ್ರಿಯ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಯಾಗಿದ್ದರು. ಆದರೆ ಪೂರ್ವಾಗ್ರಹಪೀಡಿತ ಅಭಿಪ್ರಾಯಗಳು ಕಮ್ಯುನಿಸ್ಟರ ವಿರುದ್ಧವಿತ್ತು.

> ಭಾರತದ ಸ್ವಾತಂತ್ರ್ಯ ಸಂಗ್ರಾಮದ ವಿರುದ್ಧ ಬ್ರಿಟಿಷರು ರೂಪಿಸಿದ್ದ ಕಾರ್ಯತಂತ್ರವೊಂದು ಸ್ವತಃ ಒಬ್ಬ ಬ್ರಿಟಿಷ್ ಅಧಿಕಾರಿಯಿಂದಲೇ ಜೈಪಾಲ್‌ಗೆ ತಿಳಿಯಿತು. ಆ ಅಧಿಕಾರಿ ಬ್ರಿಟಿಷರ ವಸಾಹತಿನ ಜನತೆಯ ಮಿತ್ರನಾಗಿದ್ದ. ಆ ಅಧಿಕಾರಿಯ ಹೆಸರನ್ನು ಬಹಿರಂಗಡಿಸಲಾಗದ ಅಸಹಾಯಕತೆ ಜೈಪಾಲಸಿಂಗರದ್ದಾಗಿದೆ.

ರಾಜಕೀಯ ಪಕ್ವತೆಯ ಕೊರತೆಯಿಂದಾಗಿ ನಮ್ಮ ಪಡೆಗಳಲ್ಲಿನ ಬಹುತೇಕ ಸೈನಿಕರು ಕಮ್ಯುನಿಸ್ಟರ ವಿರುದ್ಧ ಪೂರ್ವಾಗ್ರಹಪೀಡಿತ ಅಭಿಪ್ರಾಯ ಹೊಂದಿದ್ದರು.

ಪಿ.ಸಿ.ಜೋಷಿಯವರನ್ನು ಮುಂಬಯಿಯಲ್ಲಿ ಸಂಪರ್ಕಿಸುವ ವಿಚಾರವನ್ನು ಮುದ್ರೆ ಸಭೆಯಲ್ಲಿ ನಾನು ಪ್ರಸ್ತಾಪಿಸಿದಾಗ ಪ್ರತಿಭಟನೆಯ ಅಲೆಯೇ ಎದ್ದಿದ್ದು ನನಗೆ ನೆನಪಿದೆ. ಮಹಾರಾಷ್ಟ್ರದ ಒಬ್ಬ ಯುವ ಕ್ಯಾಪ್ಟನ್ ಎದ್ದು ನಿಂತು ಹೀಗಂದಿದ್ದ 'ಜೈ! ನೀವೊಬ್ಬ ಕಮ್ಯುನಿಸ್ಟ್ ಎಂಬುದು ನಮಗೆ ಗೊತ್ತು. 1942 ರ ಚಳುವಳಿ ಅವ್ಯವಸ್ಥಿತಗೊಳ್ಳಲು ನೀವೇ ಹೊಣೆಗಾರರು. ಈ ಸಲ ನಾವು ನಿರ್ಧರಿಸುತ್ತೇವೆ, ನೀವದನ್ನು ಪಾಲಿಸಬೇಕು. ಕಮ್ಯುನಿಸ್ಟರ ಜತೆಯಲ್ಲಿ ಸಖ್ಯ ಸಲ್ಲುದು!'

1942 ರಲ್ಲಿ ನಾನು ಅನುಸರಿಸಿದ ರಾಜಕೀಯ ಧೋರಣೆಯನ್ನು ವಿವರಿಸಲು ಹಾಗೂ ಸಮರ್ಥಿಸಿಕೊಳ್ಳಲು ನಾನು ಎದ್ದು ನಿಂತೆ. ಆಗ ಹಿರಿಯ ಸಿಖ್ ಅಧಿಕಾರಿಯೊಬ್ಬ ಎದ್ದು ನಿಂತು "ಜೈ, ದಯವಿಟ್ಟು ಸುಮ್ಮನಿರಿ. ಅವರು ನಮಗೆ ದ್ರೋಹವೆಸಗುತ್ತಾರೆ. ನೀನು ಅವರನ್ನು ಇಷ್ಟ ಪಡುತ್ತಿ ಎಂಬುದು ನಮಗೆ ಗೊತ್ತು. ನೀನು ನಮ್ಮ ಮನವೊಲಿಸಿದರೂ ಬಹುಸಂಖ್ಯಾತ ಸೈನಿಕರನ್ನು ಮನವೊಲಿಸಲು ಸಾಧ್ಯವಿಲ್ಲ. ನಾವು ಒಂಟಿಯಾಗಿಯೇ ಹೋರಾಡೋಣ. ಸಮಾಜವಾದಿಗಳನ್ನು ಒಪ್ಪಿಸಲು ಸಾಧ್ಯವೇ ನೋಡೋಣ" ಎಂದರು.

"ನಾನೊಬ್ಬ ಕಮ್ಯುನಿಸ್ಟ್ ಅಲ್ಲ. ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಸದಸ್ಯನಲ್ಲ. ಆದರೆ ನನ್ನ ನಿಲುವು ಸರಿಯೆಂಬುದು ನನ್ನ ಬಲವಾದ ನಂಬಿಕೆಯಾಗಿದೆ. ನನ್ನ ಅಭಿಪ್ರಾಯಗಳನ್ನು ನಿಮ್ಮ ಮುಂದೆ ಮಂಡಿಸಿದ್ದೇನೆ. ನಿರ್ಧಾರ ತೆಗೆದುಕೊಳ್ಳುವುದು ನಿಮಗೆ ಬಿಟ್ಟಿದ್ದು. ಅದನ್ನು ನಾನು ಅಂಗೀಕರಿಸುತ್ತೇನೆ" ನಾನಂದೆ.

ಮರುದಿನ ಬೆಳಿಗ್ಗೆ ನಾವೆಲ್ಲ ಚದುರಿದೆವು. ಹಿಮವ್ರಣದಿಂದ ಬಳಲಿದ್ದರೂ ಎಲ್ಲರೂ ಉಲ್ಲಾಸಿತರಾಗಿದ್ದರು. ಮಾರ್ಚ್‌ನಲ್ಲಿ ಬಂಡಾಯ ಆರಂಭಿಸಬೇಕೆಂಬ ನಿರ್ಣಯ ಕೈಗೊಳ್ಳಲಾಯಿತು. ಒಂದು ಕ್ರಿಯಾ ಮಂಡಳಿಯನ್ನು ರಚಿಸಿ ನನ್ನನ್ನು ಅದರ ಕಾರ್ಯದರ್ಶಿಯಾಗಿ ನೇಮಿಸಲಾಯಿತು. ಬಂಡಾಯ ಆರಂಭವಾಗುತ್ತಲೇ ಸಮಾಜವಾದಿಗಳು ಮತ್ತು ಇತರ ಕ್ರಾಂತಿಕಾರಿ ಶಕ್ತಿಗಳನ್ನು ಸಂಪರ್ಕಿಸಲಿಕ್ಕಾಗಿ ನಾನು ಸೇನೆ ತೊರೆದು ಭೂಗತನಾಗಬೇಕೆಂದು ಮಂಡಳಿ ನಿರ್ಧರಿಸಿತು. ಮೊದಲೇ ಸೈನ್ಯವನ್ನು ತ್ಯಜಿಸಿದರೆ ಬ್ರಿಟಿಷರಿಗೆ ಅನುಮಾನ ಬರಲಿತ್ತು. ಒಬ್ಬ ಕಮಾಂಡಿಂಗ್ ಆಫೀಸರ್ ಸೈನ್ಯವನ್ನು ತೊರೆಯುವುದೆಂದರೆ ಅದೊಂದು ಅಸಮಾನ್ಯ ವಿಷಯವೇ.

ಚಕ್ಲಲಾದಲ್ಲಿ ಫೆಬ್ರವರಿಯಲ್ಲಿ ನನಗೆ ಮೈನಾ ಯೋಜನೆ ಬಗ್ಗೆ ತಿಳಿಯಿತು. ಮೈನಾ ಕಾರ್ಯಾಚರಣೆಗಳನ್ನು ವೀಕ್ಷಿಸಲು ಜನರಲ್ ಓಚಿನ್‌ಲೆಕ್ ವಾಯುವ್ಯ ಪ್ರಾಂತ್ಯಕ್ಕೆ ವಿಮಾನದಲ್ಲಿ ಬರಲಿದ್ದಾರೆ ಎಂದು ಲೆಫ್ಟಿನೆಂಟ್ ಕರ್ನಲ್ ಕೇಪಲ್‌ಕ್ಯುರ್ ನನಗೆ ತಿಳಿಸಿದರು. (ಕೇಪಲ್ ಕ್ಯುರ್ ವೈಮಾನಿಕ ಸರಬರಾಜು ತರಬೇತಿ ಕೇಂದ್ರದ ಕಮಾಂಡೆಂಟ್ ಆಗಿದ್ದರು) "ಅದಕ್ಕಾಗಿ ನಾವು ಸಿದ್ಧತೆ ಮಾಡುವಲ್ಲಿ ನಿರತರಾಗಿದ್ದೇವೆ' ಎಂದವರು ಹೇಳಿದರು.

ಭಾರತ ಮಿತ್ರ ಬ್ರಿಟಿಷ್ ಅಧಿಕಾರಿ

ನಾನು ತಕ್ಷಣವೇ ಜಾಗೃತನಾದೆ. ಬ್ರಿಟಿಷರು ರೂಪಿಸಿದ್ದ ಯೋಜನೆಯೊಂದು ನನಗೆ ತಿಳಿದಿತ್ತು. ಆ ಬಗ್ಗೆ ನನಗೆ ಮಾಹಿತಿ ನೀಡಿದ ವ್ಯಕ್ತಿಯ ಹೆಸರನ್ನು ಬಹಿರಂಗಪಡಿಸುವ ಸ್ಥಿತಿಯಲ್ಲಿ ನಾನಿನ್ನೂ ಇಲ್ಲ. ಜಿಎಚ್‌ಕ್ಯೂ ನಲ್ಲಿ ಬ್ರಿಟಿಷ್ ಅಧಿಕಾರಿ ಆಗಿದ್ದ ಆ ವ್ಯಕ್ತಿ ವಸಾಹತು ಜನರ ಮಿತ್ರನಾಗಿದ್ದ.

ದಾಖಲೆ ಪತ್ರಗಳನ್ನು ನನಗೆ ಹಸ್ತಾಂತರಿಸಿದ ಆ ಅಧಿಕಾರಿ "ಇದನ್ನು ನಿಮ್ಮ ರಾಜಕೀಯ ಪಕ್ಷಗಳಿಗೆ ತಲುಪಿಸಿ, ಜೈಪಾಲ್" ಎಂದು ನನ್ನನ್ನು ಒತ್ತಾಯಿಸಿದರು. ಭಾರತ ಮತ್ತು ಬರ್ಮಾದಲ್ಲಿನ ಬ್ರಿಟಿಷ್ ಬೇಹುಗಾರರಿಗೆ ನೀಡಿದ ನಿರ್ದೇಶನ ಆ ದಾಖಲೆ ಪತ್ರದಲ್ಲಿತ್ತು. ಅದರ ಪ್ರಮುಖ ಅಂಶಗಳು ಹೀಗಿದ್ದವು :

1. ಭಾರತ ಮತ್ತು ಬರ್ಮಾದ ಕ್ರಾಂತಿಕಾರಿ ರಾಷ್ಟ್ರೀಯ ಚಳುವಳಿ ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಇನ್ನೂ ಹಿಂದುಳಿದಿರುವ ಬುಡಕಟ್ಟು ಜನರಿಂದ ಆಕ್ರಮಣಕ್ಕೆ ಒಳಗಾಗುವಂತೆ ಮಾಡಬೇಕು. ಬುಡಕಟ್ಟು ಜನರ ವಾಸದ ಪರಿಸರ ಹಾಗೂ ಅವರಲ್ಲಿನ ಕೆಳಮಟ್ಟದ ರಾಷ್ಟ್ರೀಯ ಪ್ರಜ್ಞೆಯ ಲಾಭವನ್ನು ಸಾಮ್ರಾಜ್ಯಶಾಹಿಗಳು ಬಳಸಿಕೊಳ್ಳಬಹುದು. ಭಾರತದ ಸಶಸ್ತ್ರ ಪಡೆಗಳ ಬೆಂಬಲವಿರುವ ಕ್ರಾಂತಿಕಾರಿ ರಾಷ್ಟ್ರೀಯ ಆಂದೋಲನದಿಂದ ಉದ್ಭವವಾಗಬಹುದಾದ ಯಾವುದೇ ತುರ್ತು ಸನ್ನಿವೇಶದ ವಿರುದ್ಧ ಅವರ ಬಳಸಿಕೊಳ್ಳಬಹುದಾಗಿದೆ.

2. ಈ ಯೋಜನೆ ಕಾರ್ಯಗತ ಆಗಬೇಕಾದರೆ ಬುಡಕಟ್ಟು ಜನರಿಗೆ ಶಸ್ತ್ರಾಸ್ತ್ರ ಕೊಡಬೇಕು. ವಾಯುವ್ಯ ಪ್ರಾಂತ್ಯದ ಪಠಾಣರು, ನಾಗಾಗಳು, ಚಿನ್‌ಗಳು, ಕಚಿನ್‌ಗಳು ಮತ್ತು ಈಶಾನ್ಯ ಗಡಿಪ್ರಾಂತ್ಯ ಹಾಗೂ ಬರ್ಮಾದ ಕರೇನ್‌ಗಳಿಗೆ ಮತ್ತು ಅಂತಿಮವಾಗಿ ಒರಿಸ್ಸಾ ಹಾಗೂ ಮಧ್ಯ ಭಾರತದ ಹಿಂದುಳಿದ ಬುಡಕಟ್ಟಿನವರಿಗೆ ಕೈಗೆ ಶಸ್ತ್ರಗಳನ್ನು ನೀಡಬೇಕು.

3. ತೀರಾ ಒಳ ದೂರ ಪ್ರದೇಶಗಳು ಹಾಗೂ ಹಿಂದುಳಿದ ಪ್ರದೇಶಗಳು ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ಶಸ್ತ್ರಾಸ್ತ್ರಗಳನ್ನು ಉದುರಿಸಲು ವೈಮಾನಿಕ ಸರಬರಾಜು ವ್ಯವಸ್ಥೆ ಉತ್ತಮ ಸಾಧನವಾಯಿತು. ವೈಮಾನಿಕ ಸರಬರಾಜು ವ್ಯವಸ್ಥೆಯ ದಕ್ಷತೆಯನ್ನು ಪರೀಕ್ಷಿಸುವ ಹೆಸರಿನಲ್ಲಿ ಈ ಜಾಗಗಳಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಹಾಕಬಹುದಾಗಿದೆ.

(ಮುಂದುವರಿಯುವುದು)

ಆತ್ಮೀಯ ಸಂಪಾದಕರೆ,

ತಮ್ಮ ಐಕ್ಯರಂಗ ಪತ್ರಿಕೆಯಲ್ಲಿ ಮೇಜರ್ ಜಯಪಾಲ ಸಿಂಗರ ಆತ್ಮಕಥನ ಕಳೆದ 24 ವಾರಗಳಿಂದ ಬರುತ್ತಿರುವುದು ಸ್ವಾಗತಾರ್ಹ. ಇಂತಹ ಕ್ರಾಂತಿಕಾರಿಗಳ ಆತ್ಮಕಥನಗಳು ಇನ್ನು ಹತ್ತು ಹಲವು ನಿಮ್ಮ ಪತ್ರಿಕೆಯಲ್ಲಿ ಬರಬೇಕೆಂದು ನಮ್ಮ ಬಯಕೆ. ಹಾಗೆಯೇ ನಾನು ಸುಮಾರು 10 ವಾರಗಳಿಂದ ಮೇ ಜಯಪಾಲ್ ಸಿಂಗರವರ ಆತ್ಮಕಥನವನ್ನು ಓದುತ್ತಿದ್ದೇನೆ. ನನಗೆ ಅವರ ಸಂಪೂರ್ಣ ಆತ್ಮಕಥನವನ್ನು ಓದಬೇಕೆಂದು ಮತ್ತು ಸಂಗ್ರಹಿಸಬೇಕೆಂಬುದು ನನ್ನ ಬಯಕೆ.

ಇದರ ಸಂಪೂರ್ಣ ಕನ್ನಡ ಅನುವಾದದ ಮುದ್ರಣದ ಪ್ರತಿಯನ್ನು ನನಗೆ ಕಳುಹಿಸಲು ಸಾಧ್ಯವೇ? ಬಿಡಿ ಪ್ರತಿಯ ಬೆಲೆ ಎಷ್ಟು?

- ಟಿ.ಎನ್.ಹರಿಬಾಬು
ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಮೇ 17, 2003
ಕರ್ನಾಟಕ ಪ್ರಾಂತ ರೈತ ಸಂಘ ಉತ್ತರ ಕನ್ನಡ ಜಿಲ್ಲಾ ಸಮ್ಮೇಳನ ಕಾರವಾರ.

ಮೇ 19 ರಿಂದ 21, 2003
ಅಖಿಲ ಭಾರತ ಔಷಧಿ ಪ್ರತಿನಿಧಿಗಳ (FMRAI) ಮುಷ್ಕರ

ಜೂನ್ 2-5, 2003
ಬಿ.ಎಸ್.ಎನ್.ಎಲ್. ಎಂಪ್ಲಾಯಿಸ್ ಯೂನಿಯನ್ 2 ನೇ ಅಖಿಲ ಭಾರತ ಸಮ್ಮೇಳನ ಲಕ್ನೋ - ಉತ್ತರ ಪ್ರದೇಶ.

ಗ್ರಾಮೀಣ ಕೃಪಾಂಕ - ಕೋರ್ಟ್ ತೀರ್ಪು ಸರ್ಕಾರದ ಕ್ರಮ ಅಗತ್ಯ

ಸುಪ್ರಿಂ ಕೋರ್ಟ್‌ನ ಈ ಒಂದು ತೀರ್ಪು ರಾಜ್ಯದ 13,500 ಸರ್ಕಾರಿ ನೌಕರರ ಭವಿಷ್ಯತ್ತಿಗೆ ಬರಸಿಡಿಲಿನಂತೆ ಎರಗಿದೆ. ಸರ್ಕಾರ ಉದ್ದೇಶ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ 10 ಅಂಕಗಳನ್ನು ನೀಡುವ ಮೂಲಕ 1998-99 ರಲ್ಲಿ ಶಿಕ್ಷಕರು, ಪೋಲೀಸ್ ಹಾಗೂ ನ್ಯಾಯಾದೀಶರುಗಳನ್ನು ಜೆ.ಹೆಚ್.ಪಟೇಲ್ ಸರ್ಕಾರ ಆಯ್ಕೆ ಮಾಡಿತ್ತು. ಈ ಹಿಂದೆಯೂ ಬಂಗಾರಪ್ಪ ಸರ್ಕಾರ 5 ಅಂಕಗಳು, ದೇವೇಗೌಡರ ಸರ್ಕಾರ 15 ಕೃಪಾಂಕ ನೀತಿ ನೇಮಕಾತಿ ಮಾಡಿಕೊಂಡಿತ್ತು. ಮುಂದೆ ಜೆ.ಹೆಚ್.ಪಟೇಲರ ಸರ್ಕಾರವು ನೇಮಕಾತಿ ಮಾಡಿಕೊಂಡ ಬಳಿಕ ಅದರ ವಿರುದ್ಧ 1998 ರಲ್ಲಿ ಬಸವರಾಜ್ ನಾಗನೂರು ಎಂಬುವ ಅಭ್ಯರ್ಥಿ ಕೋರ್ಟಿಗೆ ಮೊರೆಹೋದನು. ಇದನ್ನು ಪುರಸ್ಕರಿಸಿದ ನ್ಯಾಯಾಲಯವು ಗ್ರಾಮೀಣ ಕೃಪಾಂಕವನ್ನು ರದ್ದುಗೊಳಿಸಿ ಕೃಪಾಂಕ ನೀಡುವುದು ಸಂವಿಧಾನದ 14,15, 16ನೇ ಪರಿಚ್ಛೇದಗಳ ಉಲ್ಲಂಘನೆ ಎಂದಿತು. ಬಳಿಕ ಪಟೇಲ್ ಸರ್ಕಾರ ತಡೆಯಾಜ್ಞೆ ತಂದು ಈ 13,500 ನೌಕರರನ್ನು ನೇಮಕಾತಿ ಮಾಡಿಕೊಂಡಿತ್ತು. (ಕೋರ್ಟ್ ಆದೇಶ ವ್ಯತಿರಿಕ್ತವಾದರೆ ರದ್ದಾಗುವ ಮುಚ್ಚಳಿಕೆ ಬರೆಸಿಕೊಂಡು) ಪುನಃ ಈ ಪ್ರಕರಣ ಸುಪ್ರಿಂ ಕೋರ್ಟ್ ಮೆಟ್ಟಿಲು ಹತ್ತಿ ಈಗ ತೀರ್ಪು ಹೊರಬಿದ್ದಿದೆ. ತನ್ನ ಆಜ್ಞೆ ಜಾರಿಗೊಳಿಸಬೇಕೆಂದು ತಾಕೀತು ಮಾಡಿದೆ.

ಇಂದಿನ ಆರ್ಥಿಕ - ಸಾಮಾಜಿಕ ಪರಿಸ್ಥಿತಿಯಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಕೃಪಾಂಕ ನೀಡುವುದು ಸರಿಯಾದ ಕ್ರಮ. ಹಿಂದೆ ಕೋರ್ಟ್ ತೀರ್ಪು ಬಂದಾಗ ಈ ಕ್ರಮ ಉಳಿಸಿಕೊಳ್ಳಬೇಕೆಂದು ರಾಜ್ಯದಾದ್ಯಂತ ವಿದ್ಯಾರ್ಥಿಗಳು-ಯುವಜನರು ಹೋರಾಟಕ್ಕೆ ಇಳಿದಿದ್ದರು. ಆಗ ಸರ್ಕಾರವೇ ಒಂದು ಸುಗ್ರೀವಾಜ್ಞೆ ಹೊರಡಿಸಿ, ಸಂವಿಧಾನದ ತಿದ್ದುಪಡಿಗೆ ಪ್ರಯತ್ನಿಸಬೇಕೆಂದೂ ಹಾಗೂ ತಕ್ಷಣದ ಪರಿಹಾರವಾಗಿ ನೇಮಕಾತಿಯಲ್ಲಿ ಒಂದಿಷ್ಟು ಶೇಕಡಾ ಹುದ್ದೆ ಗ್ರಾಮೀಣರಿಗೆ ಮೀಸಲಿಡಲು ಸೂಚಿಸಲಾಗಿತ್ತು. ಕೃಷ್ಣರ ಸರ್ಕಾರ ಶೇ.10 ಸ್ಥಾನ ಮೀಸಲಿಟ್ಟಿತ್ತು. ಆದರೆ ಶಾಶ್ವತವಾಗಿ ಈ ಸಮಸ್ಯೆಯ ಇತ್ಯರ್ಥಕ್ಕೆ ಎಷ್ಟು ಒತ್ತಾಯಿಸಿದರೂ ಮುಂದಾಗಲಿಲ್ಲ. ಅಂತಿಮವಾಗಿ ಸರ್ಕಾರದ ನಿರ್ಲಕ್ಷತನದಿಂದ ಈಗ ಗ್ರಾಮೀಣ ಪ್ರದೇಶದಿಂದ ಬಂದ ಈ ನೌಕರರ ಭವಿಷ್ಯತ್ತಿಗೆ ಕುತ್ತು ಬಂದಿದೆ. ಸರ್ಕಾರ ಈಗಲಾದರೂ ತಕ್ಷಣದಲ್ಲಿ ಕಾರ್ಯ ಪ್ರವೃತ್ತರಾಗಬೇಕು. ಆದರೆ ಕಾಂಗ್ರೆಸ್-ರಾಜ್ಯ ಸರ್ಕಾರವಾಗಲಿ, ಬಿಜೆಪಿಯ ಕೇಂದ್ರ ಸರ್ಕಾರವಾಗಲಿ ಹೊಣೆಗಾರಿಕೆ ಮರೆತಿವೆ. ರಾಜ್ಯದ ಸಂಸತ್ ಸದಸ್ಯರೂ, ಸಚಿವರೂ ಎಳ್ಳಷ್ಟು ಈ ಪ್ರಶ್ನೆ ಬಗ್ಗೆ ಚಿಂತಿತರಾಗಿಲ್ಲ. ಪ್ರಯತ್ನವನ್ನು ಮಾಡಲೇ ಇಲ್ಲ. ಬಹುಶಃ ವಿಶ್ವಬ್ಯಾಂಕ್ ನಿರ್ದೇಶನದಂತೆ ಉದ್ಯೋಗ ಕಡಿತದ ನೀತಿ ಜಾರಿಗೊಳಿಸುತ್ತಿರುವ ಎರಡೂ ಸರ್ಕಾರಗಳೂ ಈ ತೀರ್ಪು ಖುಷಿ ತಂದಿರಬಹುದೇನೋ


ಇಂತಹ ಸನ್ನಿವೇಶದಲ್ಲಿಯೂ ಸರ್ಕಾರ ವಿಳಂಬಿಸದೇ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು. ಮುಖ್ಯವಾಗಿ ಸುಗ್ರೀವಾಜ್ಞೆ ತಂದು ಸಂವಿಧಾನದ ತಿದ್ದುಪಡಿಗೆ ಮುಂದಾಗಬೇಕು. ಅದಕ್ಕಾಗಿ ಎಲ್ಲರೂ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಹೋರಾಟ ರೂಪಿಸಬೇಕು.

ಈ ವಾರ ಕರ್ನಾಟಕ ಒಂದು ನೋಟ —— ಎಸ್.ವೈ.ಗುರುಶಾಂತ್

ಕೃಷ್ಣರಿಗೆ ವಿಶ್ವಬ್ಯಾಂಕ್ ತಾಕೀತು

ವಿಶ್ವಬ್ಯಾಂಕ್‌ನ ಅಧಿಕಾರಿಗಳು ಕೃಷ್ಣರವರ ಸರ್ಕಾರವನ್ನು ದಬಾಯಿಸಿದ್ದಾರೆ. ತಮ್ಮ ನಿರ್ದೇಶನಗಳನ್ನು ವಿದ್ಯುತ್ ರಂಗದಲ್ಲಿ ಹೇಳಿದಂತೆ ಜಾರಿಗೊಳಿಸಿಲ್ಲ ಎಂಬುದು ಅವರ ತಾಕೀತು. ಅಂದರೆ ದರಗಳನ್ನು ಹೆಚ್ಚಿಸುವುದು, ಅಗ್ಗದರದಲ್ಲಿ ವಿದ್ಯುತ್ ರಂಗ ಮಾರುವುದು.

ವಿದ್ಯುತ್ ಕ್ಷೇತ್ರದ ತೀವ್ರ ಖಾಸಗೀಕರಣಕ್ಕೆ ಕೃಷ್ಣರ ಸರ್ಕಾರ ಆ ದಿಕ್ಕಿನಲ್ಲಿಯೇ ನೀತಿ ನಿರೂಪಿಸಿದ್ದವಾಗಿದ್ದರೂ ಜನತೆಯ ಪ್ರತಿರೋಧದಿಂದಾಗಿ ಕೊಂಚ ಹಿಂದೆ ಸರಿಯಲೇಬೇಕಾಗಿ ಬಂದಿದೆ. ಆದರೆ ವಿಶ್ವಬ್ಯಾಂಕ್ ಹೇಳುತ್ತಿರುವುದು ತನ್ನ ನಿರ್ದೇಶನ ಜಾರಿಯಾಗದಿದ್ದಲ್ಲಿ ಯಾವುದೇ ಸಾಲದ ಕಂತು ಕೊಡಲಾಗದು ಎಂದು ಬೆದರಿಸಿದೆ. ಒಂದು ಸಾರ್ವಭೌಮ ಸರ್ಕಾರದ ಮೇಲಿನ ಧಾಳಿ ಇದು. ಆದರೆ ಕೃಷ್ಣರಿಗೆ ಹಾಗೆ ಅನ್ನಿಸುತ್ತಿಲ್ಲ. ಆ ನೀತಿಗಳ ಜಾರಿಗೆ ಕ್ರಮವಹಿಸುವುದರತ್ತ ಸರ್ಕಾರ ಮಗ್ನವಾಗಿದೆ. ಇತ್ತ ಚುನಾವಣೆಯ ತಂತ್ರದಲ್ಲಿ ಜನರನ್ನು ವಿರೋಧ ಕಟ್ಟಿಕೊಳ್ಳಬಾರದೆಂಬ ಆಶೆ. ಆದರೆ ವಿಶ್ವಬ್ಯಾಂಕ್‌ನ ಶರತ್ತಿನ ಸಖ್ಯ ತೊರೆಯದ ನಿರ್ಧಾರ ಇವೆರಡೂ ಜೊತೆಗೆ ಹೋಗಲು ಸಾಧ್ಯವಿಲ್ಲ. ಸಂಘರ್ಷ ಅನಿವಾರ್ಯವಾಗುತ್ತದೆ. ಈಗಾಗಲೇ ಕೆ.ಪಿ.ಟಿ.ಸಿ.ಎಲ್.ರವರು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಮುಂದೆ ದರ ಏರಿಕೆಗೆ ಅರ್ಜಿ ಹಾಕಿ ಕುಳಿತಿದ್ದಾರೆ. ಜನರ ಮೇಲೆ ಮತ್ತೇ ಧಾಳಿ ನಡೆಯುವುದು ಖಂಡಿತ. ಆದ್ದರಿಂದ ಈಗಿನ ಚಳುವಳಿ ಇನ್ನೂ ವಿಸ್ತಾರ ಗೊಂಡು ಪ್ರಬಲವಾಗಿ ನಡೆಯಬೇಕಿದೆ.



ಭಟ್ಕಳ: ಮತಾಂಧರ ಆರ್ಭಟ

ಮುಂದಿನ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಪೂರ್ವೋಪಾದಿ ಕೆಲಸ ಆರಂಭಸಿರುವ ಸಂಘ ಪರಿವಾರ ಭಟ್ಕಳದಲ್ಲಿ 'ಹಿಂದೂ ಸಮಾಜೋತ್ಸವ' ಹೆಸರಿನಲ್ಲಿ ಕಾರ್ಯಕ್ರಮ ರೂಪಿಸಿದ್ದು ತಿಳಿದಿದೆ. ಈ ಸಮಾವೇಶಕ್ಕೆ ಕುಖ್ಯಾತ ತೊಗಾಡಿಯಾ ಬರುವರೆಂದು ಭಾರೀ ಪ್ರಚಾರ ನಡೆಸಲಾಗಿತ್ತು. ಆದರೆ ಬರಲಿಲ್ಲ. ಸುತ್ತಲಿನ ಆರೇಳು ಜಿಲ್ಲೆಗಳಿಂದ 50 ಸಾವಿರ ಜನ ಸೇರಿಸಲಾಗುವುದೆಂದೂ ಹೇಳಿದ್ದರೂ ಏಳೆಂಟು ಸಾವಿರ ದಾಟಲಿಲ್ಲ. ಆದರೆ ಭಟ್ಕಳದಂತಹ ಸೂಕ್ಷ್ಮ ಪ್ರದೇಶದಲ್ಲಿ ವಿಶ್ವ ಹಿಂದೂ ಪರಿಷತ್ ಬಜರಂಗದಳದ ಜಗದೀಶ್ ಕಾರಂತನ ದ್ವೇಷಪೂರಿತ ಸುಳ್ಳುಗಳ ಸರಮಾಲೆಯ ಭಾಷಣವೇ ಕಿಚ್ಚು ಹಚ್ಚಲು ಸಾಕಾದೀತು. ಅನ್ಯಧರ್ಮೀಯರನ್ನು ಅವಹೇಳನ ಮಾಡಬಾರದೆಂದು ಪೋಲೀಸರು ಕಟ್ಟಾಜ್ಞೆ ಮಾಡಿದ್ದರೂ ಬಾಯಿಗೆ ಬಂದದ್ದು ಮಾತನಾಡಿದ್ದು ಆಯಿತು.

ಪೋಲೀಸರು ಕಾರಂತನಿಂದ ಎಚ್ಚರಿಕೆಯನ್ನು ಕೇಳಬೇಕಾಯಿತು. ಅಷ್ಟು ಮಾತ್ರವಲ್ಲ ಈ ಸಮಾಜೋತ್ಸವಕ್ಕೆ ಹಣ ನೀಡಿದ ಕಾಂಗ್ರೆಸ್ಸಿಗರೂ ಬೈಸಿಕೊಂಡಿದ್ದಾರೆ. ಒಂದು ವಿಶೇಷ ಸಂಗತಿಯೆಂದರೆ ಚಿತ್ರಾಪುರದ ಸದ್ಯೋಜಾತ ಶಂಕರಾಶ್ರಮ ಮಹಾಸ್ವಾಮೀಜಿಯವರು ಇಂತಹ ದುರುದ್ದೇಶದ, ದ್ವೇಷದ ಸಮಾವೇಶದಲ್ಲಿ ಭಾಗವಹಿಸಿದ್ದು, ಸಾಧಾರಣ ಇಂತಹದ್ದನ್ನು ಒಪ್ಪದ ಅವರು ಇಂತಹ ವೇದಿಕೆಯಲ್ಲಿ ಯಾಕೆ ಭಾಗವಹಿಸಿ ಅದೂ ಆಶೀರ್ವಚನ ನೀಡಿದರು ಎಂಬುದು ಬಹುತೇಕರ ಪ್ರಶ್ನೆ.

ಅಂತಹವರನ್ನು ಬಜರಂಗದಳದ ಕ್ರಿಮಿನಲ್ ಪಡೆ ಈಗಲೂ ಬೆದರಿಸುತ್ತಿದೆ. ಸಿಪಿಐ(ಎಂ) ನ ಜಿಲ್ಲಾ ಕಾರ್ಯದರ್ಶಿ, ರಾಜ್ಯಸಮಿತಿ ಸದಸ್ಯ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಶಾಂತ ರಾಮ ನಾಯಕ್‌ಗೆ ಕೊಲೆ ಬೆದರಿಕೆ ಹಾಕಿದ್ದಾರೆ. ಯಲ್ಲಾಪುರಕ್ಕೆ ಬಂದರೆ ಕೈಕಾಲು ಮುರಿಯುವುದಾಗಿ ಹೇಳಿದ್ದಾರೆ. ಇದು ಉಗ್ರಖಂಡನೀಯ. ಇಂತಹ ಶಕ್ತಿಗಳಿಗೆ ಜನರೇ ತಕ್ಕ ಉತ್ತರ ಹೇಳಲೇಬೇಕಾಗುತ್ತದೆ. ಪೋಲೀಸರಿಗೂ ದೂರು ನೀಡಲಾಗಿದೆ.

ವಿ.ಹೆಚ್.ಪಿ ಬಜರಂಗದಳಗಳ ಕೃತ್ಯಗಳಿಗೆ ಪ್ರತಿಕ್ರಿಯೆಯಾಗಿ ಮುಸ್ಲಿಂ ಮೂಲಭೂತವಾದಿಗಳೂ ತಮ್ಮದೂ ಒಂದು 'ಜಾತ್ರೆ' ನಡೆಸುತ್ತಿರುವುದು ಕೋಮುವಾದಿ ಮೂಲಭೂತವಾದಿ ಅವಳಿ-ಜವಳಿ ಸಹೋದರರು ಹೇಗೆ ಪರಸ್ಪರ ಪ್ರತಿಕ್ರಿಯಿಸುತ್ತಾರೆ ಹಾಗೂ ಅವಲಂಬಿತರು ಎಂಬುದನ್ನು ತೋರಿಸುತ್ತದೆ.

ಆದರೆ ಜನತೆ ಹಿಂದೂ ಕೋಮುವಾದಿಗಳಿಗಾಗಲಿ, ಮುಸ್ಲಿಂ ಮೂಲಭೂತವಾದಿಗಳಿಗಾಗಲಿ, ಇಂಬು ಕೊಡಬೇಕಿಲ್ಲ. ಇಬ್ಬರನ್ನು ತಿರಸ್ಕರಿಸಬೇಕು. ಶಾಂತಿ- ಸೌಹಾರ್ದತೆ ಕಾಪಾಡಿ ದೇಶ ಉಳಿಸಲು ಪ್ರಗತಿಪರ, ಸೆಕ್ಯುಲರ್ ಶಕ್ತಿಗಳ ಜೊತೆಗೆ ನಿಲ್ಲಬೇಕು. ಅಂತಹ ಒಂದು ಪ್ರಯತ್ನ ಈ ಕೂಡಲೇ ಪ್ರಗತಿಪರ ಶಕ್ತಿಗಳಿಂದ ಆಗಬೇಕಿದೆ.

ಓಟುಗಳು ಬೆಸೆಯುತ್ತಿರುವ ಬಸವ ಬಾಂಧವ್ಯ

ಈ ಸಲದ ಬಸವ ಜಯಂತಿ ಬಹಳ ರಂಗೇರಿತ್ತು. ಬಸವ ಪ್ರಿಯರು ಮಾತ್ರವಲ್ಲ ಬಸವ ವಿರೋಧಿಗಳೂ ಹಾರ ಹಿಡಿದು ಬಸವಣ್ಣನನ್ನು ಹಾಗೂ ಅನುಯಾಯಿಗಳನ್ನು ಅಪಹರಿಸಲು ಯತ್ನಿಸಿದರು. ದೆಹಲಿಯಲ್ಲಿ ಬಸವಣ್ಣನ ಪ್ರತಿಮೆಯನ್ನು ಅನಾವರಣಗೊಳಿಸಿದ್ದು, ಕೃಷ್ಣರವರು ಮುಂದೆ ನಿಂತಿದ್ದು ಒಂದು ಸಂಗತಿಯೆಂದರೆ, ಸ್ವತಹ ಪ್ರಧಾನಿ ವಾಜಪೇಯಿಯವರು ಬೆಂಗಳೂರಿನ ಹೆಚ್‌ಎಎಲ್ ಕಾರ್ಯಕ್ರಮವೊಂದಕ್ಕೆ ಬಂದಾಗ ಬಸವಣ್ಣನ ಪ್ರತಿಮೆ ಹಾರಹಾಕಿದ್ದು ಇನ್ನೊಂದು ಸೋಜಿಗ. ವೈದಿಕಶಾಹಿ ವಾಜಪೇಯಿ ಬಂಡಾಯಗಾರ ಬಸವಣ್ಣಗೆ ಹಾರ ಹಾಕಿದ್ದು, ಲಿಂಗಾಯತರ ಓಟು ಗಳಿಸುವ ಇರಾದೆ ಆಗಿರದೆ ಇನ್ನೇನಿರಲು ಸಾಧ್ಯ? ವಾಜಪೇಯಿ ದೆಹಲಿಗೆ ವಾಪಾಸಾದ ನಂತರ 'ಶುದ್ದೀಕರಣ ಯಜ್ಞ' ಮಾಡಿಕೊಂಡರೆ? ಅದಂತೂ ತಿಳಿದುಬಂದಿಲ್ಲ. ಆದರೆ ಜನರ ಕಣ್ಣಿಗೆ ಎರಚಿದ ಮಣ್ಣು ಇನ್ನು ಹುಡಿಹಾರುತ್ತಿದೆ ಮಾತ್ರ'

ದುಡ್ಡು ಕೊಟ್ಟು ಮುಖಕ್ಕೆ ಉಗಿಸಿಕೊಂಡ ಕಾಂಗ್ರೆಸ್ಸಿಗರು!

ಭಟ್ಕಳದಲ್ಲಿ ಹಿಂದೂ ಸಮಾಜೋತ್ಸವ. ಕಾಂಗ್ರೆಸ್ ಪಕ್ಷ ಹಾಗೂ ಆ ಪಕ್ಷದ ಬೆಂಬಲಿಗ ಅಲ್ಪ ಸಂಖ್ಯಾತರ ಟೀಕೆಗೆ ಕಾಂಗ್ರೆಸ್ ಪಕ್ಷವೇ ವೇದಿಕೆ ನಿರ್ಮಿಸಿಕೊಟ್ಟಂತಿತ್ತು.

ಭಟ್ಕಳದಲ್ಲಿ ಜರುಗುವ ಹಿಂದು ಸಮಾಜೋತ್ಸವ ಅದು ಹಿಂದುಗಳ ನಡುವೆ ಅಸಮಾನತೆ, ಜಾತಿ ಪದ್ಧತಿ, ಒಕ್ಕಟ್ಟಿನ ಬಗ್ಗೆ ಇಲ್ಲಿ ಯಾರೂ ಹೆಚ್ಚು ಕಳಕಳಿ ವ್ಯಕ್ತಪಡಿಸಲಿಲ್ಲ. ಯಾಕೆಂದರೆ ಇದು ಅವರ ಕಾಳಜಿಯೂ ಆಗಿರಲಿಲ್ಲ. ಭಟ್ಕಳ ಕ್ಷೇತ್ರದಲ್ಲಿ ಬಿಜೆಪಿ ಬಲಪಡಿಸುವ ಒಂದು ವೇದಿಕೆ ಇದಾಗಿತ್ತು. ಹೀಗಾಗಿ ಈ ವೇದಿಕೆಗೆ ಹಿಂದು ಧರ್ಮ ಎಂಬ ಹಿನ್ನೆಲೆ ತೋರಿಸಿ ಕೆಲವು ಅತೃಪ್ತ ಕಾಂಗ್ರೆಸ್ಸಿಗರು, ಶಾಸಕ ಜೆ.ಡಿ.ನಾಯ್ಕ ವಿರೋಧಿಗಳು ಸ್ವಾಗತ ಸಮಿತಿಯಲ್ಲಿ ಸೇರಿಕೊಂಡರು. ಸಾಕಷ್ಟು ಸಹಾಯವನ್ನೂ ಮಾಡಿದ್ದರು. ಅದರೆ ಇಲ್ಲಿ ನಡೆಯುತ್ತಿರುವುದು ಹಿಂದು ಸಮಾಜೋತ್ಸವವಲ್ಲ, ಇದು ಕಾಂಗ್ರೆಸ್ ವಿರೋಧಿ ಸಮ್ಮೇಳನವೆಂಬಂತೆ ಸ್ವಾಮೀಜಿಗಳನ್ನು ಬಿಟ್ಟು ಉಳಿದ ಜಗದೀಶ ಕಾರಂತ ಮತ್ತು ಇತರರು ಹಿನಾಯವಾಗಿ ಹಿಯಾಳಿಸಿದರು.

ಈ ದೇಶ ಒಡೆದವರು ಕಾಂಗ್ರೆಸ್ಸಿಗರು, ಜನರ ಭಾವನೆಯನ್ನು ಬೇರ್ಪಡಿಸಿದವರು ಕಾಂಗ್ರೆಸ್ಸಿಗರು, ಡೋಂಗಿ ಜಾತ್ಯಾತೀತವಾದಿಗಳು ಕಾಂಗ್ರೆಸ್ಸಿಗರು, ದೇಶದ ಮಹಾಭ್ರಷ್ಟರು ಕಾಂಗ್ರೆಸ್ಸಿಗರು, ಕಾಶ್ಮೀರಿ ಹಿಂದುಗಳ ಹತ್ಯೆ ಸಂಚಿನಲ್ಲಿ ಕಾಂಗ್ರೆಸ್ಸಿಗರು!



ಹೀಗೆ ಕಾಂಗ್ರೆಸ್ ಪಕ್ಷವನ್ನು ಈ ಕಾರಂತರು ತೀರಾ ಕನಿಷ್ಠವಾಗಿ ಟೀಕಿಸಿದರು. ಅದರೆ ಹೀಗೆ ಟೀಕಿಸುವಾಗ ಕೆಲವು ಕಾಂಗ್ರೆಸ್ ಧುರೀಣರು ಕಾಣೆಯಾಗಿದ್ದರು.

ಕಾಂಗ್ರೆಸ್ ನಂತರ ಅವರು ಟೀಕೆ ಮಾಡಿದ್ದು ಅಲ್ಪಸಂಖ್ಯಾತರನ್ನು. ಅನಂತರ ಪೋಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದರು. ಇಷ್ಟೆಲ್ಲಾ ಕಾಂಗ್ರೆಸ್ ವಿರೋಧಿ ನಿಲುವನ್ನು ಈ ವೇದಿಕೆಯಲ್ಲಿ ಟೀಕಿಸಿದ್ದನ್ನು ಕಂಡರೆ ಈ ಸ್ವಾಗತ ಸಮಿತಿಯಲ್ಲಿದ್ದ ಕಾಂಗ್ರೆಸ್ಸಿಗರು ದುಡ್ಡುಕೊಟ್ಟು ತಮ್ಮ ಕಾಂಗ್ರೆಸ್ ಪಕ್ಷದ ಮೇಲೆ ಉಗುಳಿಸಿ ತೃಪ್ತಿಪಟ್ಟರೋ ಅಥವಾ ಉಗುಳಿಸಿಕೊಂಡರೋ ತಿಳಿದಿಲ್ಲ. ಆದರೆ ಈ ಹಿಂದು ಸಮಾಜೋತ್ಸವದಲ್ಲಿ ಭಾಗವಹಿಸಿ ಬೆಂಬಲಿಸಿ ತಮ್ಮ ಪಕ್ಷದ ಟೀಕೆಗೆ ಕಾರಣರಾದ ಧುರೀಣರ ಮೇಲೆ ಕಾಂಗ್ರೆಸ್ ಹೈಕಮಾಂಡ್ ಕ್ರಮ ತೆಗೆದುಕೊಳ್ಳಲಿದೆಯೆ?

(ಕರಾವಳಿ ಮುಂಜಾವು ದಿನಪತ್ರಿಕೆಯಿಂದ)

ಟಿಪ್ಪು ಸುಲ್ತಾನ್ ದೇಶದ್ರೋಹಿಯೆಂದು ಸಂಘ ಪರಿವಾರ ವ್ಯವಸ್ಥಿತವಾದ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಬ್ರಿಟಿಷರ ಈ ವಿನಮ್ರ ಸೇವಕರ ವಿಕೃತ ವಾದಗಳನ್ನು ಬಯಲಿಗಿಟ್ಟು, ಆಧುನಿಕ ಕನ್ನಡ ನಾಡಿನ ನಿರ್ಮಾಣಕ್ಕೆ ಅಡಿಇಟ್ಟ, ದೇಶಪ್ರೇಮಿಯ ನೈಜ ಪಾತ್ರವನ್ನು ತೆರೆದಿಟ್ಟು ಕೋಮುವಾದಿಗಳ ಅಜೆಂಡಾಕ್ಕೆ ಪ್ರತಿರೋಧ ಒಡ್ಡಿದ ಐತಿಹಾಸಿಕ ಕಾರ್ಯಕ್ರಮದ ವರದಿಯಿಲ್ಲಿದೆ.



ಇತಿಹಾಸ ತಿರುಚುವ ವಿಕೃತ ಪ್ರಯತ್ನಗಳಿಗೆ ಪ್ರತಿರೋಧನ

ಶ್ರೀರಂಗಪಟ್ಟಣದಲ್ಲಿ ಟಿಪ್ಪು ಸಂಸ್ಮರಣೆ ಹಾಗೂ ಕೋಮು ಸೌಹಾರ್ದ ಸಮಾವೇಶ

ಸೌಹಾರ್ದ ಸಾಗರಕ್ಕೆ ಸಾವಿರಾರು ತೊರೆಗಳು ಎಂಬಂತೆ ಮಹಾನ್ ಸ್ವಾಭಿಮಾನಿ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕಡು ವಿರೋಧಿ, ದೇಶಪ್ರೇಮಿ, ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೀಜ ನೆಟ್ಟ ಅಪ್ರತಿಮ ಕಲಿ ಟಿಪ್ಪು ಸುಲ್ತಾನ್ ಸಂಸ್ಮರಣೆಯನ್ನು ಕೋಮು ಸೌಹಾರ್ದ ಸಮಾವೇಶವನ್ನಾಗಿ ಆಚರಿಸಿದ ಸಂದರ್ಭ ಶ್ರೀರಂಗಪಟ್ಟಣದಲ್ಲಿ ಮಾನವತಾವಾದಿಗಳ ಜಾತ್ರೆಯಾಗಿ ಮಾರ್ಪಟ್ಟಿತು. ಮತಾಂಧ ಕೋಮುವಾದಿಗಳು, ಕೋಮುದಳ್ಳುರಿಯನ್ನು ಪ್ರಬಲಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ಕೋಮು ಸೌಹಾರ್ದ ವೇದಿಕೆಯು 'ಕೋಮುವಾದಕ್ಕೆ ನಮ್ಮ ವಿರೋಧ', 'ಸೌಹಾರ್ದತೆಯೇ ನಮ್ಮ ಆಧಾರ' ಎಂಬ ಧ್ಯೇಯ ವಾಕ್ಯದೊಂದಿಗೆ ಮಾನವತೆಯ ಆಶಯದೊಂದಿಗೆ 'ಜಾತಿ ಬಿಡಿ, ಮತ ಬಿಡಿ, ಮಾನವೀಯತೆಗೆ ಜೀವ ಕೊಡಿ' ಎಂಬ ಘೋಷಣೆ ಸಹಸ್ರಾರು ಜನರಿಂದ ಮುಗಿಲು ಮುಟ್ಟಿತ್ತು. ಈ ಘೋಷಣೆಯ ಶಬ್ದಕ್ಕೆ ಕೋಮುವಾದಿಗಳು ಬೆಚ್ಚಿ ಬೀಳದೆ ಇರಲಿಲ್ಲ.

ಟಿಪ್ಪು ಸುಲ್ತಾನನ ಗೋರಿ (ಸಮಾಧಿ) ಯ ಸ್ಥಳದಲ್ಲಿ ರ‍್ಯಾಲಿಯನ್ನು ಉದ್ಘಾಟಿಸಿ ಮಾತನಾಡಿದ ವಿಚಾರವಾದಿಗಳಾದ ಪ್ರೊ ಜಿ.ಕೆ.ಗೋವಿಂದರಾವ್ ಮತೀಯವಾದಿಗಳನ್ನು ಹೊರಗೆ ಹಾಕಬೇಕು. ಅವರೀಗ ಶಿಕ್ಷಣ, ವಸತಿ ಉದ್ಯೋಗ, ಬಡತನ, ಈ ವಿಚಾರಗಳ ಬಗ್ಗೆ ಮಾತನಾಡುವುದಿಲ್ಲ. ಬದಲಿಗೆ ಮಸೀದಿ ಕೆಳಗೆ ದೇವಸ್ಥಾನವಿತ್ತು, ಆ ದೇವಸ್ಥಾನ ಲೂಟಿ ಮಾಡಿದ್ದಾರೆ. ಧೇವರು ಧರ್ಮ ಎಂದು ಜನರನ್ನು ಇಬ್ಭಾಗ ಮಾಡಿ ದೇಶದಲ್ಲಿ ಅಶಾಂತಿ ಉಂಟು ಮಾಡುವುದೇ ಅವರ ಕೆಲಸವಾಗಿದೆ ಎಂದರು.

ಬ್ರಿಟೀಷರ ಬೂಟು ಪಾಲಿಷು ಮಾಡುತ್ತಿದ್ದವರಿಂದು ಟಿಪ್ಪುವನ್ನು

ವರದಿ - ಎನ್.ಎಲ್.ಭರತರಾಜ್, ಮಂಡ್ಯ

ಟೀಕಿಸುತ್ತಿದ್ದಾರೆ. ಟಿಪ್ಪುವಿನ ಮಂತ್ರಿಮಂಡಲದಲ್ಲಿ ಹಾಗೂ ಸೇನಾಧಿಪತಿಗಳಲ್ಲಿ ಬಹುತೇಕರು ಹಿಂದೂ ಗಳಾಗಿದ್ದರು ಎಂಬುದನ್ನು ಮರೆಯಬಾರದು. ಅದರೆ ಹಿಂದುಗಳು ಒಂದು ಎನ್ನುವ ವಾಜಪೇಯಿ ಸಂಪುಟದಲ್ಲಿ ಜಾತ್ಯಾತೀತ ತತ್ವ ಎಷ್ಟು ಪಾಲನೆಯಾಗಿದೆ? ಎಷ್ಟು ಮಂದಿ ಸಂಪುಟದಲ್ಲಿ ಅಲ್ಪಸಂಖ್ಯಾತರಿದ್ದಾರೆ? ಬ್ರಾಹ್ಮಣೇತರರಿಗೆ ಎಷ್ಟು ಪ್ರಾತಿನಿಧ್ಯ ಸಿಕ್ಕಿದೆ. ಸಂಘ ಪರಿವಾರದವರು ಇದಕ್ಕೆ ಉತ್ತರ ಹೇಳಲಿ.

ಬಿಜೆಪಿ ಶಾಸಕ ಗೋ.ಮಧುಸೂಧನ, ಮುತಾಲಿಕ್‌ರಂಥವರನ್ನು ದೂಕಜಿಲ್ಲಾ ಕೋಮು ಸೌಹಾರ್ದ ವೇದಿಕೆಯು ದೂರವಿಡಬೇಕೆಂದು ಜನವಾಹಿನಿ ಪತ್ರಿಕೆಯ ಸುದ್ದಿ ಸಂಪಾದಕ ಸನತಕುಮಾರ್ ಬೆಳಗಲಿರವರು ಟಿಪ್ಪು ಸಂಸ್ಮರಣೆ ಕಾರ್ಯಕ್ರಮದ ಭಾಗವಾದ ರ‍್ಯಾಲಿ ಉದ್ಘಾಟನೆ ಸಭೆಯಲ್ಲಿ ಮಾತನಾಡಿದರು.

ಗಾಂಧೀಜಿಯನ್ನು ದೇಶದ್ರೋಹಿ ಎಂದು ಗುಂಡಿಕ್ಕಿ ಕೊಂದವರೇ ಟಿಪ್ಪುವನ್ನು ಮತಾಂಧು ಕನ್ನಡ ವಿರೋಧಿ ಎಂದು ಕರೆದರು. ಮತಾಂಧರ ಕೈಗೆ ದೇಶ ಯಾವುದೇ ಕಾರಣಕ್ಕೂ ಹಸ್ತಾಂತರವಾಗಬಾರದು ಎಂದು ಪ್ರೋ ಕೆ.ರಾಮದಾಸ್ ಎಚ್ಚರಿಸಿದರು. ಈ ವೇದಿಕೆಯಲ್ಲಿ ಗೌರಿ ಲಂಕೇಶ್ ಪ್ರೊ. ಲೋಹಿತಾಶ್ವ, ಪ್ರೊ. ಮಲ್ಲಿಕಾ ಘಂಟಿ, ಕರಿಮುದ್ದೀನ್, ಹೆಚ್.ಎಲ್.ಕೇಶವಮೂರ್ತಿ ಸಿ.ಪಿ.ಎಂ. ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್, ಪ್ರೊ ಕೆ.ಫಣಿರಾಜ್, ಹಲಗೇಗೌಡ, ಸಿ.ಜಿ.ಕೃಷ್ಣಸ್ವಾಮಿ, ಸುನಂದಜಯರಾಂ, ಕಲಿಂ ಉಲ್ಲಾ ಮುಂತಾದವರು ಭಾಗವಹಿಸಿದ್ದರು.

> **ಧರ್ಮ**
>
> ಹಿಂಸೆಯೇ ಧರ್ಮಗಳ ತಿರುಳಾಗಿ ಇಂದೆ
> ಸುತ್ತೆಲ್ಲ ನೆತ್ತರಿನ ಹೊಳೆಯನ್ನು ಕಂಡೆ
> ಕಡುಕ್ರೂರ ಮಂದಿಗಳ ಕೈಯಲ್ಲಿ ಧರ್ಮ
> ಸಿಕ್ಕಿಂದು ಸತ್ತಿಹುದು ಧರ್ಮಗಳ ಮರ್ಮ
>
> \- ವಿಡಂಬಾರಿ

ಕೋಮುವಾದಿಗಳು ಸುಳ್ಳನ್ನು ಹೇಳುವುದರಲ್ಲಿ ಗೊಬೆಲ್ಸ್‌ನ ಮೀರಿಸುತ್ತಾರೆ ಇದೆ ಅವರಿಗೆ ಜಪವಾಗಿಬಿಟ್ಟಿದೆ. ಹಿಂದೂ ಧರ್ಮ ಎಂದರೆ ಮುಂದೆ ಇರುವವರನ್ನು ಹಿಂದಕ್ಕೆ ಹಾಕಿ ಮುಂದಕ್ಕೆ ಹೋಗುವುದೇ ಇವರ ಧರ್ಮ

ಎಂದು ರಾಜ್ಯ ರೈತ ಸಂಘದ ಅಧ್ಯಕ್ಷರಾದ ಕೆ.ಎಸ್.ಪುಟ್ಟಣ್ಣಯ್ಯನವರು ಈ ಸಮಾರಂಭದ ಅತಿಥಿಗಳಾಗಿ ಮಾತ ನಾಡುತ್ತಾ ತಿಳಿಸಿದರು. ಮುಂದುವರಿದು ಮಾತನಾಡುತ್ತಾ ರಂಗನತಿಟ್ಟಿನಲ್ಲಿ ಹಕ್ಕಿಗಳು ಅಮೇರಿಕಾ ಹಕ್ಕಿಗಳನ್ನು ಪ್ರೀತಿ ಮಾಡುತ್ತವೆ, ಸೌದಿ ಅರೇಬಿಯಾದ ಹಕ್ಕಿ ರಂಗನತಿಟ್ಟಿನ ಹಕ್ಕಿಯನ್ನು ಪ್ರೀತಿ ಮಾಡುತ್ತದೆ. ಆದರೇ ಈ ಮನುಷ್ಯರು ಪಕ್ಕದಲ್ಲಿರುವವರನ್ನು ಪ್ರೀತಿ ಮಾಡುವುದಿಲ್ಲ. ಇದೆಂತಹ ದುರಂತ. ನಾವುಗಳು ಇನ್ನು ಮುಂದೆ ಕೋಮುವಾದಿಗಳೇ ನಿಮಗೆ ಗ್ರಾಮದೊಳಗೆ ಪ್ರವೇಶವಿಲ್ಲವೆಂದು ಬೋರ್ಡ್ ಹಾಕಬೇಕೆಂದರು.

ಈ ಸಮಾರಂಭದ ಮತ್ತೊಬ್ಬ ಅತಿಥಿಗಳಾಗಿ ಮಾತನಾಡಿದ ಜಿ.ಎನ್.ನಾಗರಾಜುರವರು, ಸಾರ್ವಕರನ್ನು ವೀರ ಎನ್ನುವವರು ಟಿಪ್ಪುವನ್ನು ದ್ರೋಹಿ ಎನ್ನುತ್ತಾ ದೆಹಲಿಯಲ್ಲಿ ಮೀರಸಾಧಕನ ವಂಶದವರು ಹಾಗೂ ಕಿತ್ತೂರು ರಾಣಿ ಚೆನ್ನಮ್ಮನಿಗೆ ಮೋಸ ಮಾಡಿದ ಮಲ್ಲಪ್ಪಶೆಟ್ಟಿ ವಂಶದವರು ಆಡಳಿತ ನಡೆಸುತ್ತಿದ್ದಾರೆ. ಜರ್ಮನಿಯ ಹಿಟ್ಲರ್ ವಾದಕ್ಕೆ ಚಡ್ಡಿಯನ್ನು ತೊಡಿಸಿ ಹಿಂದುತ್ವ ಎನ್ನುತ್ತಿದ್ದಾರೆ. ಟಿಪ್ಪು ತಂತ್ರಜ್ಞಾನವನ್ನು ಬೆಳೆಸಲು ಅಂದೇ ಪ್ರಾರಂಭ ಮಾಡಿ, ಹಳದಿ ಸಕ್ಕರೆ, ಬಿಳಿಸಕ್ಕರೆ ತಯಾರು ಮಾಡಿಸಲು ಆಲೆಮನೆಯ ನೂರಾರು ಜನರಿಗೆ ತರಬೇತಿ ನೀಡಿದರು. ಮೊಟ್ಟ ಮೊದಲು ಕಾಗದ ತಯಾರು ಮಾಡಿದ, ಗಡಿಯಾರ ತಯಾರು ಮಾಡಿದ, ಹೈದರಾಲಿಯು ತನ್ನ ಮಗನ ಮದುವೆ ಸಂದರ್ಭದಲ್ಲಿ ಏನು ಉಡುಗೊರೆ ಬೇಕೆಂದು ಕೇಳಿದಾಗ, ನನಗೆ ಪುಸ್ತಕ ಭಂಡಾರ ಬೇಕು ಎನ್ನುವ ಮೂಲಕ ಪುಸ್ತಕ ಪ್ರೇಮಿಯಾಗಿದ್ದರೆಂಬುದನ್ನು ಮರೆಯಬಾರದು. ಟಿಪ್ಪುವಿನ ಅನನ್ಯ ಕೊಡುಗೆ

ಈ ಸಮಾರಂಭದಲ್ಲಿ ಲಿಂಗದೇವರು ಹಳೆಮನೆಯವರ ಟಿಪ್ಪುಗಳ ಕುರಿತಾದ ಲಾವಣಿ ಸಂಗ್ರಹದ ಪುಸ್ತಕವನ್ನು ನೀಡುಮಾಮಿಡಿ ಸ್ವಾಮಿಜಿಯವರು ಬಿಡುಗಡೆ ಮಾಡಿದರು. ಈ ಕಾರ್ಯಕ್ರಮಕ್ಕೆ ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕ ಸುಭಾಶ್ ಭರಣಿಯವರು ಶುಭಕೋರಿ ಸಂದೇಶ ಕಳುಹಿಸಿದ್ದರು. ಈ ವೇದಿಕೆಯಲ್ಲಿ ಖ್ಯಾತ ಚಿಂತಕರಾದ ಮುಂಬೈನ ಡಾ. ಅಸ್ಗರ್ ಅಲಿ ಇಂಜಿನಿಯರ್, 'ಅಗ್ನಿ'ವಾರ ಪತ್ರಿಕೆಯ ಸಂಪಾದಕ ಶ್ರೀಧರ, ಕೆ.ಫಣಿರಾಜ್, ದೇವನೂರು ಮಹದೇವ, ಭಾನು ಮುಸ್ತಾಕ್, ಡಾ. ರಹಮತ್ ತರೀಕೆರೆ, ಪ್ರೊ. ವಿ.ಎಸ್.ಶ್ರೀಧರ, ಕಲ್ಯಾಣ ವಿಠ್ಠಲ ಹೆಗ್ಗಡೆ, ಕೆ.ಎಲ್.ಅಶೋಕ್, ಎಂ.ಶ್ರೀನಿವಾಸ್, ಡಾ. ಸಿ.ಬಂದಿಗೌಡ, ಸುನಂದ ಜಯರಾಂರವರು ಉಪಸ್ಥಿತರಿದ್ದರು. ಸಮುದಾಯ, ನಿರಂತರ, ಜನಮನ ಕಲಾ ತಂಡದಿಂದ ಕ್ರಾಂತಿಗೀತೆ ಹಾಡಲಾಯಿತು. ನಿರೂಪಣೆಯನ್ನು ಕೋಮು ಸೌಹಾರ್ದ ವೇದಿಕೆ ಕಾರ್ಯದರ್ಶಿ ಎಂ.ಬಿ. ನಾಗಣ್ಣಗೌಡ ಮಾಡಿದರು. ವಂದನಾರ್ಪಣೆಯನ್ನು ಡಿ.ವೈ.ಎಫ್.ಐ ರಾಜ್ಯ ಸಹ ಕಾರ್ಯದರ್ಶಿ ಎನ್.ಎಲ್.ಭರತರಾಜ್ ನೆರವೇರಿಸಿದರು.



ಧರ್ಮಗಳು ಭಯೋತ್ಪಾದಕ ಸ್ವರೂಪವ ಪಡೆಯುತ್ತಿವೆ

ಸಹಸ್ರಾರು ಜನರ 'ಮಾನವೀಯತೆ ಜಿಂದಾಬಾದ್, ಕೋಮು ಸೌಹಾರ್ದತೆ ಚಿರಾಯುವಾಗಲಿ, ದೇಶದ ಐಕ್ಯತೆ ಎತ್ತಿಹಿಡಿಯುತ್ತೇವೆ, ಕೋಮುವಾದಿಗಳಿಗೆ ಧಿಕ್ಕಾರ' ಎಂಬ ಘೋಷಣೆ ಶ್ರೀರಂಗಪಟ್ಟಣದ ಮನೆ ಮನೆ ಬಾಗಿಲು ತಟ್ಟುತ್ತಾ ಜಿಲ್ಲಾ ಯುವ ಜನ ಇಲಾಖೆಯ ಕ್ರೀಡಾಂಗಣದೊಳಗೆ ಜನ ಸಾಗರ ಹರಿದಿದ್ದು, ಟಿಪ್ಪು ಸಂಸ್ಮರಣೆ ಹಾಗೂ ಕೋಮು ಸೌಹಾರ್ದ ಸಮಾವೇಶದಲ್ಲಿ ರ‍್ಯಾಲಿ ಮುಕ್ತಾಂತರ ಸಾಗುತ್ತಿತ್ತು.

ನಂತರ ಈ ಬಹಿರಂಗ ಸಭೆಯುನ್ನು ನಿಡುಮಾಮಿಡಿ ಮಠದ ಶ್ರೀ ವೀರಭದ್ರ ಚೆನ್ನಮಲ್ಲ ಸ್ವಾಮೀಜಿಗಳು ತಮಟೆ ಬಾರಿಸುವ ಮುಖಾಂತರ ಉದ್ಘಾಟಿಸಿ ಮಾತನಾಡುತ್ತಾ, ಎಲ್ಲ ಧರ್ಮಗಳು ಪ್ರತಿಗಾಮಿಗಳಾಗಿವೆ. ಧರ್ಮಗಳು ಭಯೋತ್ಪಾದಕ ಸ್ವರೂಪವನ್ನು ಪಡೆಯುತ್ತಿರುವುದು ವಿಷಾದನೀಯ ಎನ್ನುತ್ತಾ, ಹಿಂದೂ, ಮುಸ್ಲಿಂ, ಕ್ರಿಸ್ತ ಧರ್ಮಗಳು ನಮ್ಮ ಧರ್ಮವೇ ಶ್ರೇಷ್ಠ ಇತರ ಧರ್ಮಗಳು ತುಚ್ಛ ಎಂಬ ಭಾವನೆ ತಳೆದಿರುವುದು ಧರ್ಮ ಧರ್ಮಗಳ ನಡುವೆ ಸಂಘರ್ಷ ಏರ್ಪಟ್ಟಿದೆ ಎಂದರು. ಮಹಾತ್ಮಾಗಾಂಧಿ ಎಂದೂ ಸಹ ರಾಜಕೀಯಕ್ಕೆ ಧರ್ಮವನ್ನು ತರುವ ಪ್ರಯತ್ನ ಮಾಡಲಿಲ್ಲ. ಹಿಂದೂ ಮತಾಂಧತೆಯ ಜೊತೆ ಅವರು ಎಂದೂ ಗುರ್ತಿಸಿಕೊಳ್ಳಲಿಲ್ಲ ಎನ್ನುತ್ತಾ ಹಿಂದೂ ಬ್ರಾಹ್ಮಣಶಾಹಿ ಧರ್ಮದಿಂದ ಶೂದ್ರರಿಗೆ, ಅಲ್ಪಸಂಖ್ಯಾತರಿಗೆ ಹಾಗೂ ಮಹಿಳೆಯರಿಗೆ ಹೆಚ್ಚಿನ ಅನ್ಯಾಯವಾಗಿದೆ. ಈ ಧರ್ಮ ಮಾಡಿದಷ್ಟು ಅನ್ಯಾಯವನ್ನು ಬ್ರಿಟೀಷರಾಗಲಿ, ಮುಸ್ಲಿಮರಾಗಲಿ ಮಾಡಲಿಲ್ಲ. ಹಿಂದೂ ಧರ್ಮದ ದೋಷವನ್ನು ಮುಚ್ಚಿಕೊಳ್ಳಲು ಹಿಂದೂ ಮೂಲಭೂತವಾದಿ ಗಳು ಇತರೇ ಧರ್ಮವನ್ನು ಕೀಳಾಗಿ ಕಾಣುತ್ತಾ ಬಂದಿದ್ದಾರೆ. ಇಂದು ರಾಜಕಾರಣಿಗಳು ಮಠಗಳನ್ನು ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಮಠಾದೀಶರು ರಾಜಕಾರಣ ಮಾಡುತ್ತಿದ್ದಾರೆ ಹಾಗೂ ಪಾರ್ಟ್ ಟೈಂ ಸ್ವಾಮಿಗಳಾಗಿ, ಫುಲ್ ಟೈಂ ರಾಜಕಾರಣಿಗಳಾಗಿದ್ದಾರೆ. ಖಾದಿ, ಕಾವಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬರುತ್ತಿಲ್ಲ ಎಂದು ವ್ಯಂಗ್ಯವಾಡಿದರು.

ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಸುಷ್ಮಾ ಸ್ವರಾಜ್ ಆದಿಯಾಗಿ ಇವರೇಕೆ ಇಷ್ಟು ವಿರೋಧಿಸುತ್ತಾರೆ? ಮಂಡಿತವಾದ ಮೇಲೆ ಅಭಿಪ್ರಾಯ ಚರ್ಚಿಸಬಹುದಲ್ಲ! ಮಸೂದೆ ಪರಿಶೀಲನೆಗೆ ಸಿದ್ಧತೆ ಇಲ್ಲದ ಇವರ ಮನನೋಭೂಮಿಕೆ ಎಂತಹದ್ದು?



ಮಹಿಳಾ ಮೀಸಲಾತಿ ಮಸೂದೆ: ಎನ್‌ಡಿಎ ಸರ್ಕಾರದ ಮಹಿಳಾ ದ್ರೋಹ

ಈ ಬಾರಿ ಮತ್ತೆ ಪಾಳೇಗಾರಿ ಮೌಲ್ಯಗಳು ಸಂಸತ್ ಅಧಿವೇಶನದಲ್ಲಿ ತೋಳೇರಿಸಿವೆ. "ರಾಜಕೀಯದಲ್ಲಿ ಮಹಿಳಾ ಮೀಸಲಾತಿಯ ಮಸೂದೆ" ಯನ್ನು ನೆನೆಗುದಿಗೆ ತಳ್ಳಿವೆ. ಮಹಿಳಾ ಮೀಸಲಾತಿಯ ಬಿಲ್ ಅನ್ನು ಚರ್ಚೆಗೆ ತಗೊಳ್ಳುವುದಾಗಿ ಪ್ರಧಾನಿ ವಾಜಪೇಯಿ ಹೇಳಿದರೂ, ಅದನ್ನು ಚರ್ಚೆಗೆ ಬರದಂತೆ ಮಾಡಲು ಮಿತ್ರ ಪಕ್ಷದ (ಶಿವಸೇನಾ) ಪ್ರತಿನಿಧಿ ಮನೋಹರ ಜೋಶಿಯವರು ಅಧ್ಯಕ್ಷ ಸ್ಥಾನದಿಂದ ಬಲವನ್ನು ಬಳಸಿದ್ದು ಈಗ ಎಲ್ಲೆಡೆ ಬಯಲಾಗಿದೆ. ಹಿಂದೆ ಪೋಟಾ ಮಸೂದೆ ಪಾಸು ಮಾಡುವಾಗ ವಿರೋಧ-ಪರಗಳನ್ನು ಲೆಕ್ಕಕ್ಕೆ ತಗೊಳ್ಳದೇ ಆ ಮಸೂದೆಯನ್ನು ಪಾಸು ಮಾಡಿಸಿದ್ದೂ ಆಯ್ತು ಈಗ ಜಾರಿಯೂ ಆಗುತ್ತಿದೆ. ಇದೇ ರೀತಿ ಗೋಹತ್ಯೆ ನಿಷೇಧ ಮಸೂದೆಯನ್ನು ಪಾಸು ಮಾಡಿಕೊಳ್ಳಲು ಸರಕಾರ ತನ್ನ ಶಕ್ತಿಯನ್ನು ಕ್ರೋಢೀಕರಿಸಿಕೊಂಡು ಯಶಸ್ವಿಯಾಗಿದೆ. ಆದರೆ ಮಹಿಳಾ ಮೀಸಲಾತಿ ಮಸೂದೆಗೆ ಸಂಬಂಧಪಟ್ಟಂತೆ ಬಿಜೆಪಿಯು ದ್ವಿಮುಖ ನಾಟಕವಾಡಿದೆ ಎನ್ನುವುದು ಈಗ ಗುಟ್ಟಾಗಿ ಉಳಿದಿಲ್ಲ. ಕಾಂಗ್ರೆಸ್ ಮತ್ತು ಎಡಪಕ್ಷಗಳ ಬೆಂಬಲವಿದ್ದಾಗಲೂ ಈ ಮಸೂದೆ ಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲು ಸಾಧ್ಯವಾಗಲಾರದ್ದಕ್ಕೆ ಕಾರಣಗಳನ್ನು ಹುಡುಕಲು ಬಹಳ ಕಷ್ಟಪಡಬೇಕಿಲ್ಲ. "ಈ ಅಧಿವೇಶನದಲ್ಲಿ ಈ ಮಸೂದೆ ಯನ್ನು ಚರ್ಚಿಸುವ ಪ್ರಶ್ನೆಯೇ ಇಲ್ಲ." ಎಂಬ ಸುಷ್ಮಾ ಸ್ವರಾಜ್ ಹೇಳಿಕೆಯು ಬಿಜೆಪಿಯು ಗುಟ್ಟಾಗಿ ನಿರ್ಣಯಿಸಿದ ಅಜೆಂಡಾವನ್ನು ಧ್ವನಿಸುತ್ತದೆ ಮತ್ತು ಪ್ರಧಾನ ಮಂತ್ರಿಯುವರ ಮಾರ್ಗದರ್ಶನದಂತೆಯೇ ಮಾತಾಡಲಾಗಿದೆ. ಇದು ಏನನ್ನು ತೋರಿಸುತ್ತದೆ? ನೆಪಮಾತ್ರಕ್ಕೆ ಮಸೂದೆಯು ಪರಿಶೀಲನೆಯು ಮಾತಾಡುವ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರಕ್ಕೆ ಮಹಿಳಾ ಮೀಸಲಾತಿ ಮಸೂದೆ ಪಾಸಾಗುವುದು ಬೇಕಿಲ್ಲ. "ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ....." ಎಂಬ ಗಾದೆ ಮಾತನ್ನು ಬಿಜೆಪಿಗೆ ಹೋಲಿಸಿ ದೇಶದ ಜನತೆ ಈಗ ಮಾತಾಡುತ್ತಿದ್ದಾರೆ.


ಪಿ.ಮಹಮ್ಮದ್, ಪ್ರಜಾವಾಣಿ

ಮಹಿಳಾ ವಿರೋಧಿ ಮೌಲ್ಯ

ಮೂಲಭೂತವಾದಿ ಬಿಜೆಪಿ ಮತ್ತು ಶಿವಸೇನೆ ಪಕ್ಷಗಳು ಖಂಡಿತ ಮಹಿಳಾ ವಿರೋಧಿಗಳೆ. ಮನುವಾದವನ್ನು ಪ್ರತಿಪಾದಿಸುವ ಚಾತುರ್ವರ್ಣವನ್ನು ಒಪ್ಪಿಕೊಂಡ ಈ ಪಕ್ಷಗಳ ಮಟ್ಟಿಗೆ ಎಲ್ಲಾ ಮಹಿಳೆಯರೂ ದಲಿತರೆ. ಓಟ್ ಬ್ಯಾಂಕಿಗಾಗಿ ಮಹಿಳಾ ಮೀಸಲಾತಿಯ ಬಗ್ಗೆ ಮಾತಾಡುವರೇ ವಿನಃ ನಿಜವಾದ ಮಹಿಳಾ ಸಮಾನತೆ ಹಕ್ಕು ಅವರಿಗೆ ಬೇಕಿಲ್ಲ. ಆದ್ದರಿಂದಲೇ ಶರೀರದಿಂದ ಮಹಿಳೆಯಾಗಿರುವ ಉಮಾಭಾರತಿ, ಸುಷ್ಮಾಸ್ವರಾಜ್ ಇವರಿಗೆಲ್ಲಾ ಮಹಿಳಾ ಮೀಸಲಾತಿ ಮಸೂದೆ ಪಾಸಾಗುವುದು ಬೇಕಿಲ್ಲ. ಆದ್ದರಿಂದಲೇ, ಮಹಿಳೆಯರೆಂದ ಮಟ್ಟಿಗೆ ಅವರು ಮಹಿಳಾ ಸಮಾನತೆಯ ಪರವಾಗಿಯೇ ಇರುವರೆಂದೇನಿಲ್ಲ. ಅದು ಅವರ ರಾಜಕೀಯ ಮೌಲ್ಯವನ್ನು ಆದರಿಸಿರುತ್ತದೆ ಎನ್ನುವುದು ಮರೆಯಲಿಕ್ಕಾಗದು. ಅಂದರೆ ಬಿಜೆಪಿಯ ಮಹಿಳೆಯರು ಬಿಜೆಪಿಯ ರಾಜಕೀಯ ಮೌಲ್ಯಕ್ಕನುಸರಿಸಿ ಮಾತಾಡುತ್ತಿರುವರು. ಬಿಜೆಪಿಯ ರಾಜಕೀಯ ಮೌಲ್ಯವು ಮಹಿಳಾ ವಿರೋಧಿ ಮೌಲ್ಯವಾಗಿರುವುದರಿಂದ ಈ ಸಲವೂ ಮಹಿಳಾ ಮೀಸಲಾತಿ ಮಸೂದೆ ಮತ್ತೆ ಹಿಂದೆ ತಳ್ಳಲ್ಪಟ್ಟಿದೆ.

ಬಿಜೆಪಿ ಒಣ ಮಾತು ಬಯಲು

ಮುಸ್ಲಿಂಲೀಗ್, ಸಮಾಜವಾದಿ ಪಾರ್ಟಿ, ಆರ್‌ಜೆಡಿ ಪಾರ್ಟಿಗಳು ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿವೆ. ಕಳೆದ ಐದು ವರ್ಷಗಳಿಂದ ಈ ಮಸೂದೆಯು ಈ ರೀತಿಯ ವಿರೋಧಗಳನ್ನು ಎದುರಿಸುತ್ತಿದೆ. ಹಿಂದೊಮ್ಮೆ ಸಮಾಜವಾದಿ ಪಕ್ಷದ ಮುಲಾಯಂಸಿಂಗ್ ಅವರು ಶರ್ಟಿನ ತೋಳೇರಿಸಿಕೊಂಡು ಬಿಲ್‌ನ ಪ್ರತಿಯನ್ನು ಸದನದಲ್ಲಿಯೇ ಹರಿದುಹಾಕುವ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದು ಬಹುಶಃ ಯಾರಾದರೂ ಮರೆತಿರಲಿಕ್ಕಿಲ್ಲ. ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರುವ ಮಟ್ಟಕ್ಕೆ ಈ ದೇಶದ ಇಂತಹ ನಾಯಕರು ಇಳಿದಿರುವುದಕ್ಕೆ ಇರುವ ಕಾರಣಗಳೇನು? ಅವರು ಮಸೂದೆಯನ್ನು ಏಕೆ ವಿರೋಧಿ ಸುತ್ತಾರೆ? ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಿದ ಮೇಲೆ ಅದರ ಸಂಬಂಧಪಟ್ಟಂತೆ ಚರ್ಚೆ ಮಾಡಬಹುದಲ್ಲ? ಮಸೂದೆಯ ಪರಿಶೀಲನೆಗೆ ಸಿದ್ಧವಿಲ್ಲದ ಇವರ ಮನೋಭೂಮಿಕೆಯ ಹಿಂದಿರುವ ಅಂಶಗಳೇನು?

ಈ ಮಸೂದೆಗೆ ಸಂಬಂಧಿಸಿದಂತೆ ಅವರಿಗಿರುವ ಅನುಮಾನಗಳು ಏನೆಂದರೆ, ಈ ಮಸೂದೆಯು ಯಥಾವತ್ ಪಾಸಾದರೆ ಇದರ ಪ್ರಯೋಜನವನ್ನು ಕೇವಲ ಮೇಲ್ಜಾತಿಯವರು ಮಾತ್ರ ಪಡೆದುಕೊಳ್ಳುತ್ತಾರೆ ಎಂದು. ಆದ್ದರಿಂದ ಮೀಸಲಾತಿಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಮಹಿಳೆಯರಿಗೂ ಮೀಸಲಾತಿ ಕೇಳುತ್ತಿವೆ. ಹಾಗೆ ನೋಡಿದರೆ ಪಕ್ಷಗಳಿಗೂ ಮೊದಲು ಓಬಿಸಿ ಮಹಿಳೆಯರಿಗೆ ಮೀಸಲಾತಿ ಯನ್ನು ಕೇಳಿ ಬಿಲ್ ಅನ್ನು ವಿರೋಧಿಸಿದ್ದು ಬಿಜೆಪಿಯ ಉಮಾಭಾರತಿ.

ಈಗಾಗಲೇ ಸಂವಿಧಾನಬದ್ಧವಾಗಿ ಚಾಲ್ತಿಯಲ್ಲಿ ಇರುವಂತಹ ಮೀಸಲಾತಿಯಂತೆಯೇ ಈ ಮಸೂದೆಯಲ್ಲಿಯೂ 1/3 ಭಾಗವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮೀಸಲಿಡಬೇಕೆಂದು ಸೂಚಿಸಿದೆ.

ಹಿಂದುಳಿದ ವರ್ಗದ ಮಹಿಳೆಯರಿಗೆ ಮೀಸಲಾತಿ ಕೇಳುವವರು ಒಟ್ಟು ಹಿಂದುಳಿದ ವರ್ಗದ ಜನರಿಗೆ ಮೀಸಲಾತಿ ಏಕೆ ಕೇಳುತ್ತಿಲ್ಲ...? ಹೇಗೆ ಎಸ್.ಸಿ./ಎಸ್.ಟಿ. ಜನರಿಗೆ ಒಟ್ಟು ಮೀಸಲಾತಿ ಇದೆಯೋ ಹಾಗೆ ಇಡೀ ಒಬಿಸಿ ಅಲ್ಪಸಂಖ್ಯಾತ ಜನರಿಗೆ ಮೀಸಲಾತಿ ದೊರಕಿದಾಗ ತಾನೇ ತಾನಾಗಿ ಒಬಿಸಿ ಅಲ್ಪ ಸಂಖ್ಯಾತ ಮಹಿಳೆಯರಿಗೂ ಮೀಸಲಾತಿ ದೊರಕಿಯೇ ದೊರಕುತ್ತದೆ. ಒಬಿಸಿ ಅಲ್ಪಸಂಖ್ಯಾತ ಮಹಿಳೆಯರ ಮೀಸಲಾತಿಯ ಬಗ್ಗೆ ಇದ್ದಕ್ಕಿದ್ದಂತೆ ಇಷ್ಟು ಕಾಳಜಿ ವ್ಯಕ್ತ ಮಾಡುವ ಮುಸ್ಲಿಂ ಲೀಗ್, ಆರ್‌ಜೆಡಿ ಮತ್ತು ಸಮಾಜವಾದಿ ಪಕ್ಷಗಳು ಆ ವರ್ಗದ ಪುರುಷರ ಮೀಸಲಾತಿಯ (ಒಟ್ಟು ಮೀಸಲಾತಿ) ಬಗ್ಗೆ ಯಾಕೆ ಮಾತಾಡುವುದಿಲ್ಲ....? ಅಂದರೆ ಅವರ ಈ ಪ್ರಶ್ನೆ ನಿಜವಾಗಿಯು ಹಿಂದುಳಿದ ಜನರಿಗೆ ನ್ಯಾಯ ಕಲ್ಪಿಸುವ ಉದ್ದೇಶ ಒಳಗೊಂಡಿಲ್ಲ ಬದಲಿಗೆ ಹೇಗಾದರೂ ಮಹಿಳಾ ಮೀಸಲಾತಿ ಮಸೂದೆಗೆ ತಡೆ ಒಡ್ಡುವ ಕುತಂತ್ರ ಮಾತ್ರ ಹೊಂದಿದೆ ಎನ್ನುವುದು ಈಗ ಎಲ್ಲರ ಅಂಗೈಹುಣ್ಣು. ಮಾತ್ರವಲ್ಲ, ಇವರಿಗೆ ನಿಜವಾಗಿಯೂ ಮಹಿಳೆಯರ ಬಗ್ಗೆ ಅಷ್ಟೊಂದು ಕಾಳಜಿ ಇದ್ದಲ್ಲಿ ಈವರೆಗೆ ಒಬಿಸಿಗಳೇ ಅಧಿಕವಾಗಿ ಗೆದ್ದು ಬಂದ ಮತ್ತು ಹಿಂದುಳಿದ ವರ್ಗದ ಜನತೆಯೇ ಹೆಚ್ಚಿರುವ ಬಿಹಾರ, ಉತ್ತರ ಪ್ರದೇಶದಂತಹ ರಾಜ್ಯಗಳಲ್ಲಿ ಈ ಪಕ್ಷಗಳು ಎಷ್ಟು ಜನ ಮಹಿಳೆಯರನ್ನು ರಾಜಕೀಯ ರಂಗಕ್ಕೆ ತಂದು ಚುನಾಯಿಸಿವೆ ಎಂಬುದನ್ನು ನೋಡಿದರೆ ಖಂಡಿತ ಇವರ ಬಣ್ಣ ಬಯಲಾಗುತ್ತದೆ.

ಇತರ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಮೀಸಲಾತಿಯನ್ನು ವಿಸ್ತರಿಸುವ ವಿಷಯವನ್ನು ಸರ್ಕಾರ ಸೂಕ್ತ ಸಮಯದಲ್ಲಿ ಕೈಗೆತ್ತಿಕೊಂಡು ಆ ವರ್ಗಗಳ ಮಹಿಳೆಯರಿಗೂ ಮೀಸಲಾತಿಯ ಲಾಭ ಒದಗಿಸಬೇಕೆಂದು ಇದಕ್ಕಾಗಿ ಸೂಕ್ತ ವಿಧೇಯಕ ಸರಕಾರ ತರಬೇಕೆಂದು ಆಯ್ಕೆ ಸಮಿತಿಯ ವರದಿ ಹೇಳುತ್ತದೆ. ಹೀಗಿದ್ದಾಗೂ ಈ ಮೇಲಿನ ಪಕ್ಷಗಳು ಮಹಿಳಾ ವೀಸಲಾತಿ ಮಸೂದೆಯ ಪ್ರಶ್ನೆ ಬಂದ ಕೂಡಲೇ ಸಿಡಿದು ಬೀಳಲು ಇರುವ ಕಾರಣಗಳೇನೆಂದರೆ ಯಾವುದೇ ಕಾರಣಕ್ಕೂ ಮಹಿಳೆಯರು ನೀತಿ ನಿರೂಪಣಾ ಸ್ಥಾನಕ್ಕೆ ಬರಬಾರದು ಎಂಬುದೇ ಆಗಿದೆ. ಪಾಳೇಗಾರಿ ಮತ್ತು ಪುರುಷ ಪ್ರಧಾನ ಮೌಲ್ಯಗಳನ್ನು ಒಳಗೊಂಡ ಈ ಪಕ್ಷಗಳು ಈ ಬಾರಿಯೂ ಮಸೂದೆಯನ್ನು ವಿರೋಧಿಸುವ ಮೂಲಕ ತಾವು ಮಹಿಳಾ ವಿರೋಧಿ ಎಂಬುದನ್ನು ಸಾಬೀತುಪಡಿಸಿವೆ.

ಇದೇ ಸಂದರ್ಭದಲ್ಲಿ ಪರಿಣಿತ ಪ್ರಧಾನಿ ವಾಜಪೇಯಿಯವರು ಪಕ್ಷಗಳಲ್ಲಿಯೇ ಮಹಿಳೆಯರಿಗೆ ಮೀಸಲಾತಿ ಕೊಡುವಂತೆ ಉಪದೇಶ ಮಾಡಿದ್ದಾರೆ. ಆದರೆ ಪಕ್ಷದಲ್ಲಿ ಮೀಸಲಾತಿ ಇಟ್ಟು ಟಿಕೇಟ್ ಕೊಟ್ಟಾಕ್ಷಣ ಮಹಿಳೆಯರು ಚುನಾವಣೆಯಲ್ಲಿ ಗೆದ್ದೇ ಬಿಡುವ ವ್ಯವಸ್ಥೆ ಖಂಡಿತ ಇಲ್ಲ. ಭ್ರಷ್ಟಾಚಾರ, ಗೂಂಡಾಗಿರಿ, ಹಣ-ಹೆಂಡಗಳ ಸಹಿತ ಚುನಾವಣೆಗಿಳಿಯುವ ಪುರುಷನೇ ಗೆದ್ದು ಬರುವ ಸಾಧ್ಯತೆಗಳಿರುತ್ತವೆ. ಆದ್ದರಿಂದಲೇ ಮಹಿಳಾ ಮೀಸಲಾತಿಯ ಜರೂರಿಯಿದೆ.

ಆದರೆ ಅತ್ಯಂತ ವಿಷಾದದ ಸಂಗತಿ ಎಂದರೆ ವಾಜಪೇಯಿ ನೇತೃತ್ವದ ಈ ಲೋಕ ಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಪಾಸಾಗುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ. ಸಿ.ಪಿ.ಐ(ಎಂ) ಪಕ್ಷದ ಸಂಸತ್ ಸದಸ್ಯೆ ಸರಳಾ ಮಹೇಶ್ವರಿ ನೇತೃತ್ವದಲ್ಲಿ ವಾಜಪೇಯಿಯವರನ್ನು ಅಡ್ಡಗಟ್ಟಿ ಬಿಲ್‌ನ್ನು ಚರ್ಚೆಗೆ ತರಲೇಬೇಕೆಂದು ಒತ್ತಾಯಿಸಲಾಗಿದೆ ಶಬಾನಾ ಆಜ್ಮಿ ಬಿಲ್ ಚರ್ಚೆಗೆ ದನಿ ಎತ್ತಿದ್ದಾರೆ. ಆದಾಗ್ಯೂ ಸರಕಾರ ಬಿಲ್ ಚರ್ಚೆಗೆ ಮುಂದಾಗಲೇ ಇಲ್ಲ. ಅತ್ಯಂತ ಕಮ್ಮಿ ಸಂಖ್ಯೆಯ ಸಂಸತ್ ಸದಸ್ಯರು ವಿರೋಧಿಸಿದ ನೆವ ಒಂದೇ ಸಾಕಾಯ್ತು. ಸ್ಪೀಕರ್ ಶಿವಸೇನೆಯ ಜೋಶಿಯವರು ಮಸೂದೆಯ ಮೇಲಿನ ಚರ್ಚೆ ಮುಂದೂಡಿಯೇಬಿಟ್ಟರು.

ಒಟ್ಟಾರೆ ಕೋಮುವಾದಿಗಳ ಕುತಂತ್ರ, ಪಾಳೇಗಾರಿ ಶಕ್ತಿಗಳ ಪುರುಷ ಪ್ರಧಾನ ಮನಸುಗಳು ಒಟ್ಟಾಗಿ ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸುತ್ತಿರುವ ಈ ಸಂದರ್ಭದಲ್ಲಿ ಮಹಿಳೆಯರು ಮತ್ತು ಒಟ್ಟು ಪ್ರಜಾಸತ್ತಾತ್ಮಕ ಮನಸುಳ್ಳವರು ನಿರಾಶರಾಗಬೇಕಿಲ್ಲ. ಬದಲಿಗೆ ಈ ಮಸೂದೆ ಪಾಸಾಗುವವರೆಗೂ ಎಡೆಬಿಡದೆ ಚಳುವಳಿ ನಡೆಸಬೇಕಾಗುತ್ತದೆ. ಮತ್ತು ಮಹಿಳೆಯರ ಆರ್ಥಿಕ - ಸಾಮಾಜಿಕ ಸಶಕ್ತಿಕರಣದ ಪ್ರಶ್ನೆಯನ್ನು ಮತ್ತು ಲಿಂಗ ಸಮಾನತೆಗಾಗಿ ಕೈಗೆತ್ತಿಕೊಂಡು ಚಳುವಳಿ ಗಟ್ಟಿಗೊಳಿಸುವ ಅವಶ್ಯಕತೆ ಎಂದಿಗಿಂತಲೂ ಇಂದು ಹೆಚ್ಚಾಗಿದೆ. ಇದು ಕೇವಲ ಮಹಿಳೆಯರ ಪ್ರಶ್ನೆಯಾಗದೆ ಒಟ್ಟು ಸಮಾಜದ ಅಭಿವೃದ್ಧಿಯ ಪ್ರಶ್ನೆಯಾಗಿ ಎದ್ದುಬರುವ ದಿಕ್ಕಿನಲ್ಲಿ ಶ್ರಮಿಸಬೇಕಿದೆ.

☐ - ಕೆ. ನೀಲಾ

ತ್ರಿಪುರಾದಲ್ಲಿ ಹತ್ಯಾಕಾಂಡ

ತ್ರಿಪುರಾದ ಸಿಮಾ ಪ್ರದೇಶದ ಸರ್ಕಾರಿ ಕಾಲೋನಿಯಲ್ಲಿ 32 ಜನರ ಸಾಮೂಹಿಕ ಹತ್ಯೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಭಾರತ- ಬಾಂಗ್ಲಾ ಗಡಿಯನ್ನು ದಾಟಿದ ಉಗ್ರಗಾಮಿಗಳ ಗುಂಪೊಂದು ಸಣ್ಣ ಪ್ರದೇಶದ ಮೇಲೆ ದಾಳಿ ನಡೆಸಿ ಮನೆಗಳನ್ನು ಸುಟ್ಟು ಒಳಗಿದ್ದವರನ್ನು ಹತ್ಯೆಗೈದಿದೆ. ಬಹುತೇಕ ಮಂದಿ ಸಿಪಿಐ(ಎಂ) ಬೆಂಬಲಿಗರಾಗಿದ್ದ ಇದರಲ್ಲಿ ಏಳು ಮಹಿಳೆಯರು ಮತ್ತು ಇತರೆ ಎಂಟು ಜನರು ಗಾಯಗೊಂಡಿದ್ದಾರೆ.

ಅದೇ ದಿನ ಎನ್.ಎಲ್.ಎಫ್.ಟಿ ಯ ಉಗ್ರಗಾಮಿಗಳು ಸಿಪಿಐ(ಎಂ) ನ ಬುಡಕಟ್ಟು ಮಹಿಳಾ ನಾಯಕಿ ರಸಮಾಲದೇವವರ್ಮಾರನ್ನು ಕೊವಾಯ್ ಎಂಬಲ್ಲಿ ಮತ್ತು ಉತ್ತರ ತ್ರಿಪುರಾದ ರಾಧಾನಗರ್‌ನಲ್ಲಿ ಇನ್ನಿಬ್ಬರು ನಾಗರೀಕರನ್ನು ಕೊಂದು ಹಾಕಿದ್ದಾರೆ.

ಈ ದಾಳಿಯಲ್ಲಿ ಹತರಾದ ಎಲ್ಲಾ ಕುಟುಂಬಗಳಿಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೊ ತನ್ನ ಸಂತಾಪ ವ್ಯಕ್ತಪಡಿಸಿದೆ.

ಉಗ್ರಗಾಮಿ ಗುಂಪುಗಳ ಗಡಿಯಲ್ಲಿನ ಅಡಗುತಾಣಗಳನ್ನು ಹೇಗೆ ಬಳಸಿಕೊಂಡು ದಾಳಿ ನಡೆಸುತ್ತಿದ್ದಾರೆ ಎಂಬುದು ಸಿಮ್ನಾದ ಹತ್ಯೆಗಳಿಂದ ತಿಳಿಯುತ್ತದೆ. ಕೇಂದ್ರ ಸರ್ಕಾರಿ ತಕ್ಷಣ ಅರೆಮಿಲಿಟರಿ ಪಡೆಗಳನ್ನು ಕಳುಹಿಸಿ ಅಗತ್ಯಕ್ರಮ ಕೈಗೊಂಡು ಉಗ್ರಗಾಮಿಗಳನ್ನು ಮಟ್ಟಹಾಕಲು ಮುಂದಾಗಬೇಕು.



ಒಂದು ಐತಿಹಾಸಿಕ ಮಹಾ ಮುಷ್ಕರಕ್ಕೆ ಭಾರತದ ಜನ ಸಜ್ಜಾಗುತ್ತಿದ್ದಾರೆ. ಬಿಜೆಪಿ ನೇತೃತ್ವದ ವಾಜಪೇಯಿ ಸರ್ಕಾರದ ದೇಶದ್ರೋಹಿ ನೀತಿಗಳನ್ನು ದಿಟ್ಟವಾಗಿ ಎದುರಿಸುತ್ತಾ ಬಂದ ದುಡಿವವರ್ಗ ಇದೀಗ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರದ ಐತಿಹಾಸಿಕ ಕರೆ ನೀಡಿದೆ. ವಾಜಪೇಯಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದ ಇದು ಮೊದಲ ಸಾರ್ವತ್ರಿಕ ಮುಷ್ಕರ. ದುಡಿವ ಜನತೆಯ ಸ್ಪಷ್ಟ ರಾಜಕೀಯ ಕಾರ್ಯಾಚರಣೆ. ಸಮಾಜದ ಪ್ರತಿಯೊಂದು ವಿಭಾಗಗಳೂ ಮುಷ್ಕರ ಯಶಸ್ವಿಗಾಗಿ ಅಹೋರಾತ್ರ ಶ್ರಮಿಸುತ್ತಿದ್ದು, ಅಂದಿನ ಹರತಾಳ ಅಖಿಲ ಭಾರತ್ ಬಂದ್ ಆಗಿ ಪರಿವರ್ತನೆಯಾಗುವ ಸಂಭವವಿದೆ. ಈ ಮಹಾ ಮುಷ್ಕರ ಯಾಕೆ ಎಂಬ ಬಗ್ಗೆ ಲೇಖನವಿಲ್ಲಿ

ಮೇ 21 ರ ಐತಿಹಾಸಿಕ ಸ

'ದೇಶ ಮಾರಲು ಬಿಡುವುದಿಲ್ಲ' ವಾಜಪೇ

ದೇಶ ಮೇ 21, 2003 ರಂದು ಒಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಕಾಣಲಿದೆ. ಈ ಮುಷ್ಕರವನ್ನು ಪ್ರಾಯೋಜಿಸಿರುವ ಕಾರ್ಮಿಕ ಸಂಘಗಳು ಮತ್ತು ಬೆಂಬಲಿಸಿರುವ ಸಾಮೂಹಿಕ ಸಂಘಟನೆಗಳು ಈ ಮುಷ್ಕರ ಸಂಪೂರ್ಣ ಯಶಸ್ವಿಯಾಗುತ್ತದೆಂದು ನಿರೀಕ್ಷಿಸುತ್ತಿವೆ.

ಕಳೆದ ವರ್ಷ ಕೇಂದ್ರ ಕಾರ್ಮಿಕ ಸಂಘಟನೆಗಳು ಒಂದು ಅಖಿಲ ಭಾರತ ದುಡಿಯುವ ಜನರ ಸಮಾವೇಶದಲ್ಲಿ ರೂಪಿಸಿದ ಬೇಡಿಕೆಗಳಿಗೆ ಐಎನ್‌ಟಿಯುಸಿ ಮತ್ತು ಬಿಎಂಎಸ್‌ನ ಬೆಂಬಲವೂ ಇತ್ತು. ಆದರೆ ಈ ಎರಡು ಸಂಘಟನೆಗಳು ಸಾರ್ವತ್ರಿಕ ಮುಷ್ಕರದಿಂದ ದೂರ ನಿಂತಿವೆ. ಐಎನ್‌ಟಿಯುಸಿ ಮುಖಂಡತ್ವ ಮುಷ್ಕರವನ್ನು ಬೆಂಬಲಿಸದಿದ್ದರೂ ತನ್ನ ಕಾರ್ಯಕರ್ತರು, ಅನುಯಾಯಿಗಳು ಪ್ರಚಾರ ಮತ್ತು ಮುಷ್ಕರದಲ್ಲಿ ಭಾಗವಹಿಸಿದಂತೆ ತಡೆಯಲು ಅಸಮರ್ಥರಾಗಿದ್ದಾರೆ. ಆರಂಭದಲ್ಲಿ ಬಿಎಂಎಸ್ ಕೇಂದ್ರ ಸರ್ಕಾರದ ಸಾಮ್ರಾಜ್ಯಶಾಹಿ-ಪರ ಧೋರಣೆಗಳ ವಿರುದ್ಧ ಒಂದು ಪ್ರಚಾರಕಾರ್ಯದ ಮುಂಚೂಣಿಯಲ್ಲಿತ್ತು. ನವ ಉದಾರವಾದೀ ಧೋರಣೆಗಳ ವಿರುದ್ಧ ಆಂದೋಲನದಲ್ಲಿ ಜಂಟಿಯಾಗಿ ಸ್ವಲ್ಪಕಾಲ ಭಾಗವಹಿಸಿದ ಮೇಲೆ ಅವರ ರಾಜಕೀಯ ಮುಖಂಡತ್ವ ಅವರಿಗೆ ಕಡಿವಾಣ ಹಾಕಿದೆ. ಅವರು ಏನೇ ಹೇಳಲಿ, ಬಿಎಂಎಸ್ ಮುಖಂಡರ ಮೇಲೆ ಕಡಿವಾಣ ಹಿಡಿದಿರುವುದು ಆರ್‌ಎಸ್‌ಎಸ್ ಮುಖಂಡತ್ವ. ಈಗಿನ ಸರಸಂಘಚಾಲಕ ಬಹಿರಂಗವಾಗಿ ತಮ್ಮದೇ ಬ್ರಾಂಡಿನ 'ದೇಶೀ' ಧೋರಣೆ ಪ್ರತಿಪಾದಿಸುತ್ತಾ ವಿದೇಶೀ ಸರಕುಗಳ ಬಹಿಷ್ಕಾರಕ್ಕೆ ಕರೆ ನೀಡಿದ್ದರು. ಅವರೊಂದು 'ಭಾರತ ಬಚಾವೋ ಆಂದೋಲನ' ಹರಿಯಬಿಟ್ಟರು - ಎಡ ಶಕ್ತಿಗಳ ನೇತೃತ್ವದ ಆಂದೋಲನದ ಸಂಘಟನೆಗೆ ಎದುರಾಗಿ ಇದನ್ನು ಹರಿಯಬಿಟ್ಟಿದ್ದರು. ಈಗ ಬಿಎಂಎಸ್ ರಾಷ್ಟ್ರೀಯ ಕಾರ್ಮಿಕ ಸಂಘಗಳ ವೇದಿಕೆಯಿಂದ ಹಿಂತೆಗೆದುಕೊಂಡಿದ್ದರಿಂದ ಅವರ ಉಭಯಸಂಕಟ ಬಯಲಾಗಿದೆ.

ಐಎನ್‌ಟಿಯುಸಿಯ ಅಖಿಲ ಭಾರತ ಅಧ್ಯಕ್ಷ ವೈಷಮ್ಯಪೂರ್ಣ ನಿಲುವು ತಳೆದರೂ, ಇತರ ಮುಖಂಡರಿಗೆ ಈ ಮುಷ್ಕರವನ್ನು ಯಾವುದೇ ಗಮನಾರ್ಹ ರೀತಿಯಲ್ಲಿ ವಿರೋಧಿಸಲಾಗುತ್ತಿಲ್ಲ.

ಈಗ ಮುಷ್ಕರದ ಸಂಘಟಕರು ಮಾಡಬೇಕಾದ್ದೆಂದರೆ ಕಾರ್ಮಿಕರನ್ನು ನೇರವಾಗಿ ಸಂಪರ್ಕಿಸಿ ಅವರ ಬೇಡಿಕೆಗಳನ್ನು ವಿವರಿಸಿ ಅವರನ್ನು ಕಾರ್ಯಾಚರಣೆಗೆ ಸೆಳೆಯುವುದು.


ಕರ್ನಾಟಕದಲ್ಲಿ ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಹೆಚ್‌ಎಂಕೆಪಿ, ಯುಟಿಯುಸಿ(ಲೆನಿನ್ ಸರಣಿ), ಟಿಯುಸಿಸಿ ಮತ್ತು ಬ್ಯಾಂಕ್, ವಿಮೆ, ಟೆಲಿಫೋನ್ಸ್, ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರ ಸಂಘಟನೆಗಳಿರುವ ಕಾರ್ಮಿಕ ಸಂಘಗಳ ಜಂಟಿ ಸಮಿತಿ ಹಾಗೂ ರೈತರು, ಯುವಜನರು, ವಿದ್ಯಾರ್ಥಿಗಳು, ಮಹಿಳೆಯರು ಮತ್ತು ಸಾಂಸ್ಕೃತಿಕ ಸಂಘಟನೆಗಳು ಮೇ 21 ರ ಮುಷ್ಕರಕ್ಕೆ ಜನ ಬೆಂಬಲ ಗಳಿಸಲು ಜತೆಗೂಡಿದ್ದಾರೆ.

ನವ ಉದಾರವಾದಿ ಧೋರಣೆಗಳನ್ನು ಹಿಮ್ಮೆಟ್ಟಿಸುವುದು ಪ್ರಸ್ತುತ ಸಮಯದ ಕರ್ತವ್ಯ

ಮೇ 21 ರ ಕಾರ್ಯಾಚರಣೆಯನ್ನು ಸಮರ್ಥಿಸಿಕೊಳ್ಳಲು ಎಷ್ಟರ ಮಟ್ಟಿಗೆ ಪ್ರಚಾರ ನಡೆಸಲು ಸಾಧ್ಯವೋ ಅಷ್ಟರ ಮಟ್ಟಿಗೆ ಕಾರ್ಮಿಕ ಸಂಘಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಮತ್ತು ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ರಾಸ್ತಾ ರೋಕೋ, ರೈಲ್ ರೋಕೋ ಕರೆಗೆ ಬೆಂಬಲ ಸಿಗುತ್ತದೆ.

ಬುದ್ಧಿಶೂನ್ಯ ಖಾಸಗೀಕರಣ ನಿಲ್ಲಿಸಿ

ಉದಾರೀಕರಣ-ಖಾಸಗೀಕರಣ ನೀತಿಗಳನ್ನು ಆರಂಭಿಸಿದಾಗ ಹೇಳಿದ್ದು ನಷ್ಟದಲ್ಲಿರುವ ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗೀಕರಿಸಬೇಕು ಎಂದು. ಕ್ರಮೇಣ ಇದು ತೀವ್ರ ಹಿಂಪಡಿಕೆಯತ್ತ ಸಾಗಿತು. ಮೊದಲು ನೌಕರರು ಶೇರುಗಳನ್ನು ಹೊಂದುವುದು ಎಂಬ ವಿಚಾರವನ್ನು ಮುಂದಿಡಲಾಯಿತು. ಕೆಲವು ಯೂನಿಯನ್‌ಗಳು ಅದರ ಬೆನ್ನತ್ತಿದರೂ ಬಹಳ ಮಂದಿ ಗಮನಕೊಡಲಿಲ್ಲ. ನಂತರ ಲಾಭದಲ್ಲಿರುವ ಮತ್ತು ನಷ್ಟದಲ್ಲಿರುವ ಘಟಕಗಳನ್ನು ಸೇರಿಸಿ ಶೇರುಗಳನ್ನು ಮಾರುವ ಯೋಚನೆ ಮಾಡಿತು. ಕ್ರಮೇಣ, ವಿಶೇಷವಾಗಿ ಎರಡನೇ ತಲೆಮಾರಿನ 'ಸುಧಾರಣಾ' ಪ್ರಕ್ರಿಯೆಯಲ್ಲಿ ಸರಕಾರ ನೇರವಾಗಿ ಹೂಡಿಕೆ ಹಿಂಪಡಿಕೆಯನ್ನು ಆರಂಭಿಸಲು ಮುಂದಾಯಿತು. ಇದಕ್ಕಾಗಿ ಪ್ರತ್ಯೇಕ ಇಲಾಖೆಯನ್ನೇ ನಿರ್ಮಿಸ ಲಾಯಿತು. ಬಜೆಟ್‌ಗಳಲ್ಲಿ ಈ ತರದ ಹಿಂಪಡಿಕೆಗಳ ನಿರೀಕ್ಷಿತ ಮೊತ್ತ ಏರಲಾರಂಭಿಸಿತು.



ವಿ.ಜೆ.ಕೆ.ನಾಯರ್
ಪ್ರಧಾನ ಕಾರ್ಯದರ್ಶಿ
ಸಿಐಟಿಯು, ಕರ್ನಾಟಕ

ಬಾಲ್ಕೋ ಮಾರಾಟ ಹಾಗೂ ಆ ಬಗ್ಗೆ ವ್ಯಾಜ್ಯದಲ್ಲಿ ಸುಪ್ರೀಂ ಕೋರ್ಟಿನಿಂದ ಅನುಕೂಲಕರ ಆದೇಶ ಸಿಕ್ಕ ನಂತರವಂತೂ ಸರಕಾರ ಹಿಂದಿರುಗಿ ನೋಡ ಲಿಲ್ಲ. ಲಾಭ ಗಳಿಸುತ್ತಿರುವ ತೈಲ ಕಂಪನಿಗಳನ್ನು ಮಾರಲು ಮುಂದಾಯಿತು. ಇತ್ತೀಚೆಗೆ ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಂಪನಿಗಳನ್ನು ಖಾಸಗೀಕರಿಸ ಲಾಯಿತು. ಈ ಖಾಸಗೀಕರಣಗಳ ವಿರುದ್ಧ ಹೋರಾಟವನ್ನು ಸಂಸತ್ತಿಗೆ ಒಯ್ಯಲಾಯಿತು. ಅಲ್ಲಿ ಮಂತ್ರಿಗಳು ರಕ್ಷಣಾತ್ಮಕವಾಗಿ ವರ್ತಿಸಬೇಕಾಯಿತು. ಏಕೆಂದರೆ ಅವರು ಮೊದಲೇ ಸಂಸತ್ತಿನಲ್ಲಿ ಸಮಾಲೋಚಿಸಿರಲಿಲ್ಲ. ಎನ್‌ಡಿಎ ಭಾಗೀದಾರರು ಕೂಡಾ ಪ್ರತಿಪಕ್ಷಗಳೊಂದಿಗೆ ಕೈಜೋಡಿಸುವವರಿದ್ದರು. ಸರಕಾರ ಈ ಪ್ರಶ್ನೆಯ ಮೇಲೆ ಮತದಾನವನ್ನು ತಪ್ಪಿಸಿತು. ಹೀಗೆ ಈ ಹೋರಾಟ ಇನ್ನೂ ಮುಗಿದಿಲ್ಲ ಎಂಬುದನ್ನು ನೋಡಬಹುದು. ಬುದ್ಧಿಶೂನ್ಯ ಖಾಸಗೀಕರಣದ ವಿರುದ್ಧ ಧಾಳಿಯನ್ನು ಮುಂದುವರೆಸಲು ಸಾಧ್ಯ.

ವಿದ್ಯುಚ್ಛಕ್ತಿ

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆಗಳು ಸಾಕಷ್ಟು ಮುಂದುವರೆದಿರುವ ಒಂದು ರಾಜ್ಯ. ಉತ್ತರ ಪ್ರದೇಶದಲ್ಲಿ ವಿದ್ಯುತ್ ಮಂಡಳಿಯ ವಿಭಜನೆಯ ಪ್ರಸ್ತಾಪ ಬಂದ ಕೂಡಲೇ ಒಂದು ಬಲಿಷ್ಟ ಚಳುವಳಿ ನಡೆದು ಅದನ್ನು ತಡೆಯಲಾಯಿತು. ಕರ್ನಾಟಕದಲ್ಲಿ ಮೂರು ದಶಕಗಳ ಹಿಂದೆಯೂ ವಿಭಜನೆ ನಡೆದಿತ್ತು. ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿ) ವನ್ನು ರಚಿಸಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕೆಇಬಿ) ಯನ್ನು ವಿದ್ಯುತ್ ವಿತರಣಾ ಸಂಸ್ಥೆಯಾಗಿ ಮಾಡಲಾಯಿತು. ನಂತರ ಅದನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್)ವಾಗಿ ಪರಿವರ್ತಿಸಲಾಯಿತು. ಈಗ ಇದನ್ನು ನಾಲ್ಕು ಕಂಪನಿಗಳಾಗಿ ಒಡೆಯಲಾಗಿದೆ. ಇವನ್ನು ಖಾಸಗೀಕರಿಸುವ ಪ್ರಯತ್ನ ನಡೆದಿದೆ. ವಿದ್ಯುತ್ ದರಗಳನ್ನು ಪ್ರತಿವರ್ಷ ಏರಿಸಲಾಗುತ್ತಿದೆ. ಸಬ್ಸಿಡಿಗಳನ್ನು ನಿಲ್ಲಿಸಲಾಗುತ್ತಿದೆ. ವಿದ್ಯುತ್ ಪಂಪ್ ಬಳಕೆದಾರರ ಮೇಲೆ ಒತ್ತಡ ಬರುತ್ತಿದೆ. ಅದಕ್ಕೆ ಭಾರಿ ಹಣ ತೆರಬೇಕಾಗಿದೆ. ದೊಡ್ಡ ಉದ್ಯಮಿಗಳು ತಮ್ಮದೇ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅವರು ಈಗ ಕೆ.ಪಿ.ಸಿ. ವಿದ್ಯುತ್ತನ್ನು ಅವಲಂಬಿಸಿಲ್ಲ. ಅದೇ ವೇಳೆಗೆ ವಿದ್ಯುತ್‌ರಂಗ, ಸಣ್ಣ ಪ್ರಮಾಣದ ಉದ್ದಿಮೆಗಳಂತಹ ಬಳಕೆದಾರರು ಬಹಳ ಕಷ್ಟದಲ್ಲಿದ್ದಾರೆ.

ಹೀಗೆ ವಿದ್ಯುತ್ತಿನ ಖಾಸಗೀಕರಣ ಸಾರ್ವಜನಿಕ ವಿರೋಧವನ್ನು ಎದುರಿಸಿದೆ. ಇತರ ವಲಯಗಳಲ್ಲಿಯೂ ಇದೇ ಕಾಣುತ್ತಿದೆ.

ಸರಕಾರೀ ಇಲಾಖೆಗಳ ಖಾಸಗೀಕರಣ

ಸಾಗರೋತ್ತರ ಸಂಪರ್ಕ ಇಲಾಖೆಯಂತಹ ಸರ್ಕಾರಿ ಇಲಾಖೆಗಳ ಕಂಪನೀಕರಣ ಮೊದಲು ನಡೆಯಿತು. ಅದನ್ನು ವಿದೇಶಿ ಸಂಚಾರ ನಿಗಮ ಲಿಮಿಟೆಡ್ ಎಂದು ಹೆಸರಿಸಲಾಯಿತು. ನಂತರ ಈ ಕಂಪನಿಯನ್ನು ಟಾಟಾಗಳಿಗೆ ಮಾರಲಾಯಿತು. ಈಗ ದೂರವಾಣಿ ಇಲಾಖೆಯನ್ನು ಬಿಎಸ್‌ಎನ್‌ಎಲ್ ಎಂದು ಕಂಪನಿಯಾಗಿ ಮಾಡಲಾಗಿದೆ. ನಂತರ ಇದನ್ನು ಖಾಸಗೀಯವರಿಗೆ ಮಾರಬಹುದು.

ವಿಮಾನಯಾನಕ್ಕೆ ಸಂಬಂಧ ಪಟ್ಟಂತ ಕಂಪನೀಕರಣ, ಖಾಸಗೀಕರಣ ಪ್ರಯತ್ನ ಚೆನ್ನಾಗಿ ನಡೆಯಿತು. ಅಂತಿಮವಾಗಿ ಸರಕಾರ ಎರಡು ಏರ್‌ಲೈನ್ಸ್‌ಗಳನ್ನು ಖಾಸಗೀಕರಿಸುವುದಿಲ್ಲ ಎಂದು ಪ್ರಕಟಿಸಿದೆ. ಇದು ಸರಕಾರ ಖಾಸಗೀಕರಣದ ನೀತಿಯನ್ನು ಕೈಬಿಟ್ಟದ್ದರಿಂದಾಗಿ ಅಲ್ಲ, ಪ್ರತಿಪಕ್ಷಗಳ ಬಾಯಿ ಮುಚ್ಚಿಸುವ ಬೆಲೆ ಅದಕ್ಕೆ ಬಂದಿಲ್ಲವಾದ್ದರಿಂದ.

ಈ ಖಾಸಗೀಕರಣ ಪ್ರಕ್ರಿಯೆ ಈಗ ಸರಕಾರವನ್ನು ಬಲವಂತ ಮಾಡುತ್ತಿರುವ ಅಂತರಾಷ್ಟ್ರೀಯ ಏಜೆನ್ಸಿಗಳ ಸಂಯೋಜಿತ ಧೋರಣೆಯ ಭಾಗ. ಬ್ರೆಟ್ಟನ್ ವುಡ್ ಸಂಸ್ಥೆಗಳಾದ ಐಎಂಎಫ್ ಮತ್ತು ವಿಶ್ವಬ್ಯಾಂಕ್, ಜತೆಗೆ ಡಬ್ಲ್ಯು.ಟಿ.ಓ., ವಿಶ್ವ ಗುತ್ತೇದಾರಿ ಬಂಡವಾಳದ ಹಿತ ಸಾಧಿಸಲು ತಮಗೆ ಪ್ರಯೋಜನವಾಗುವಂತೆ ಆರ್ಥಿಕವನ್ನು ನೆಲೆಸಲು ತಮ್ಮ ಕೈಲಾದನ್ನೆಲ್ಲ ಮಾಡುತ್ತಿವೆ.

ಈ ಧೋರಣೆಗಳ ವಿರೋಧ ಇವನ್ನು ಹಿಮ್ಮೆಟ್ಟಿಸುವಲ್ಲಿ ಇನ್ನೂ ಸಫಲವಾಗಿಲ್ಲ. ಆದರೆ ಈ ಪ್ರಕ್ರಿಯೆಯನ್ನು ನಿಧಾನಗೊಳಿಸಿ ದೇಶಕ್ಕೆ ಬಹಳ ಪ್ರಯೋಜನ ಉಂಟುಮಾಡುವಲ್ಲಿ ನೆರವಾಗಿದೆ. ಕಾರ್ಮಿಕ ಕಾನೂನುಗಳ ತಿದ್ದುಪಡಿಗೆ ವಿರೋಧ

ಈಗ ಚಾಲ್ತಿಯಲ್ಲಿರುವ ಕಾರ್ಮಿ



...ತ್ರಿಕ ಮುಷ್ಕರ

...ರ್ಕಾರಕ್ಕೆ ಜನತೆಯ ಎಚ್ಚರ

...ಗಳು ವಸಾಹತುಕಾಲದ, ನಂತರ
...ದ ಆರಂಭದ ಅವಧಿಯಲ್ಲಿ ಬಂದವುಗಳು.
...ದ ಆರಂಭದ ದಿನಗಳಲ್ಲಿ ಬಂದ 'ಕಲ್ಯಾಣ
...ವನ್ನು ನಿರ್ಮಿಸಲು ಪ್ರಯತ್ನಿಸಲಾಯಿತು.
...ಕ ನ್ಯಾಯ ನಮ್ಮ ಗುರಿಯೆಂದು
...ಯಿತು. ಭವಿಷ್ಯ ನಿಧಿ, ಇಎಸ್ಐ
...ಳು ಈ ಅವಧಿಯಲ್ಲಿ ಬಂದವು. ಹೆರಿಗೆ
...ಕಾನೂನು, ಸಂಬಳ ಪಾವತಿ ಕಾನೂನು,
...ಕಾನೂನು ಇವೆಲ್ಲಾ ವಸಾಹತು ಆಡಳಿತ

... ಬಂದಿದ್ದವು. ನಂತರ ಅವನ್ನು
...ಳಿಸಿ ಮುಂದುವರೆಸಲಾಯಿತು.
... ವಿವಾದಗಳ ಕಾನೂನು ಮೂಲತಃ
... ಮಹಾಯುದ್ಧದಲ್ಲಿ ಭಾರತದ
...ು ಬಂದದ್ದು. ಅದನ್ನು ಕೈಗಾರಿಕೆಗಳ
...ಯಂತ್ರಣಕ್ಕೆ ಹಾಗೂ ಕೈಗಾರಿಕಾ
...ನ್ನು ತರಲಾಯಿತು. ಕ್ರಮೇಣ ಅದೂ
...ತು. ಹಲವಾರು ತಿದ್ದುಪಡಿಗಳನ್ನು
...ತು.

...V ಬಿ

...ಕೆಗಳ ವಿವಾದಗಳ ಕಾನೂನು, 1947
... ಮಹತ್ವಪೂರ್ಣ ತಿದ್ದುಪಡಿಯನ್ನು
...ಂಧಿ ಸರ್ಕಾರ ತಂದಿತು. ಇದು
...ತ ಹೆಚ್ಚು ಕಾರ್ಮಿಕರನ್ನು
...ಸ್ಥೆವಲ್ಲಿ ಲೇ ಆಫ್, ರಿಟ್ರೆಂಚ್‌ಮೆಂಟ್,
...ವನ್ನು ಸರಕಾರದ ಹತೋಟಿಗೆ ತಂದಿತು.
...ನಗಳನ್ನು ಅನುಸರಿಸುವ ಮೊದಲು
... ಅನುಮತಿಗೆ ಅರ್ಜಿ ಹಾಕಬೇಕೆಂದು
...ರಕಾರದ ಮಧ್ಯಪ್ರವೇಶಕ್ಕೆ ಅನುವು
...ಸುವ ಮೂಲಕ ಇಂತಹ ಕೆಲಸ ಕೊಲ್ಲುವ
...ನ್ನು ಈ ಅಧ್ಯಾಯ V ಬಿ ನಿಷೇಧಿಸಿತು.
...ಳು ಸಾಮಾನ್ಯವಾಗಿ ಕ್ಲೋಶರ್,
...ಮೆಂಟ್, ಲೇ ಆಫ್‌ಗಳಿಗೆ ಅನುಮತಿ
...ಲ್ಲ. ಆದ್ದರಿಂದ ಮಾಲಕರು ಇದರ
...ದ್ದಾರೆ. ಸರಕಾರ ಈಗಾಗಲೇ ತನ್ನ
... ಬದಲಿಸಿ ಈ ಅಧ್ಯಾಯದಡಿ
...ಮೆಂಟ್, ಕ್ಲೋಶರ್‌ಗಳಿಗೆ ಉದಾರವಾಗಿ
... ನೀಡುತ್ತಿದೆ. ಕೈಗಾರಿಕಾ ವಿವಾದ
... ಪ್ರಕಾರ ಪರಿಹಾರ ನೀಡದೆಯೂ
...ರ್ಖಾನೆಗಳನ್ನು ಮುಚ್ಚಲಾಗಿದೆ.
...ಕರು ಕೇಳುತ್ತಿರುವುದು ಕಾರ್ಮಿಕರನ್ನು
...ತೆ ದುಡಿಸಿಕೊಳ್ಳುವ, ಹೊರಗೆಸೆಯುವ
... Fire ಹಕ್ಕು. ಇದಕ್ಕಾಗಿ ಅವರು
... ದೇಶಗಳನ್ನು ತೋರಿಸುತ್ತಾರೆ. ಆದರೆ
...ಲ್ಲಿದ್ದಂತೆ ಹೆಚ್ಚು ಸಂಬಳಗಳನ್ನಾಗಲೀ
...ದ್ಯೋಗ ಸೌಲಭ್ಯವನ್ನಾಗಲೀ ಕೊಡಲು
...ಮಾಲಕರು ಸಿದ್ಧರಿಲ್ಲ.
...ಕ ಸಂಘಗಳು ಕಾರ್ಮಿಕ ಕಾನೂನು
...ಕಪಕ್ಷೀಯವಾಗಿ ಮಾಲಕ-ಪರವಾಗಿ
...ಮಾಡುವುದನ್ನು ವಿರೋಧಿಸುತ್ತವೆ.
... ರವೀಂದ್ರ ವರ್ಮಾ ನೇತೃತ್ವದ
...ರಾಷ್ಟ್ರೀಯ ಕಾರ್ಮಿಕ ಆಯೋಗ
...ಸುಧಾರಣೆಗಳನ್ನು ಶಿಫಾರಸು ಮಾಡಿದೆ.
...ಕಾರ ಈ ಸುಧಾರಣೆಗಳನ್ನು ಜ್ಯಾರಿಗೆ
...ರ್ಮಿಕ ಮಸೂದೆ' ಎಂಬುದನ್ನು ತರುವ
...

...ವಣೆಗಳನ್ನು ವಿರೋಧಿಸುತ್ತಲೇ
...ಸಂಘಗಳು, ಆಗಿರುವ ಕಾರ್ಮಿಕ
... ಬಗ್ಗೆ ಸಂವಾದಕ್ಕೆ ಸಿದ್ಧವಾಗಿವೆ.

ಕಾರ್ಮಿಕ ಕಾನೂನುಗಳಲ್ಲಿನ ಬದಲಾವಣೆ ಉದ್ಯೋಗದಲ್ಲಿ ಬೆಳವಣಿಗೆ ಮತ್ತು ಕೈಗಾರಿಕಾ ಸಮೃದ್ಧಿ ತರಲು ನೆರವಾಗಬೇಕೇ ಹೊರತು ಕ್ಲೋಶರ್, ರಿಟ್ರೆಂಚ್‌ಮೆಂಟ್‌ಗಳಿಗೆ ಅನುಕೂಲ ಮಾಡಿಕೊಡುವಂತದ್ದಾಗಬಾರದು.

ಸಾಮಾಜಿಕ ಭದ್ರತೆ

ಮೇ 21 ರ ಮುಷ್ಕರ ಒಂದು ಪ್ರಮುಖ ಬೇಡಿಕೆಯೆಂದರೆ ಅಸಂಘಟಿತ ಶ್ರಮಿಕರೂ ಸೇರಿದಂತೆ ಎಲ್ಲಾ ಶ್ರಮಿಕರಿಗೂ ಸಾಮಾಜಿಕ



ಭದ್ರತೆ. 1995 ರಲ್ಲಿ ಭವಿಷ್ಯ ನಿಧಿ ಕಾನೂನಿನಲ್ಲಿ ಏಕಪಕ್ಷೀಯ ತಿದ್ದುಪಡಿಗಳೊಂದಿಗೆ ಸಂಘಟಿತ ಉದ್ದಿಮೆಗಳಲ್ಲಿನ ಕಾರ್ಮಿಕರೇ ಪೆನ್ಷನ್ ಮತ್ತು ಭವಿಷ್ಯ ನಿಧಿಯಿಂದ ವಂಚಿತರಾಗಿದ್ದಾರೆ. ಈ ತಿದ್ದುಪಡಿಯ ಮೊದಲು ಕಾರ್ಮಿಕರು ಮತ್ತು ಮಾಲಕರು ಸಮಾನ ಪ್ರಮಾಣದಲ್ಲಿ ವಂತಿಗೆ ನೀಡುತ್ತಿದ್ದು ಅದು ಕಾರ್ಮಿಕರ ಖಾತೆಗೆ ಸಾಮಾಜಿಕ ಭದ್ರತೆ ಒದಗಿಸಲಿಕ್ಕಾಗಿ ಜಮಾ ಆಗುತ್ತಿತ್ತು. ಈಗ 1995 ರ ತಿದ್ದುಪಡಿಯ ನಂತರ ಮಾಲಕರ ವಂತಿಗೆ ಸರಕಾರದ ಮೂಲಕ ಭವಿಷ್ಯ ನಿಧಿ ಸಂಘಟನೆಗೆ ಹೋಗುತ್ತದೆ. ಅಲ್ಪ ಮೊತ್ತವನ್ನು ಮಾತ್ರವೇ ಪೆನ್ಷನ್‌ಗೆ ಒದಗಿಸಲಾಗುತ್ತದೆ, ಕಾರ್ಮಿಕರಿಗೆ ಪೂರ್ಣ ಸೌಲಭ್ಯಗಳನ್ನು ವಂಚಿಸಲಾಗುತ್ತಿದೆ. ಈ ತಿದ್ದುಪಡಿ ತರುವಾಗ ನಡೆಸಿದ ಪ್ರಚಾರವೆಂದರೆ ಅಸಂಘಟಿತ ಕಾರ್ಮಿಕರಿಗೂ ಇದರಿಂದ ಪ್ರಯೋಜನವಾಗುತ್ತದೆ ಎಂದು. ಇದು ಕೇವಲ ಭ್ರಮೆ. ಅಸಂಘಟಿತ ಕಾರ್ಮಿಕರನ್ನು ಭವಿಷ್ಯ ನಿಧಿ ಯೋಜನೆಯ ವ್ಯಾಪ್ತಿಯೊಳಗೆ ತರದಿದ್ದರೆ ಅವರಿಗೆ ಪೆನ್ಷನ್ ಮಾತ್ರವಲ್ಲ, ಬೇರೆ ಯಾವ ಸೌಲಭ್ಯವೂ ದೊರೆಯುವುದಿಲ್ಲ. ಬಹುಪಾಲು ಕಾರ್ಮಿಕರನ್ನು ಭವಿಷ್ಯ ನಿಧಿ ವ್ಯಾಪ್ತಿಯೊಳಗೆ ತರದೇ ಬಿಟ್ಟಿರುವುದರಿಂದಾಗಿ ಸಂಘಟಿತ ಕಾರ್ಮಿಕರನ್ನು ಅವರ ಹೆಸರಲ್ಲಿ ಲೂಟಿ ಮಾಡಿದರೂ, ಅವರಿಗೆ ಮಾತ್ರ ಯಾವುದೇ ಸೌಲಭ್ಯ ಸಿಗುವ ಸಾಧ್ಯತೆಯಿಲ್ಲ.

ಇಂದಿರಾ ಸರ್ಕಾರ ತುರ್ತುಪರಿಸ್ಥಿತಿ ಕಾಲದಲ್ಲಿ ಇಪ್ಪತ್ತಂಶಗಳ ಕಾರ್ಯಕ್ರಮದಡಿಯಲ್ಲಿ 'ಕಲ್ಯಾಣ ಮಸೂದೆಗಳು' ಎಂಬುದನ್ನು ತಂದಿತು. ಬೀಡಿ ಕಾರ್ಮಿಕರ ಕಲ್ಯಾಣ ಮಸೂದೆ ಇವುಗಳಲ್ಲಿ ಒಂದು. ಈ ಮಸೂದೆಯು ವ್ಯಾಪ್ತಿಗೆ ಎಲ್ಲಾ ಬೀಡಿ ಸಂಸ್ಥೆಗಳನ್ನು ತರುವಲ್ಲಿ ಸರಕಾರದ ವಿಫಲತೆಯಿಂದಾಗಿ ಈ ಶಾಸನದಿಂದ ಕಾರ್ಮಿಕರಿಗೆ ಬಹಳವೇನೂ ಪ್ರಯೋಜನವಾಗಿಲ್ಲ. ಮೇಲ್ತೆರಿಗೆ (ಸೆಸ್)ಯನ್ನು ಪೂರ್ಣವಾಗಿ ಸಂಗ್ರಹಿಸದಿದ್ದರೆ ಹಣ ಸಾಕಷ್ಟು ಸಿಗದೆ ಈ ಯೋಜನೆ ಅಸ್ತಿಪಂಜರವಾಗಿಯೇ ಉಳಿಯುತ್ತದೆ. ಕಾರ್ಮಿಕರಿಗೆ ಕೈಕೊಡಲಾಗುತ್ತದೆ. ಅವರ ಕನಿಷ್ಠ ಆರೋಗ್ಯ ಪಾಲನೆ ಸೌಲಭ್ಯಗಳನ್ನಾದರೂ ಕೊಡಿ ಎಂದು ಆಗ್ರಹಿಸುತ್ತಿದ್ದಾರೆ. ಬೀಡಿ ಕಾರ್ಮಿಕರು ಬಹಳ ಸಂಖ್ಯೆಯಲ್ಲಿರುವ ದಕ್ಷಿಣ ಕನ್ನಡದಂತಹ ಪ್ರದೇಶಗಳಲ್ಲಿ ಸರಕಾರ ಪೂರ್ಣ ಪ್ರಮಾಣದ ಆಸ್ಪತ್ರೆಗಳನ್ನು ತೆರೆದಿಲ್ಲ. ಕಾರ್ಮಿಕರ ಮಕ್ಕಳಿಗೆ ತುಂಬಾ ಸೀಮಿತ ಮಟ್ಟದಲ್ಲಿ ಕೆಲವು ಸ್ಕಾಲರ್‌ಶಿಪ್‌ಗಳನ್ನು ಕೊಡಲಾಗುತ್ತಿದೆ. ಕಲ್ಯಾಣ ನಿಧಿ ಮಾಡಿ ಬರುವ ಗೃಹ ಯೋಜನೆಗಳು ಕಾರ್ಮಿಕರಿಗೆ ವಸತಿ ಒದಗಿಸುವುದಿಲ್ಲ.

ಅಸಂಘಟಿತ ಕಾರ್ಮಿಕರೂ ಸೇರಿದಂತೆ ಸಾಮಾಜಿಕ ಭದ್ರತೆ ಎಲ್ಲಾ ಕಾರ್ಮಿಕರಿಗೂ ಒಂದು ಆದ್ಯತೆಯಾಗಿರಬೇಕು.

ಕೃಷಿ ಕೂಲಿಕಾರರಿಗೆ ಸಮಗ್ರ ಶಾಸನ

ಕೃಷಿ ಕಾರ್ಮಿಕರಿಗೆ ಒಂದು ಸಮಗ್ರ ಶಾಸನದ ಬೇಡಿಕೆ ದೀರ್ಘಕಾಲದಿಂದ ಬಾಕಿ ಉಳಿದಿರುವ ಒಂದು ಬೇಡಿಕೆ. ಹಿಂದಿನ ಎಲ್ಲಾ ಸರಕಾರಗಳು ಈ ವಿಚಾರದೊಡನೆ ಆಟವಾಡುತ್ತಾ ಅದನ್ನು ಮೂಲೆಗೆ ತಳ್ಳುವಲ್ಲಿ ಯಶಸ್ವಿಯಾದವು. ಈ ದೇಶದ ಅಸಂಘಟಿತ ಕಾರ್ಮಿಕರಲ್ಲಿ ಕೃಷಿ ಕೂಲಿಕಾರರ ಸಂಖ್ಯೆ ಶೇ 50. ಅವರ ಕೆಲಸದ ಪರಿಸ್ಥಿತಿ ಸುಧಾರಣೆ ಮತ್ತು ಕಲ್ಯಾಣವಿಲ್ಲದೆ ಯಾವುದೇ ಶ್ರಮಿಕರಿಗೆ ಸಂಬಂಧಪಟ್ಟಂತೆ ಪ್ರಗತಿ ಸಾಧ್ಯವಿಲ್ಲ. ನಗರಗಳ ಶ್ರಮ ಮಾರುಕಟ್ಟೆಯಲ್ಲಿ ಕಟ್ಟಡ ಕಾರ್ಮಿಕರು ಇತ್ಯಾದಿ ರೂಪಗಳಲ್ಲಿ ಪ್ರವಾಹೋಪಾದಿಯಲ್ಲಿ ಬರುವವರು ಕೃಷಿ ಕೂಲಿಕಾರರೇ. ಇವರ ಪರಿಸ್ಥಿತಿ ಸುಧಾರಿಸದೆ ಬೇರೆ ಯಾವುದೇ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಎತ್ತಲು ಸಾಧ್ಯವಾಗುವುದಿಲ್ಲ.

ಉದ್ಯೋಗ ನಷ್ಟದ ಧೋರಣೆ ಬದಲಿಸಿ

ಉದಾರೀಕರಣ - ಖಾಸಗೀಕರಣ - ಜಾಗತೀಕರಣದ ನೀತಿಗಳು ಉದ್ಯೋಗರಹಿತ ಬೆಳವಣಿಗೆಯನ್ನೇ ತರುತ್ತಿವೆ. ಉದ್ಯೋಗವಕಾಶ ಕುಗ್ಗುತ್ತಿರುವಂತೆ ಮಾಲಕರ ಲಾಭ ಹಿಗ್ಗುತ್ತಿದೆ. ಉದ್ದಿಮೆ ವಲಯದಿಂದ ಬಿಡುಗಡೆಯಾದ ಹಣವನ್ನು ಸೇವಾ ವಲಯದಲ್ಲಿ ಹೂಡಿಕೆ ಮಾಡಿ ಅವರು ಅಪಾರ ಲಾಭ ಗಳಿಸುತ್ತಿದ್ದಾರೆ. ಹಣಕಾಸು ವಲಯವನ್ನು ತೆರೆಯುವಂತೆ ಅವರು ಮಾಡಿದ್ದಾರೆ. ಬ್ಯಾಂಕು, ವಿಮಾ ಕಂಪನಿಗಳಲ್ಲಿ ಉದ್ಯೋಗವಕಾಶ ಬಹಳ ಕಮ್ಮಿ ಅಥವಾ ಇಲ್ಲವೇ ಇಲ್ಲ. ದೇಶದ ಅಪಾರ ನಿರುದ್ಯೋಗಿ ಜನಸ್ತೋಮಕ್ಕೆ ಕೆಲಸವಿಲ್ಲ. ಇಂತಹ ನೀತಿಗಳಿಂದ ಅವರ ಭವಿಷ್ಯ ಮಂಕಾಗಿದೆ. ದೇಶದಲ್ಲಿ ಉದ್ಯೋಗವನ್ನು ಇಳಿಸುವ, ನಿರುದ್ಯೋಗವನ್ನು ಹೆಚ್ಚಿಸುವ ಗುರಿ ಹೊಂದಿರುವ ನೀತಿಗಳನ್ನು ಬದಲಾಯಿಸಬೇಕು ಎಂಬುದು ಮೇ 21 ರ ಮುಷ್ಕರದ ಒಂದು ಬೇಡಿಕೆ. ಆದ್ದರಿಂದ ನಿರುದ್ಯೋಗಿ ಯುವಕರನ್ನು ಈ ಚಳುವಳಿಯತ್ತ ಸೆಳೆಯಬೇಕು.

ಬೋನಸ್ ಕಾಯ್ದೆ ತಕ್ಷಣವೇ ಬದಲಾಗಲಿ

1965 ರ ಬೋನಸ್ ಕಾಯಿದೆ ಜಾರಿಯಾಗುವವರೆಗೆ ಬೋನಸ್ ಮೇಲೆ ಮಿತಿಯಿರಲಿಲ್ಲ. ಮಿಗುತೆಗೊಂಡ ನಿಧಿಯಲ್ಲಿ ಶೇ 60 ರವರೆಗೆ ಬೋನಸ್ ಆಗಿ ಹಂಚುವಂತೆ ಹೋರಾಟ ಮಾಡಿ ಪಡೆಯಲು ಕಾರ್ಮಿಕರಿಗೆ ಸಾಧ್ಯವಾಗಿತ್ತು. 1965 ರ ಶಾಸನ ಬೋನಸನ್ನು ಮೊದಲಿಗೆ ಶೇ 20 ಕ್ಕೆ ಮಿತಿಗೊಳಿಸಿತು. ಆಗಲೂ 1600 ರೂ. ವರೆಗೆ ಮಿತಿ ಅನ್ವಯವಾಗುತ್ತಿತ್ತು. ಆಗಲೂ 1600 ರೂ. ವರೆಗೆ ಮಿತಿ ಅನ್ವಯ

ಪುಟ 10 ಕ್ಕೆ

ಕೃಷಿ ವಲಯವನ್ನು ಸರ್ವನಾಶ ಮಾಡುತ್ತಿರುವ ನೀತಿಗಳ ವಿರುದ್ಧ

ರೈತ-ಕೂಲಿಕಾರರು ಪ್ರತಿಭಟನೆಯ ಸಾಗರಕ್ಕೆ

ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಎನ್.ಡಿ.ಎ ಸರ್ಕಾರ, ಕರ್ನಾಟಕದಲ್ಲಿ ಕೃಷ್ಣರ ರಾಜ್ಯ ಸರ್ಕಾರ - ಎರಡೂ ಒಟ್ಟಾಗಿ ಗ್ರಾಮೀಣ ಪ್ರದೇಶದ ಮತ್ತು ರೈತ-ಕೂಲಿಕಾರರ ವಿರುದ್ಧ ಕೃಷಿ ವಲಯವನ್ನು ಸರ್ವನಾಶ ಮಾಡಿ ಬಹುರಾಷ್ಟ್ರೀಯ ಕಂಪನಿಗಳಿಗೆ ಒತ್ತೆ ಹಾಕುವ ನಿಲುವನ್ನು ಎಗ್ಗಿಲ್ಲದೇ ಮುನ್ನಡೆಸುತ್ತಿವೆ.

ಪ್ರಧಾನ ಮಂತ್ರಿಗಳು - ಆಳುವ ಧಣಿಗಳು ತಾವು ತರುತ್ತಿರುವ ಸುಧಾರಣೆಗಳು ಜನರಿಗೆ ಹಿಡಿಸಿವೆ! ಆದ್ದರಿಂದ ಅವರು ಚಳುವಳಿಗಿಳಿಯುತ್ತಿಲ್ಲ, ಕೆಲವರಷ್ಟೇ ವಿರೋಧಿಸುತ್ತಿದ್ದಾರೆಂದು ಹೇಳುತ್ತಿದ್ದಾರೆ. ಮಾತ್ರವಲ್ಲ ಅವರ ಪರವಾಗಿರುವ ಮಾಧ್ಯಮಗಳು, ಪತ್ರಿಕೆಗಳು ಮತ್ತು ಟಿ.ವಿ ಮುಂತಾದವು-ಇವರು ತರುವ, ಗ್ರಾಮೀಣ ಪ್ರದೇಶ ಸರ್ವನಾಶ ಮಾಡುತ್ತಿರುವ ನೀತಿಗಳನ್ನು ಜನತೆ ಒಪ್ಪಿದ್ದಾರೆಂದು ತೀವ್ರ ಪ್ರಚಾರ ನಡೆಸುತ್ತಿದ್ದಾರೆ.

ಇಂತಹ ಸಂದರ್ಭದಲ್ಲಿ ನಾವೂ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ, ಬೇರೆ ಜನಸಮೂಹಗಳಾಗಿ ಜನವಿರೋಧಿ ನೀತಿ ವಿರೋಧಿಸಿದ್ದೇವೆ. ನಿಜ... ಆದರೆ ಎಲ್ಲರೂ ಒಗ್ಗೂಡಿ ದೇಶವ್ಯಾಪಿಯಾಗಿ ವ್ಯಾಪಕ- ಕಾರ್ಯಾಚರಣೆ ನಡೆಸಿ, ಆಳುವ ಜನರ ಸುಳ್ಳು ಪ್ರಚಾರ ಬಹಿರಂಗಪಡಿಸಬೇಕು ಮತ್ತು ನೊಂದ ಜನರ ದನಿಗಳನ್ನು ದೇಶವ್ಯಾಪಿಯಾಗಿ ಬೆಸೆದು ಈ ನೀತಿಗಳ ಜಾರಿಗೆ ತಡೆಯಾಗುವಂತೆ ಬೆಸೆಯಬೇಕಾಗಿದೆ.

ಆದ್ದರಿಂದ ಗ್ರಾಮೀಣ ಪ್ರದೇಶದ ಎಲ್ಲಾ ಜನ ವಿಭಾಗಗಳನ್ನು ಅವರನ್ನು ವ್ಯಾಪಕವಾಗಿ, ತೀವ್ರವಾಗಿ ಭಾದಿಸುವ ಪ್ರಶ್ನೆಗಳನ್ನು ಗುರುತಿಸಿ ಸರ್ಕಾರದ ನೀತಿಯ ಜೊತೆ ಜೋಡಿಸಿ ಹಳ್ಳಿ- ಹಳ್ಳಿಗಳಿಗೆ



ಲಕ್ಷಾಂತರ ಜನರಿಗೆ ವಿವರಿಸಲು ಗ್ರಾಮೀಣ ಪ್ರದೇಶದ ರೈತ-ಕೂಲಿಕಾರರ ಮಹಿಳೆಯರ-ಯುವಜನರ ಮತ್ತಿತರ ಕಾರ್ಮಿಕರ ಸಂಘಗಳು - ಆದರ ಕಾರ್ಯಕರ್ತರು ಅವಿರತ ಶ್ರಮ ಹಾಕಿ ಆಳುವ ಜನರ ಸೋಗಲಾಡಿತನವನ್ನು ಬಯಲಿಗೆಳೆಯಲು ಜನರನ್ನು ಕ್ರೋಢೀಕರಿಸುವ ಕೆಲಸದಲ್ಲಿ ಶ್ರಮಿಸುವುದು ಆಧ್ಯ ಕರ್ತವ್ಯವಾಗಿದೆ.

ಬೆಳ್ತಂಗಡಿಯಲ್ಲಿ ಕಾಲ್ನಡಿಗೆ ಜಾಥಾ

ಒಕ್ಕಲೆಬ್ಬಿಸಿದರೆ ನಾವೆಲ್ಲಿಗೆ ಹೋಗಬೇಕು?

ಸುಮಾರು 5 ದಶಕಗಳಿಂದ ಕೆಂಬಾವುಟದ ಅಡಿಯಲ್ಲಿ ಹಲವಾರು ಪ್ರಗತಿಪರ ಹೋರಾಟಗಳನ್ನು, ರೈತರ, ಕಾರ್ಮಿಕರ ಚಳುವಳಿಗಳನ್ನು ಬೆಳ್ತಂಗಡಿ ಕಂಡಿದೆ. ಜನರ ಮನದಾಳದಲ್ಲಿ ಅಚ್ಚಳಿಯದೆ ಉಳಿದ 'ವಳಚಿತ್ತಾಯು' ರೆಂದೇ ಪರಿಚಿತರಾಗಿದ್ದ ಸಂಗಾತಿ ಕೆ.ವಿ.ರಾವ್ ಉಜಿರೆ ಇವರ ಹೋರಾಟದ ಬದುಕು ತಾಲೂಕಿನ ಕಮ್ಯುನಿಸ್ಟ್ ಚಳುವಳಿಗೆ ಅಗ್ರಸ್ಥಾನ ನೀಡಿತ್ತು. ಭೂಮಾಲೀಕ ವರ್ಗ, ಧರ್ಮಾಧಿಕಾರಿಗಳ ಬಿಗಿ ಹಿಡಿತ, ವಿದೇಶಿ ನಿಧಿ ಪಡೆಯುವ ಸ್ವಯಂಸೇವಾ ಸಂಸ್ಥೆಗಳು ಕಮ್ಯುನಿಸ್ಟ್ ಚಳುವಳಿಗಳನ್ನು ಮುರಿಯಲು ನಿರಂತರ ಯತ್ನಿಸುತ್ತಿರುವಾಗಲೂ ಜಗ್ಗದೇ ಈ ಚಳುವಳಿ ಮುಂದೆ ಸಾಗಿದೆ. ತಾಲೂಕಿನ ಅರಣ್ಯ ವಾಸಿಗಳ ಒಕ್ಕಲೆಬ್ಬಿಸುವುದನ್ನು ವಿರೋಧಿಸಿ ಸಿಪಿಐ(ಎಂ)ನ ಕಾಲ್ನಡಿಗೆ ಜಾಥಾಕ್ಕೆ ಸಿಕ್ಕ ಜನತೆಯ ಅಪೂರ್ವ ಸ್ಪಂದನದ ಬಗ್ಗೆ ಕಿರು ವರದಿ.

"ಅರಣ್ಯ ರಕ್ಷಣೆಯ ಹೆಸರಲ್ಲಿ ನಮ್ಮನ್ನು ಒಕ್ಕಲೆಬ್ಬಿಸಿದರೆ ನಾವೆಲ್ಲಿಗೆ ಹೋಗ್ಬೇಕು? ನಮ್ಮ ತಂದೆ ಈ ಜಮೀನಿನಲ್ಲಿ ಕೃಷಿ ಮಾಡಿ ಬದುಕು ಸಾಗಿಸುತ್ತಿದ್ದರು. ಈಗ ಜಮೀನು ಬಿಟ್ಟು ಹೋಗಬೇಕೆಂದು ನೋಟೀಸ್ ಬಂದಿದೆ. ಮುಂದೇನು ಎಂಬುದೇ ತಿಳಿಯುತ್ತಿಲ್ಲ" ಇದು ಬೆಳ್ತಂಗಡಿ ತಾಲೂಕಿನ ಗ್ರಾಮವೊಂದರ ರೈತನೊಬ್ಬನ ಆತಂಕದ ಪ್ರಶ್ನೆ. ಜನವಿರೋಧಿ ನೀತಿ ವಿರುದ್ಧ ಜನ ಜಾಗೃತಿಗಾಗಿ ಸಿಪಿಐ(ಎಂ) ನಡೆಸಿದ ಕಾಲ್ನಡಿಗೆ ಜಾಥಾ ಗ್ರಾಮವೊಂದಕ್ಕೆ ಬಂದಾಗ ರೈತರಿಗೆ ಇಂತಹ ಹಲವು ಪ್ರಶ್ನೆಗಳು ಎದುರಾದವು.

ಜನತೆಯ ಅಪೂರ್ವ ಸ್ಪಂದನ

ಪಶ್ಚಿಮ ಘಟ್ಟದ ಬೆಟ್ಟಗುಡ್ಡಗಳ ನಡುವೆ ಇರುವ ಬೆಳ್ತಂಗಡಿ ತಾಲೂಕಿನ ಕುಗ್ರಾಮಗಳಲ್ಲಿ ಏಪ್ರಿಲ್ 10 ರಿಂದ 14 ರವರೆಗೆ 120 ಕಿ.ಮಿ. ದೂರ ಕಾಲ್ನಡಿಗೆಯಲ್ಲಿ ಸಂಚರಿಸಿದ ಈ ಜಾಥಾ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳಿಂದಾಗಿ ಜನರ ಬದುಕಿನ ಮೇಲೆ ಬೀರುವ ಕೆಟ್ಟ ಪರಿಣಾಮಗಳ ಬಗ್ಗೆ ಜನರಿಗೆ ತಿಳಿಸುತ್ತಾ ಮುನ್ನಡೆದಂತೆ ಗ್ರಾಮಸ್ತರು ಸ್ಪಂದಿಸಿದ ರೀತಿ ಅಪೂರ್ವವಾಗಿತ್ತು.

45 ಗ್ರಾಮಗಳನ್ನು ಹಾಯ್ದು ಹೋದ ಈ ಜಾಥಾ ಜನತೆಯ ನಿಜವಾದ ಸಮಸ್ಯೆಗಳನ್ನು ಕಣ್ಣಾರೆ ಕಂಡಿತು. ಕೂಲಿ ಕೆಲಸಕ್ಕಾಗಿ ಅಲೆದಾಟ, ಕುಡಿಯುವ ನೀರಿಗಾಗಿ ಪರದಾಟ, ಸಾರಿಗೆ ಸಮಸ್ಯೆ, ಹಕ್ಕು ಪತ್ರ, ರೇಷನ್ ಕಾರ್ಡ್, ವಿದ್ಯುತ್ ಸಮಸ್ಯೆ, ಹೊರೆಯಾಗುತ್ತಿರುವ ಸಾಲದ ಬಾಧೆ ಹೀಗೆ ಸಮಸ್ಯೆಗಳ ಪಟ್ಟಿಯನ್ನೇ ಜನತೆ ಜಾಥಾದ ಮುಂದಿಟ್ಟು ಪರಿಹಾರಕ್ಕೆ ಮೊರೆ ಇಡುತ್ತಿದ್ದ ರೀತಿ ಕರುಳು ಹಿಂಡುವಂತಿತ್ತು. ಗ್ರಾಮವೊಂದರಲ್ಲಿ 'ನೀರಿಗಾಗಿ ಕೊಡ ಹಿಡಿದು ಕೊಳಾಯಿ ಬಳಿ ಸಾಲಾಗಿ ನಿಂತ ಮಹಿಳೆ, ಮಕ್ಕಳ ಗೋಳು ಹೇಳತೀರದು. ದಿನಕ್ಕೆ ಅರ್ದಗಂಟೆ ಮಾತ್ರ ನೀರು ಬಿಡುತ್ತಾರೆ. ಇದರಿಂದ ಬದುಕಲು ಸಾಧ್ಯವೇ? ಎನ್ನುತ್ತಾರೆ ಐದು ಸೆಂಟ್ಸ್ ಮನೆಗಳ ವಠಾರದ ಜನ. ನಾವು ವಾಸ್ತವ್ಯ ಹೂಡಿ 30 ವರ್ಷ ಕಳೆದರೂ ಇನ್ನೂ ಹಕ್ಕು ಪತ್ರ ಸಿಕ್ಕಿಲ್ಲ ಎಂಬುದು ಇವರ ಮತ್ತೊಂದು ದೂರು.

ಬೀಡಿ ಕಾರ್ಮಿಕರದು ಮತ್ತೊಂದು ಸಮಸ್ಯೆ. ವಾರಪೂರ್ತಿ ಕೆಲಸ ಸಿಗುವುದಿಲ್ಲ. ಮಾಲೀಕರು ಕಳಪೆ ಎಲೆ ನೀಡಿ ದಂಡ ವಸೂಲಿ ಮಾಡುತ್ತಾರೆ. ಇದನ್ನು ವಿರೋಧಿಸುವ ಸಲುವಾಗಿ ಸಂಘಟನೆಗೆ ಸೇರಿದರೆ, ಕೆಲಸವನ್ನೇ ಕೊಡುವುದಿಲ್ಲವೆಂಬ ಗುತ್ತಿಗೆದಾರರ ಬೆದರಿಕೆ ಮಧ್ಯೆ ಇವರ ಬದುಕು ಸಾಗುತ್ತಿದೆ. ನಾಗರಿಕ ಟ್ರಸ್ಟಿನವರು ನಮಗೆ ಕೆಲಸ ಕೊಡಿಸುತ್ತೇವೆಂದು ಹೇಳಿ ಪ್ರತಿಯೊಬ್ಬರಿಂದ 10 ರೂ. ವಸೂಲಿ ಮಾಡಿದರು. ಆದರೆ ನಮ್ಮ ಸಮಸ್ಯೆ ಕೇಳಲು ಅವರು ಬರುವುದಿಲ್ಲ ಎಂಬುದು ಅವರ ದೂರು.

'ಹಿಂದೂ ನಾವೆಲ್ಲಾ ಒಂದು' ಎಂಬ ಘೋಷಣೆಯಡಿ ಅಧಿಕಾರಕ್ಕೆ ಬಂದ ಬಿಜೆಪಿ ನಮ್ಮ ಬೆಳೆಗೆ ಬೆಲೆ ಇಲ್ಲದಂತೆ ಮಾಡಿತು. ಕೂಲಿ ಕೆಲಸವೂ ಸಿಗದಂತೆ ಮಾಡಿತು ಎನ್ನುವ ಜನರು ಕಾಂಗ್ರೆಸ್ಸನ್ನು ತಿರಸ್ಕಾರದಿಂದ ಕಾಣುತ್ತಿದ್ದುದು ಜಾಥಾದ ಗಮನಕ್ಕೆ ಬಂತು. ಜಾತಿ ಹೆಸರಿನಲ್ಲಿ ಸಂಘಟನೆ ಮಾಡಿ ಜಾತಿಯವರಿಗೆ ಓಟು ಕೊಡಿ ಎಂದು ಕೇಳುವ ಈ ಜನ ತಮ್ಮದೇ ಜಾತಿಯ ಬಡವರ ಸಂಬಂಧ ಬೆಳೆಸಲು ಸಿದ್ಧರಿಲ್ಲ. ಆದರೂ ನಾವು ಒಂದೇ ಜಾತಿ ಎಂದು ಹೇಳುತ್ತಾ ಜನರನ್ನು ಮರಳು ಮಾಡುತ್ತಾರೆ ಎಂದು ಹೇಳುವ ಜನರ ತಿಳುವಳಿಕೆ ಕಂಡು



ಆಶ್ಚರ್ಯವಾಯಿತು. ಸರ್ಕಾರಿ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಿದ್ದೇ ಹೀಗೆ ನಮ್ಮನ್ನು ಒಕ್ಕಲೆಬ್ಬಿಸುವುದಕ್ಕೆ ಕಾರಣ ಎಂದು ಸರ್ಕಾರದ ನೀತಿಯನ್ನು ಖಂಡಿಸಿದರು.

ನಿಧಿ ಸಂಗ್ರಹ

ಜಾಥಾ ಉದ್ದಕ್ಕೂ ಬಕೆಟ್ ಹಿಡಿದು ನಿಧಿ ಸಂಗ್ರಹಿಸಿದಾಗ ಹತ್ತು ಸಾವಿರ ರೂ.ಗಳ ಸಂಗ್ರಹ ವಾಯಿತು. ಹಳ್ಳಿಯ ಬಡಜನ 10, 20 ರೂ. ನೀಡಿದರೆ ನಗರದ ಮಧ್ಯಮ ವರ್ಗದ ಜನ 2, 5 ರೂ. ಕೊಡುತ್ತಿದ್ದರು. ಇದರಿಂದ ಹಳ್ಳಿಗಳ ಜನತೆ ನಮ್ಮ ಮೇಲೆ ಇಟ್ಟಿರುವ ಭರವಸೆ ಎಂತದೆಂ
ತಿಳಿಯುತ್ತದೆ. ನಾಲ್ಕು ಸಾವಿರ ರೂ.
ಜಾಥಾಗೆ ಖರ್ಚು ಮಾಡಲಾಯಿತು. ಜಾಥಾ
ದಿನಾ 30 ಕಿ.ಮಿ. ನಡೆದು ಸುಸ್ತಾದರೂ
ನೀಡಿದ ಸ್ಪಂದನದಿಂದಾಗಿ ಸ್ಪೂರ್ತಿ
ಯಾಗಲಿಲ್ಲ. 15 ಮಹಿಳೆಯರು ಸೇರಿ 50
ತಂಡದಲ್ಲಿ 70 ವರ್ಷದ ಸಂಗಾತಿ
ಅಬೂಬಕ್ಕರ್, ಪರಮೇಶ್ವರರವರ ನಡಿ
ಯುವಕ ಯುವತಿಯರಿಗೆ ಸ್ಪೂರ್ತಿ ನೀಡ
ಪಕ್ಷದ ತಾಲ್ಲೂಕು ಕಾರ್ಯದರ್ಶಿ ಶಿವಕು
ಮುಖಂಡರುಗಳಾದ ಬಿ.ಎಂ.ಭಟ್, ಹ
ಹಮೀದ್‌ರವರ ನೇತೃತ್ವ, ಜಯರಾಮ
ಶ್ಯಾಮರಾಜರ ಇಂಪಾದ ಅರ್ಥ
ಕ್ರಾಂತಿಗೀತೆಗಳು ಕಾರ್ಯಕರ್ತರಿಗೆ
ತುಂಬಿತು.

ಕ್ರಾಂತಿಗೀತೆ ಮತ್ತು ಘೋಷಣೆಗಳ
ಜಾಗತೀಕರಣ, ಖಾಸಗೀಕರಣ, ಉದಾ
ನೀತಿಗಳ ಜಾರಿಯಿಂದಾಗಿ ಆದ ದು
ಗಳು, ಕೇಂದ್ರ ಮತ್ತು ರಾಜ್ಯ ಸರ್ಕಾ
ವಿರೋಧಿ ನೀತಿಗಳ ಬಗ್ಗೆ ಮನ ಮ
ಜನತೆಗೆ ತಿಳಿಸಿದರು.

- ಬಿ.

ಮಹಿಳಾ ಸಮಸ್ಯೆಗಳಿಗೆ ಸ್ಪಂದಿ
ಕೇಂದ್ರವಾಗಿ ಕಛೇರಿ ಉದ್ಘಾ

ಶೋಷಿತ ಮಹಿಳೆಯರ ಪರ ಸ
ಎತ್ತಿ ಹೋರಾಟದ ಮುಂಚೂಣಿಯ
ಅಖಿಲ ಭಾರತ ಜನವಾದಿ ಮ
ಸಂಘಟನೆ(ಎಐಡಿಡಬ್ಲ್ಯೂಎ) ದ
ಕಛೇರಿಯನ್ನು ಮೇ ಒಂದರಂದು ಬೆಳ್ತ
ಮೂರು ಮಾರ್ಗದ ಬಳಿ ಸಂಘಟನೆ
ಜೊತೆ ಕಾರ್ಯದರ್ಶಿ ಕಾಂ. ಪ್ರ
ಉದ್ಘಾಟಿಸಿದರು.

ಕಚೇರಿಯನ್ನು ಉದ್ಘಾಟಿಸಿ ಮಾ
ಅವರು ಶೋಷಿತರಾದ ಮಹಿಳೆ
ಸಾಮಾಜಿಕ - ಆರ್ಥಿಕ ಪಿಡುಗ
ಮುಕ್ತಗೊಳಿಸಲು ಸದಾ ಸ್ಪಂದಿಸ
ಜೆ.ಎಂ.ಎಸ್ ಮುಂದಿನ ದಿನಗಳಲ್ಲಿ
ತಾಲೂಕಿನ ಶೋಷಿತ ಮಹಿ
ಆಶಾಕಿರಣವಾಗಿ ಬೆಳೆಯಲಿ ಎಂ
ಹಾರೈಸಿದರು.

ಮಾಜಿ ಶಾಸಕರಾದ ಜಿ.ವಿ.
ರೆಡ್ಡಿಯವರು ನೂತನ ಕಚೇರಿಗೆ
'ಸಮಾಜದ ಬದಲಾವಣೆಯ ಹೊ
ಮಹಿಳೆಯರು ನಿರ್ಣಾಯಕ ಪ
ವಹಿಸಬೇಕು' ಎಂದು ಶುಭ ಹಾರೈ

ಈ ಸಂದರ್ಭ ಜೆ.ಎಮ್.
ತಾಲ್ಲೂಕು ಅಧ್ಯಕ್ಷೆ ಸುಕನ್ಯಾ ಹರಿದಾಸ
ಕಾರ್ಯದರ್ಶಿ ತ್ರೆಸೀಯಾ ವಂ
ಕೋಶಾಧಿಕಾರಿ ಪ್ರಭಾವತಿ ಮ
ಪದಾಧಿಕಾರಿಗಳಾದ ಗುಣವತಿ, ಉ
ವಸುಂದರಾ ಮರಾಠೆ ಹಾಗೂ
ಚಿಂತಕಿ, ಪತ್ರಕರ್ತೆ ರಾಜೇಶ್ವ
ಉಪಸ್ಥಿತರಿದ್ದರು.

ಎಲ್ಲಾ ಸಮಸ್ಯೆಗಳಿಗೂ ವೇದಗಳಲ್ಲಿ ಪರಿಹಾರವಿದೆಯೆಂದು ಇತ್ತೀಚೆಗೆ ಮಹಾರಾಷ್ಟ್ರದ ಅಕ್ಕಲಕೋಟೆಯ ಸ್ಟಡೀಸ್ ಫಾರ್ ವೇದಿಕ್ ಸಂಸ್ಥೆಯ ಕಾಂ.ಶ್ರೀಕಾಂತ್ ಮಹರಾಜ, ನೇತ್ರತಜ್ಞ ಡಾ.ದೇಶಪಾಂಡೆ ಹೇಳಿದ್ದಾರಲ್ಲ. ಇದು ನಿಜವೇ?

- ಶರಣಬಸವ್, ಗಂಗಾವರ್

ಉತ್ತರ: ವೇದಗಳು ನಾಲ್ಕು ಎಂದು ಹೇಳಲಾಗುತ್ತಿದೆಯಾದರೂ ನಿಜವಾಗಿಯೂ ಅವು ಮೂರು ಮಾತ್ರ. ಸಾಮವೇದವೆಂಬುದು ಒಂದು ವೇದವಲ್ಲ, ಅದು ಋಗ್ವೇದವನ್ನು ಹಾಡುವುದು ಹೇಗೆ ಎಂದು ಹೇಳುತ್ತದೆ. ಹಾಗೂ ಅದು ಸ್ವತಂತ್ರವಲ್ಲ.

ಈ ವೇದಗಳು ನಾಲ್ಕು ನೂರು ಸಾವಿರ ವರುಷಗಳ ಹಿಂದಿನ ಬದುಕು, ಜಾನಪದ ನಂಬಿಕೆ, ಆಚರಣೆ ಅಂಶಗಳನ್ನು ಒಳಗೊಂಡಿದ್ದು ಅಂದಿನ ಜನ-ಜೀವನ ಸ್ಥಿತಿ ಅರಿಯಲು ಸಹಾಯಕವಾಗಬಲ್ಲವು. ಯಜುರ್ವೇದ ಯಜ್ಞ ಹೇಗೆ ಮಾಡುವುದು, ಅದರ ವಿವಿಧ ಹಂತಗಳ ಆಚರಣೆಗಳನ್ನು ವಿವರಿಸುತ್ತದೆ. ಅಗ್ನಿಯ ಮೂಲಕ ಎಲ್ಲಾ ವಸ್ತು-ವಿಷಯಗಳನ್ನು ಇಷ್ಟದೈವಕ್ಕೆ ಸಲ್ಲಿಸುವುದು ಎಂಬುದೇ ಅತ್ಯಂತ ತಪ್ಪು ಕಲ್ಪನೆ.

ಹೀಗಾಗಿ ವೇದಗಳಲ್ಲಿ ಇಂದಿನ ಭಾರತಕ್ಕೆ ಮಾತ್ರವಲ್ಲ ಸಾವಿರಾರು ವರುಷಗಳ ಹಿಂದಿನ ಸಮಾಜಕ್ಕೂ ಸೂಕ್ತವಲ್ಲ. ಅವುಗಳು ಜನಜೀವನವನ್ನು ನಿರ್ದೇಶಿಸುವ ಸತ್ವ- ಇರಲಿಲ್ಲ. ಆದ್ದರಿಂದ ವೇದಗಳಲ್ಲಿ ಇಂತಹ ಜ್ಞಾನ ಹುಡುಕುವುದು ಅರ್ಥಹೀನ.

ಈ ವೇದಗಳು ಸಂಸ್ಕೃತದಲ್ಲಿವೆ. ಅದರಲ್ಲೇನಿದೆ ಎಂದು ಬಹಳಷ್ಟು ಜನರಿಗೆ ಇಂದಿಗೂ ತಿಳಿದಿಲ್ಲ. ಆದ್ದರಿಂದಲೇ ಅದರಲ್ಲಿ ಬಹಳ, ಇದೆ ಎಲ್ಲಾ ಇದೆ ಎಂಬ ಭ್ರಮೆ ಹುಟ್ಟಿಸಲು ಸಾಧ್ಯವಾಗಿದೆ. ಅದು ನಾಟಕದ ಜ್ಞಾನವೆಂತಲೂ ನಂಬಿಸಲಾಗಿದೆ. ಆದರೆ ಸಮಾಜ ಬೆಳೆದಂತೆಲ್ಲಾ, ಶಿಕ್ಷಣವಿಸ್ತಾರವಾದಂತೆ ಬೇರೆ ಬೇರೆ ಭಾಷೆಗಳಿಗೆ ವೇದಗಳು ತರ್ಜುಮೆಯಾಗಿ ಜನರಿಗೆ ಸಿಗತೊಡಗಿದಾಗ, ವೇದ ಇಷ್ಟೇನಾ ಎಂದು ತಿಳಿಯಿತು. ಈಗಲೂ ಅವೆಲ್ಲಾ ಜನಸಾಮಾನ್ಯರಿಗೆ [illegible]ಗಿಸಿದಲ್ಲಿ ಅದರ ಬಗ್ಗೆ ತಿಳುವಳಿಕೆ ವಿಸ್ತಾರವಾಗುವುದು. ಆದರೆ ಹಿಂದೆ ವೇದಗಳನ್ನು ಸಾಮಾನ್ಯರು ಓದಬಾರದು, ಅದರಲ್ಲೂ ಮಹಿಳೆಯರು, ಕೆಳಜಾತಿ ಜನರು ಓದಲೇಬಾರದು. ಕಿವಿಯಿಂದಲೂ ಕೇಳಬಾರದು ಎಂದು ನಿರ್ಬಂಧ ಹೇರಿದರು. ಭ್ರಮೆ ಬೆಳೆಸಿದರು. ಜ್ಞಾನ ಪ್ರಸಾರಕ್ಕೆ ತಡೆಯೊಡ್ಡಿದರು.

ಇಂತಹ ವ್ಯವಸ್ಥೆಯ ವಿರುದ್ಧ ಪಂಜಾಬ್‌ನ ಗುರುನಾನಕರು ಸಿಡಿದೆದ್ದರು. ಹಾಗೇ ಕರ್ನಾಟಕದ 12ನೇ ಶತಮಾನದ ಶರಣ ಚಳುವಳಿ ವೈಧಿಕಶಾಹಿ ವಿರುದ್ಧ ಬಂಡೆದ್ದಿತು.

ವೇದವೆಂಬುದು ಓದಿನ ಮಾತು,
ಪುರಾಣವೆಂಬುದು ಪುಂಡರ ಗೋಷ್ಠಿ.......

ಎಂದು ಅಲ್ಲಮ ಪ್ರಭು ಹೇಳಿದ್ದಾರೆ.

ವೇದಗಳಿಗೆ ಬರೆಯ ಕಟ್ಟುವೆ
ಆಗಮಗಳ ಮೂಗು ಕೊಯ್ಯುವೆ....

ಎಂದರು ಬಸವಣ್ಣ. ಹೀಗೆ ದೇಶದ ಅನೇಕ ಕಡೆಗಳಲ್ಲಿ ಭಕ್ತಿಪಂಥ ವೇದಗಳ ಕುರಿತಾದ ಮಿಥ್ಯಗಳನ್ನು ಸವಾಲೆಸೆದು ಬಯಲಿಗೆಳೆದಿದೆ.

ಆದ್ದರಿಂದ ಆಧುನಿಕ ಭಾರತದ ಸಮಸ್ಯೆಗಳ ಪರಿಹಾರಕ್ಕೆ ಆಧುನಿಕ ವಿಚಾರಧಾರೆಗಳೇ ಬೇಕಾಗುತ್ತವೆ. ಪರಂಪರೆಯ ಉತ್ತಮ ಅಂಶಗಳನ್ನು ನಿರಾಕರಿಸಲೇಬೇಕಿಲ್ಲ.

ವೇದಗಳಲ್ಲೇ ಎಲ್ಲಾ ಪರಿಹಾರವಿದೆ ಎನ್ನುವುದು ನಿಜವಾದ ಸಮಸ್ಯೆಗಳಿಗೆ, ವೈಜ್ಞಾನಿಕ ಪರಿಹಾರ ಸಿಗದಂತೆ ಹಾದಿ ತಪ್ಪಿಸುವ, ಬದಲಾಗುತ್ತಿರುವ ಸಮಾಜದಲ್ಲಿ ವೈಜ್ಞಾನಿಕ ಚಿಂತನೆ ಹಾದಿ ಹಿಡಿಯದಂತೆ ದಿಕ್ಕು ತಪ್ಪಿಸುವ ಪ್ರಯತ್ನವನ್ನು ಮಾಡುತ್ತಾರೆ ಎಂದು ಹೇಳಲೇಬೇಕಿದೆ.

ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಚುನಾವಣೆಗಳು ನಡೆದಿವೆ. ಜನರ ಕೈಗೆ ಅಧಿಕಾರವನ್ನು ಇಂದಿನ ಸಂವಿಧಾನದ ಚೌಕಟ್ಟಿನೊಳಗೆ ನೀಡಿದ ಅಭೂತಪೂರ್ವ ಶ್ಲಾಘನೀಯ ಪ್ರಯೋಗ ಎಡರಂಗ ಸರ್ಕಾರದ್ದು. ವಿಶ್ವದಲ್ಲಿಯೇ ವಿಶಿಷ್ಟವಾದುದು. ಇದು ದುಡಿವ ಜನತೆ ಮತ್ತು ಪಾಳೇಗಾರಿ ಪಟ್ಟಭದ್ರ ಹಿತಾಸಕ್ತಿಗಳ ನಡುವೆ ನಡೆಯುತ್ತಿರುವ ಸಮರ. ಅದರತ್ತ ಒಂದು ನೋಟ.

ಜನತೆಯ ಕೈಗೆ ಅಧಿಕಾರ

ಪಶ್ಚಿಮ ಬಂಗಾಳ ಪಂಚಾಯತ್ ಚುನಾವಣೆ

ಮತ್ತೊಮ್ಮೆ ಮಹಾಜೋತ್ ಪ್ರಯತ್ನ

1977 ರಲ್ಲಿ ಎಡರಂಗ ಸರ್ಕಾರದ ಪ್ರಥಮ ...ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ...ಕೂಡಲೇ ಕಾಂ.ಜ್ಯೋತಿಬಸುರವರು ಹೇಳಿದ ...ಮಾತು "ನನ್ನ ಸರಕಾರ 'ರೈಟರ್ಸ್ ಬಿಲ್ಡಿಂಗ್' (...ಬಂಗಾಳದ ವಿಧಾನಸೌಧ)ದಿಂದ ಕಾರ್ಯ ...ನಿರ್ವಹಿಸುವುದಿಲ್ಲ". ಅಂದರೆ ಅಧಿಕಾರ ...ಕೇಂದ್ರೀಕರಣದ ಮೂಲಕ ಗ್ರಾಮ ಮಟ್ಟಗಳಲ್ಲಿ ...ಜನತೆಯ ಕೈಗೆ ಅಧಿಕಾರ ಸಿಗುವಂತೆ ಎಡರಂಗ ...ಸಾಧನೆ ಮಾಡಿದೆ. 1978 ರಿಂದ ಇಂದಿನವರೆಗೆ ...ಸತತವಾಗಿ 5 ವರ್ಷಕ್ಕೊಮ್ಮೆ 5 ಬಾರಿ ಗ್ರಾಮ ...ಪಂಚಾಯತ್ ಚುನಾವಣೆ ನಡೆದಿದ್ದು, 6ನೇ ...ಚುನಾವಣೆ ಮೇ 11 ರಂದು ನಡೆಯುತ್ತಿದೆ. ಹೀಗೆ ...ಸತತವಾಗಿ ಚುನಾವಣೆ ನಡೆಯುತ್ತಿರುವುದು ...ದೇಶದಲ್ಲಿ ದಾಖಲೆ.

ವಿಪರ್ಯಾಸವೆಂದರೆ, 1973 ರಲ್ಲಿ ಅಂದಿನ ...ಕಾಂಗ್ರೆಸ್ ಸರಕಾರ ಪಂಚಾಯತ್ ಕಾಯಿದೆ ಜಾರಿಗೆ ...ತಂದಿತ್ತು. ಆದರೆ ಚುನಾವಣೆ ನಡೆಸಿರಲಿಲ್ಲ. ...ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರವೇ ...ಚುನಾವಣೆ ನಡೆಯಿತು.

1999 ರಲ್ಲಿ ನಡೆದ ಚುನಾವಣೆಯಲ್ಲಿ ಶೇ 65 ...ಗ್ರಾಮ ಪಂಚಾಯತುಗಳಲ್ಲಿ,ಶೇ 89 ಪಂಚಾಯತು ...ಸಮಿತಿ ಹಾಗೂ ಎಲ್ಲಾ 16 ಜಿಲ್ಲಾ ಪರಿಷತ್‌ಗಳಲ್ಲಿ ...ಎಡರಂಗ ಜಯಭೇರಿ ಸಾಧಿಸಿತ್ತು.

ಆದ್ದರಿಂದಲೇ 2003 ರ ಮೇ 11 ರಂದು ...ನಡೆಯುವ ಚುನಾವಣೆಯಲ್ಲಿ, ಕಾಂಗ್ರೆಸ್, ಬಿಜೆಪಿ ...ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷಗಳು, ಎಡರಂಗ ...ವನ್ನು ಅದರಲ್ಲೂ ಸಿಪಿಐ(ಎಂ) ಅಭ್ಯರ್ಥಿಗಳನ್ನು ...ಸೋಲಿಸಬೇಕೆಂಬ ಏಕೈಕ ಉದ್ದೇಶದಿಂದ ಶೇ 33 ...ಸ್ಥಾನಗಳಲ್ಲಿ ನೇರವಾಗಿ, ಕೆಲವೆಡೆ ಪರೋಕ್ಷವಾಗಿ ಮೈತ್ರಿ ಮಾಡಿಕೊಂಡಿದೆ.

ಈ ಪಕ್ಷಗಳಿಗೆ ಇಂತಹ ಮೈತ್ರಿ ಹೊಸತೇನಲ್ಲ. ಹಿಂದೆ ಕೇರಳದಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಸಿಪಿಐ(ಎಂ) ಗೆಲ್ಲುತ್ತದೆ ಎಂಬ ಕ್ಷೇತ್ರಗಳಲ್ಲಿ ಆರ್‌ಎಸ್‌ಎಸ್/ ಬಿಜೆಪಿ ತನ್ನ ಬೆಂಬಲಿಗರ ಮತಗಳನ್ನು ಕಾಂಗ್ರೆಸ್‌ಗೆ ವರ್ಗಾಯಿಸಿತ್ತು. ಮಾತ್ರವಲ್ಲ ಬಂಗಾಳದಲ್ಲಿ ಎಡರಂಗದ ವಿರುದ್ಧ 'ಮಹಾಜೋತ್' (ಎಲ್ಲಾ ವಿರೋಧ ಪಕ್ಷಗಳ ಮೈತ್ರಿಕೂಟ) ಘೋಷಣೆ ಯನ್ನು ಬಿಜೆಪಿ ನೀಡಿತ್ತು.

ಬಿಜೆಪಿ ಪ್ರತಿಪಾದನೆ

ಇತ್ತೀಚೆಗೆ ಕೇರಳದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಬಿಜೆಪಿ ಅಧ್ಯಕ್ಷ ವೆಂಕಯ್ಯ ನಾಯ್ಡು, ಬಂಗಾಳ ಪಂಚಾಯತ್ ಚುನಾವಣೆಗಳಲ್ಲಿ ನಾಮಪತ್ರ ಸಲ್ಲಿಸಲು ಅವಕಾಶ ನೀಡಲಿಲ್ಲ. ಮಾತ್ರವಲ್ಲದೆ, ದೊಂಬಿಗಳು ಹೆಚ್ಚುತ್ತಿವೆ ಎಂದೂ, ಇದಕ್ಕೆ ಸಿಪಿಐ(ಎಂ) ಕಾರಣವೆಂದೂ ದೂರಿದ್ದರು. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಮಧ್ಯಪ್ರವೇಶ (ರಾಷ್ಟ್ರಪತಿ ಆಡಳಿತ) ಮಾಡಬೇಕಾಗುತ್ತದೆ ಎಂದೂ ಎಚ್ಚರಿಸಿದ್ದರು. ಮೂರು ತಿಂಗಳ ಹಿಂದೆ ದೆಹಲಿಯಲ್ಲಿ ನಡೆದ ವಿಶ್ವ ಹಿಂದೂ ಪರಿಷತ್‌ನ ಸಮಾವೇಶದಲ್ಲೂ ಪಶ್ಚಿಮ ಬಂಗಾಳದ ಸಿಪಿಐ(ಎಂ) ಸರ್ಕಾರವನ್ನು ವಜಾ ಗೊಳಿಸಬೇಕೆಂಬ ಬೇಡಿಕೆ ಇಟ್ಟಿದುದನ್ನು ಇಲ್ಲಿ ಸ್ಮರಿಸಬಹುದು.

ಇಂತಹದೇ ಆರೋಪವನ್ನು ಕಾಂಗ್ರೆಸ್ (ಐ) ಮತ್ತು ತೃಣಮೂಲ ಕಾಂಗ್ರೆಸ್ ಹಾಗೂ ಇನ್ನಿತರ ಕಮ್ಯುನಿಸ್ಟ್ ವಿರೋಧಿ ಪಕ್ಷಗಳು ನಡೆಸಿವೆಯಾದರೂ, ರಾಜ್ಯ ಚುನಾವಣಾ ಆಯೋಗದಲ್ಲಿಯಾಗಲೀ ಯಾವುದೇ ಪೋಲೀಸ್ ಠಾಣೆಯಲ್ಲಾಗಲೀ ನಾಮಪತ್ರ ಸಲ್ಲಿಸಲು ಸಧ್ಯವಾಗಿಲ್ಲ ಎಂದು ಒಂದೇ ಒಂದು ದೂರು ದಾಖಲಾಗಿಲ್ಲ.

ಅಭ್ಯರ್ಥಿಗಳಿಲ್ಲ!


ರಾಜಕೀಯವಾಗಿ ಧ್ರುವೀಕರಣಗೊಂಡಿರುವ ಪಶ್ಚಿಮ ಬಂಗಾಳದಲ್ಲಿ ಈ ಮೂರು ಪಕ್ಷಗಳು ಮೈತ್ರಿ ಮಾಡಿಕೊಂಡರೂ ಚುನಾವಣೆ ಗೆಲ್ಲಲಾಗುತ್ತಿಲ್ಲ. 1978 ರಿಂದ 1993 ರ ಕಾಂಗ್ರೆಸ್ ಏಕೈಕ ಪ್ರಮುಖ ಪಕ್ಷವಾಗಿದ್ದು ನಂತರ ತೃಣಮೂಲ-ಬಿಜೆಪಿ ಸೇರಿಕೊಂಡವು. ಅಂದರೆ ಅವರ ಬೆಂಬಲಿಗರು ಹೆಚ್ಚಾಗಿ ಕಾಂಗ್ರೆಸ್ ಪಕ್ಷದಿಂದಲೇ ಬಂದವರಾಗಿದ್ದರು. ಆದ್ದರಿಂದ ಸತತವಾಗಿ ಎಡರಂಗದ ಅಭ್ಯರ್ಥಿಗಳು ಗೆದ್ದು ಬರುತ್ತಿರುವ ಪಂಚಾಯತು ಪ್ರದೇಶಗಳಲ್ಲಿ 'ಸೋಲು ಗ್ಯಾರಂಟಿ' ಎಂದು ಅರಿತ ರಾಜಕೀಯ ಪಕ್ಷದವರು ನಾಮಪತ್ರವನ್ನೇ ಸಲ್ಲಿಸಲಿಲ್ಲ. ಇದು ಸಾಧಾರಣ 20,000 ದಷ್ಟಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಆದರೆ ಈ ಅಂಶವನ್ನು ಮುಚ್ಚಿಟ್ಟು ಸಿಪಿಐ(ಎಂ) ಬೆಂಬಲಿಗರು ನಾಮ ಪತ್ರ ಸಲ್ಲಿಸಲು ಅವಕಾಶ ನೀಡಲಿಲ್ಲ' ಎಂದು ಆರೋಪಿಸಲಾಗಿದೆ. ಬಂಡವಾಳಗಾರರ ಬೆಂಬಲಿಗ ಪತ್ರಿಕೆಗಳೂ ಸಹ ಈ ಆರೋಪವನ್ನು ಮುಖಪುಟದಲ್ಲಿ ಮುದ್ರಿಸುತ್ತಿದ್ದು, ಈ ಪಕ್ಷಗಳಿಗೆ ನೆರವಾಗುತ್ತಿವೆ.

ಸಂದರ್ಭಸಾಧಕ ಮೈತ್ರಿ

ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ನೇರವಾಗಿ ಮೈತ್ರಿ ಮಾಡಿಕೊಂಡಿದ್ದರೆ ಕಾಂಗ್ರೆಸ್‌ನೊಂದಿಗೆ ಪರೋಕ್ಷವಾಗಿ ಮೈತ್ರಿ ಮಾಡಿಕೊಂಡಿದೆ. 2001 ರ ಅಸೆಂಬ್ಲಿ ಚುನಾವಣಾ ಸಂದರ್ಭದಲ್ಲಿ ತೃಣಮೂಲ ಕಾಂಗ್ರೆಸ್, ಕಾಂಗ್ರೆಸ್(ಐ) ನೊಂದಿಗೆ ಮೈತ್ರಿ ಮಾಡಿಕೊಂಡಿತ್ತು. ಈಗ ಕಾಂಗ್ರೆಸ್ ಬಿಟ್ಟು ಬಿಜೆಪಿಯೊಂದಿಗೆ ಸೇರಿದ್ದೇಕೆ ಎಂದು ಮಮತಾ ಬ್ಯಾನರ್ಜಿಯವರನ್ನು ಪ್ರಶ್ನಿಸಿದರೆ, 'ಕಾಂಗ್ರೆಸ್ ಸಿಪಿಐ(ಎಂ)ನ ಹಿಂಬಾಲಕ' ಎಂದು ಹೇಳುತ್ತಾರೆ.

ಆದರೆ ಕಾಂಗ್ರೆಸ್‌ನ ಪ್ರಣಾಳಿಕೆ ಪ್ರಕಾರ 1997 ರಲ್ಲಿ ಕಾಂಗ್ರೆಸ್ಸಿನಿಂದ ಸಿಡಿದುಹೋದ ತೃಣಮೂಲ ಕಾಂಗ್ರೆಸ್ (ಟಿಎಂಸಿ), ಸಿಪಿಐ(ಎಂ)ನ್ನು ಬಲಪಡಿಸುತ್ತಿದೆ ಎಂದು ಆರೋಪಿಸಿದೆ. ತೆಹಲ್ಕಾ ಹಗರಣದ ಹಿನ್ನೆಲೆಯಲ್ಲಿ ಬಿಜೆಪಿಯನ್ನು ತ್ಯಜಿಸಿದ ಟಿಎಂಸಿ, ಈಗ ಕೇಂದ್ರ ಸರಕಾರದಲ್ಲಿ ಸಚಿವ ಹುದ್ದೆಯನ್ನು ಪಡೆಯುವುದಕೋಸ್ಕರ ಬಿಜೆಪಿಯೊಂದಿಗೆ ಪುನಃ ಮೈತ್ರಿ ಮಾಡಿಕೊಂಡಿದೆ ಎಂದು ಹೇಳಿದೆ.

ಇನ್ನೊಂದೆಡೆಯಲ್ಲಿ ಬಿಜೆಪಿ ಅಧ್ಯಕ್ಷ ವೆಂಕಯ್ಯನಾಯ್ಡು, ಕೇರಳ, ಬಂಗಾಳದಲ್ಲಿ ಕಾಂಗ್ರೆಸ್‌ನೊಂದಿಗೆ 'ಕುಸ್ತಿ' ಮಾಡುತ್ತಿರುವ ಸಿಪಿಐ(ಎಂ), ದೆಹಲಿಯಲ್ಲಿ ಕಾಂಗ್ರೆಸ್‌ನೊಂದಿಗೆ 'ದೋಸ್ತಿ' ಮಾಡಿಕೊಂಡಿದೆ ಎಂದು ಆರೋಪಿಸಿದ್ದಾರೆ. ಅವರಿಗೆ ಸಿಪಿಐ(ಎಂ)ನ ರಾಜಕೀಯ ದೃಷ್ಟಿ ಎಳ್ಳಷ್ಟೂ ಅರ್ಥವಾಗಿಲ್ಲ. ಬಿಜೆಪಿ - ಕಾಂಗ್ರೆಸ್‌ಗೆ ವಿರುದ್ಧವಾಗಿ ರಾಜಕೀಯ ಪರ್ಯಾಯವನ್ನು ಕಟ್ಟುತ್ತಿರುವ ಸಿಪಿಐ(ಎಂ) ಕೋಮುವಾದಿ ಶಕ್ತಿಗಳನ್ನು ಸರಕಾರದಿಂದ ದೂರವಿಡುವ ದೃಷ್ಟಿಯಿಂದ ರಾಷ್ಟ್ರೀಯ ಮಟ್ಟದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನ್ನು ಒಂದೇ ತೆರನಾಗಿ ನೋಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ.



ಆರೋಪ, ಪ್ರತ್ಯಾರೋಪಗಳೇನೇ ಇರಲಿ, ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಸಿಪಿಐ(ಎಂ) ಮತ್ತು ಎಡರಂಗವನ್ನು ಸೋಲಿಸಲು ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್-ಬಿಜೆಪಿ ಮೈತ್ರಿ ಮಾಡಿಕೊಂಡಿದ್ದು, ಕಮ್ಯುನಿಸ್ಟ್ ಎಂದು ಹೇಳಿಕೊಳ್ಳುವ ಪೀಪಲ್ಸ್‌ವಾರ್‌ಗ್ರೂಪ್ (ಪಿಡಬ್ಲ್ಯುಜಿ), ಎಸ್‌ಯುಸಿಐ ನಂತಹ ಪಕ್ಷಗಳು ಸೇರಿಕೊಂಡಿರುವುದು ಸತ್ಯ.

ಯುವಜನರಿಗೆ ಹೆಚ್ಚು ಅವಕಾಶ

ಒಟ್ಟು 58,357 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು ಸಿಪಿಐ(ಎಂ) ನ 6283 ಅಭ್ಯರ್ಥಿಗಳು ಈಗಾಗಲೇ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಪಕ್ಷವು 50,599 ಸ್ಥಾನಗಳಿಗೆ ಸ್ಪರ್ಧಿಸಿದ್ದು ಶೇ 40 ರಷ್ಟು ಮಹಿಳೆಯರಿಗೆ ಸ್ಥಾನ ನೀಡಲಾಗಿದೆ. ಸಾಧಾರಣಾ 25,000 ಅಭ್ಯರ್ಥಿಗಳು 40 ಕ್ಕಿಂತಲೂ ಕಡಿಮೆ ವಯಸ್ಸಿನವರು.

ವಿವಿಧ ಪಕ್ಷಗಳಿಗೆ ಸೇರಿದ ಅಭ್ಯರ್ಥಿಗಳ ಸಂಖ್ಯೆ ಹೀಗಿವೆ -

ಸಿಪಿಐ(ಎಂ)	50,599
ಸಿಪಿಐ	2208
ಫಾರ್ವರ್ಡ್ ಬ್ಲಾಕ್	4550
ಆರ್‌ಎಸ್‌ಪಿ	5722
ಫಾರ್ವರ್ಡ್ ಬ್ಲಾಕ್ (ಮಾರ್ಕ್ಸಿಸ್ಟ್)	10
ಪ.ಬಂ.ಸಮಾಜವಾದಿ ಪಕ್ಷ	153
ಕಾಂಗ್ರೆಸ್(ಇ)	24678
ತೃಣಮೂಲ ಕಾಂಗ್ರೆಸ್	25552
ಬಿಜೆಪಿ	8962
ಪಿಡಿಎಸ್	1484

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಚುನಾವಣೆ ಕೇವಲ ರಾಜಕೀಯ ಪಕ್ಷಗಳ ನಡುವಿನ ಚುನಾವಣೆಯಲ್ಲ. ಶೋಷಿತ ದುಡಿಯುವ ಜನ, ಕೃಷಿಕೂಲಿಕಾರರು, ಸಣ್ಣ-ಮಧ್ಯಮ ರೈತರು, ಸಣ್ಣ ವ್ಯಾಪಾರಸ್ಥರು, ಪ್ರಗತಿಪರ ಚಿಂತಕರು ಒಂದೆಡೆಯಾದರೆ, ಇನ್ನೊಂದೆಡೆ ಭೂಮಾಲಕರು, ಪಟ್ಟಭದ್ರ ಹಿತಾಸಕ್ತಿಗಳ ಕೂಟದ ನಡುವಿನ ಹೋರಾಟವಾಗಿದೆ. ಅಂತೆಯೇ ಗ್ರಾಮ ಪಂಚಾಯತಿ ಚುನಾವಣೆಯ ಸಂದರ್ಭದಲ್ಲಿ ಸಿಪಿಐ(ಎಂ)ಗೆ ಸೇರಿದ 15 ಕಾರ್ಯಕರ್ತರು ಕೊಲೆಯಾಗಿದ್ದಾರೆ. ಉತ್ತರ ಬಂಗಾಳದ ಚೋಪ್ರಾ ಗ್ರಾಮದಲ್ಲಿ ಜಿಲ್ಲಾ ಸಮಿತಿಯ ಪ್ರಮುಖ ಸದಸ್ಯರೊಬ್ಬರ ಕೊಲೆಯೂ ನಡೆದಿದೆ. ಆದರೂ ಎಡರಂಗದ ಮೇಲೆ ಆಪಾದನೆ ಹೊರಿಸುತ್ತಿರುವುದು ಅಪಹಾಸ್ಯವೇ ಸರಿ.


ಎಡರಂಗದ ಸಾಧನೆಗಳು

1977 ರಲ್ಲಿ ಕಾಂ.ಜ್ಯೋತಿಬಸು ಹೇಳಿದಂತೆ ಬಂಗಾಳದಲ್ಲಿ ಗ್ರಾಮಮಟ್ಟಗಳಲ್ಲಿ ಪ್ರಜಾಪ್ರಭುತ್ವ ನೆಲೆಸಿದೆ. ಚುನಾಯಿತ ಸಮಿತಿಯು ಕೈಗೊಂಡ ನಿರ್ಣಯಗಳನ್ನು ಗ್ರಾಮದ ಸರ್ವ ಜನರ ಸಭೆಯಲ್ಲಿ ಒಪ್ಪಿಗೆ ಪಡೆದುಕೊಳ್ಳುವ ಪರಿಹಾರ ಬಹುಶಃ ಹಿಂದಿನ ಕೇರಳದಲ್ಲಿ ಬಿಟ್ಟರೆ ಇನ್ನೆಲ್ಲೂ ಇಲ್ಲ. ವಂಚನೆಯನ್ನು ತಡೆಗಟ್ಟಲು ಎಲ್ಲಾ ಪಂಚಾಯತಿಗಳ ಲೆಕ್ಕಪತ್ರಗಳನ್ನು ಆಡಿಟರ್ ಜನರಲ್ ಅವರಿಂದ ತಪಾಸಣೆಗೆ ಒಳಪಡಿಸಲಾಗುವುದು.

ರಾಜ್ಯದ ಅಭಿವೃದ್ಧಿ ಕಾರ್ಯಗಳಿಗಾಗಿ ವೆಚ್ಚವಾಗುವ ಶೇ.50 ರಷ್ಟು ಹಣವನ್ನು ಗ್ರಾಮ ಪಂಚಾಯತಿಗಳ ಮೂಲಕವೇ ನೀಡಲಾಗುವುದು. ಬಹುಶಃ ಇದು ದೇಶದಲ್ಲೇ ಪ್ರಥಮ.

10.73 ಲಕ್ಷ ಎಕರೆ ಭೂಮಿಯನ್ನು 27 ಲಕ್ಷ ಗ್ರಾಮೀಣ ಪ್ರದೇಶದ ಭೂರಹಿತರಿಗೆ ಹಂಚಲಾಗಿತ್ತು. ಭೂಮಿ ಪಡೆದವರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದವರೇ ಮೆಜಾರಿಟಿ. ಭೂಸುಧಾರಣೆಗೆ ಹೆಚ್ಚು ಒತ್ತು ನೀಡಿದ್ದುದ್ದರ ಫಲವಾಗಿ ಗ್ರಾಮೀಣ ಪ್ರದೇಶದಲ್ಲಿ ಜನರ ಕೊಳ್ಳುವ ಶಕ್ತಿ ಗಟ್ಟಿಯಾಗಿದೆ. ಇದರಿಂದಾಗಿ ಅಕ್ಕಿ ಉತ್ಪಾದನೆಯಲ್ಲಿ ಪಶ್ಚಿಮ ಬಂಗಾಳವೇ ಪ್ರಥಮ ಸ್ಥಾನದಲ್ಲಿದೆ. ಅಲ್ಲದೆ, ಸಣ್ಣ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಗಳು ಬೆಳೆದುಬಂದಿವೆ. ಆದ್ದರಿಂದಲೇ ಬಂಗಾಳದಲ್ಲಿ ಗ್ರಾಮೀಣ ಪ್ರದೇಶದಿಂದ ಪಟ್ಟಣ ಪ್ರದೇಶಕ್ಕೆ ವಲಸೆ ಹೋಗುವುದಿಲ್ಲ.


ಇಂತಹ ಸನ್ನಿವೇಶದಲ್ಲಿ ಪಶ್ಚಿಮ ಬಂಗಾಳದ ಪ್ರಜ್ಞಾವಂತ ಜನತೆ ತಾವು ಹೋರಾಟ ಮಾಡಿ ಗಳಿಸಿದ ಹಕ್ಕನ್ನು ಉಳಿಸಿಕೊಳ್ಳಲು ಎಡರಂಗದ ಅಭ್ಯರ್ಥಿಗಳನ್ನೇ ಅತ್ಯಧಿಕ ಸಂಖ್ಯೆಯಲ್ಲಿ ಆರಿಸಲಿದ್ದಾರೆ ಎಂದು ಆಶಿಸಲಾಗಿದೆ.



ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ

ಕರ್ನಾಟಕದಲ್ಲಿ ಗ್ರಾಮಪಂಚಾಯತ್

ನಮ್ಮ ರಾಜ್ಯದಲ್ಲಿ ಪಂಚಾಯತ್ ...ಚುನಾವಣೆಗೆ ಮಹತ್ವ ಬಂದಿದ್ದು ಪ್ರಥಮ ...ಕಾಂಗ್ರೆಸ್ಸೇತರ ಸರಕಾರ ಅಧಿಕಾರಕ್ಕೆಬಂದಾಗ. ...ಗುಂಡೂರಾಯರ ಕಾಂಗ್ರೆಸ್ ಸರಕಾರದ ವಿರುದ್ಧ ...ತೀವ್ರ ಹೋರಾಟ ನಡೆದು, 1983 ರಲ್ಲಿ ...ರಾಮಕೃಷ್ಣ ಹೆಗಡೆ ಸರಕಾರ ಅಧಿಕಾರಕ್ಕೆ ಬಂತು. ...ಆ ಸಂದರ್ಭದಲ್ಲಿ ಸಮಾಜವಾದಿ ಹಿನ್ನೆಲೆ ಉಳ್ಳ ...'ನೀರ್ ಸಾಬ್' ಎಂದೇ ಹೆಸರಾಗಿದ್ದ ನಜೀರ್ ...ಸಾಬ್ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ...ಪಶ್ಚಿಮ ಬಂಗಾಳಕ್ಕೆ ಹೋಗಿ ಅಲ್ಲಿನ ...ಪಂಚಾಯತ್ ಕಾರ್ಯನಿರ್ವಹಣೆಯನ್ನು ...ಅಭ್ಯಾಸ ನಡೆಸಿ, ಕರ್ನಾಟಕ ರಾಜ್ಯದಲ್ಲಿ ...ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ...ಅನುಷ್ಠಾನಕ್ಕೆ ಬಂದಿತು. ಅದರ ನಂತರ ...ಕಾಲಾನುಕಾಲಕ್ಕೆ ಪಂಚಾಯತ್ ಚುನಾವಣೆ ...ನಡೆಯುತ್ತಿದ್ದರೂ ಅಧಿಕಾರ ಹೆಚ್ಚಾಗಿ ...ಗ್ರಾಮಗಳಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳ ...(ಭೂಮಾಲಕರು, ವ್ಯಾಪಾರಿ ವರ್ಗ)ಕೈಯಲ್ಲೇ ...ಉಳಿದುಕೊಂಡು ಬಡ ಜನರಿಗೆ ಅಧಿಕಾರ ...ದೊರೆತಿಲ್ಲ. ಶೇ 33 ಮಹಿಳಾ ಮೀಸಲಾತಿ ...ಇದ್ದರೂ, ಆಯ್ಕೆಯಾದ ಮಹಿಳಾ ಅಭ್ಯರ್ಥಿಗಳ ...ಗಂಡಂದಿರೇ ಅಧಿಕಾರ ನಡೆಸುವುದು ಜಾಸ್ತಿ. ...ದಲಿತರ ಮೀಸಲಾತಿ ಇದ್ದರೂ ಅನೇಕ ಕಡೆ ...ಒತ್ತಡ ತಂದು, ಆಮಿಷ ತೋರಿಸಿ, ...ಶ್ರೀಮಂತರು ತಮ್ಮ ಬೇಳೆ ಬೇಯಿಸಿಕೊಳ್ಳುವ ...ಪ್ರಸಂಗ ಜಾಸ್ತಿ. ಆದರೆ ಪಶ್ಚಿಮ ಬಂಗಾಳದಲ್ಲಿ ...ಹಾಗಲ್ಲ, ನಿಜವಾಗಿಯೂ ಜನಸಾಮಾನ್ಯರ ಕೈಗೆ ...ಅಧಿಕಾರ ಬಂದಿದೆ.



ಝಣ ಝಣ ಕಾಂಚಾಣ

ಜಿ.ಎಸ್.ಮಣಿ

ಮತ್ತೆ ಬಡ್ಡಿ ಕಡಿತ ಬಂಡವಾಳಿಗರಿಗಾಗಿ

ಉದಾರೀಕರಣವೇ ಬಂಡವಾಳಿಗರ ಲಾಭ ಮತ್ತು ಅನುಕೂಲಕ್ಕಾಗಿ ಎನ್ನುವುದು ಆಗಲೇ ಗೊತ್ತಿರುವ ವಿಷಯ. ಭಾರತೀಯ ರಿಸರ್ವ್ ಬ್ಯಾಂಕ್ ವರ್ಷಕ್ಕೆರಡು ಬಾರಿ ತನ್ನ ಹಣಕಾಸು ಮತ್ತು ಸಾಲ ನೀತಿಯನ್ನು ಪ್ರಕಟಿಸುತ್ತಿರುತ್ತದೆ. ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಇವ ಪ್ರಕಟವಾಗುತ್ತವೆ. ಏಪ್ರಿಲ್ 29 ರಂದು ನೀತಿ ಪ್ರಕಟವಾಯಿತು.

ಅದರ ಪ್ರಕಾರ ಬಡ್ಡಿ ದರ ಕಡಿತವಾಗಿದೆ. ಇಲ್ಲಿ ಬಡ್ಡಿ ದರವೆಂದರೆ ಸಾಲದ ಮೇಲಿನ ಬಡ್ಡಿ. ಭಾರತೀಯ ರಿಸರ್ವ್ ಬ್ಯಾಂಕ್ ಬೇರೆ ಬ್ಯಾಂಕುಗಳಿಗೆ ಸಾಲ ನೀಡುವುದಾದರೆ ಅದರ ಮೇಲೆ ವಿಧಿಸುವ ಬಡ್ಡಿ ದರವನ್ನು 'ಬ್ಯಾಂಕ್ ದರ' ಎಂದೇ ಕರೆಯಲಾಗುತ್ತದೆ. ಈ ಬ್ಯಾಂಕ್ ದರದ ಮೇಲೆ ವಿವಿಧ ಬ್ಯಾಂಕುಗಳ ಬಡ್ಡಿದರ ಅವಲಂಬಿತವಾಗುತ್ತದೆ.

ಉದಾರೀಕರಣದ ವರ್ಷಗಳಲ್ಲಿ ಬಡ್ಡಿ ದರ ಇಳಿಯುತ್ತಲೇ ಇದೆ. ಇದು ಒಳ್ಳೆಯದಲ್ಲವೆ ಎಂದು ನೀವು ಕೇಳಬಹುದು. ಒಳ್ಳೆಯದು ಯಾರಿಗೆ? ಬಂಡವಾಳಿಗರಿಗೆ ಅವರಿಗೆ ಕಡಿಮೆ ದರದಲ್ಲಿ ಸಾಲ ದೊರೆಯುತ್ತದೆ.

ಆದರೆ ಭಾರತದ ಬ್ಯಾಂಕುಗಳಲ್ಲಿ ಹಣವಿರಿಸುವವರು ಬಹುತೇಕ ಬಡ ಮತ್ತು ಮಧ್ಯಮ ವರ್ಗದವರು. ಈ ಜನಗಳಿಗೆ ಅತ್ಯಂತ ಕಡಿಮೆ ಬಡ್ಡಿದರ ದೊರೆಯುತ್ತದೆ. ಈ ಜನಗಳಿಗೆ ಬಡ್ಡಿದರ ಕಡಿತದಿಂದ ನಷ್ಟವಾಗುತ್ತದೆ. ಇವರಿಗೆ ನಷ್ಟ ತಡೆದುಕೊಳ್ಳುವ ಶಕ್ತಿಯೂ ಇರುವುದಿಲ್ಲ. ಉದಾರೀಕರಣವೆಂದರೆ ಇದು.

ಬಂಡವಾಳಶಾಹಿಗಳ ಈ ವಿಚಿತ್ರ ಪರಿ

ಇದು ಆಸ್ಟ್ರೇಲಿಯಾ ಕಂಪನಿಯೊಂದರ ಕತೆ. ಇದು ಹೊಸ ತರಹದ ಕತೆ. ಆಸ್ಟ್ರೇಲಿಯಾದ ಮೆಲ್‌ಬೋರ್ನ್ ನಗರದಲ್ಲಿ 'ಸೂಳೆಗಾರಿಕೆಯ ಕಂಪನಿಯೊಂದು ಅಸ್ತಿತ್ವಕ್ಕೆ ಬಂದಿದ್ದು ಅದರ ಶೇರುಗಳ ವಹಿವಾಟಿಗೆ ನೂಕು ನುಗ್ಗಲಾಗಿರುವ ವರದಿಯೊಂದು ಬಂದಿದೆ.

ಇದು ಜಗತ್ತಿನ ಅತಿ ಹಳೆಯ ವೃತ್ತಿ ಎಂದೂ ಈ ವರದಿ ಹೇಳುತ್ತದೆ. ಮೊದಲ ದಿನವೇ 1.4 ದಶಲಕ್ಷ ಶೇರುಗಳು ಕೈ ಬದಲಾದವಂತೆ.

ಈ ಕಂಪನಿ ಜಗತ್ತಿನ ಅತೀ ದೊಡ್ಡ ಲೈಂಗಿಕ ವಹಿವಾಟಿನ ಕಂಪನಿಯಾಗಬಯಸುತ್ತದಂತೆ.

ಹೇಗಿದೆ ಬಂಡವಾಳಶಾಹಿ ಪದ್ಧತಿಯ ನೈತಿಕತೆ?.

ವಿಶ್ವ ಬ್ಯಾಂಕಿನ ಕೈ.....

ವಿಶ್ವಬ್ಯಾಂಕಿನ ವ್ಯಕ್ತಿಯೊಬ್ಬನು ಆಸ್ತಿ ಪುನರುಜ್ಜೀವನದ ಕಾರ್ಪೊರೇಷನ್‌ನ ಮುಖ್ಯಸ್ಥರಾಗುತ್ತಾರೆಂಬ ಸುದ್ದಿ ಬಂದಿದೆ. ಬ್ಯಾಂಕುಗಳ ಸಾಲಗಳು ನಿಷ್ಕ್ರಿಯವಾದರೆ ಅಂದರೆ ಅವುಗಳಿಂದ ಉತ್ಪಾದನೆ (ಬಡ್ಡಿ) ಬಾರದೇ ಇದ್ದರೆ ಅಂತಹ ಆಸ್ತಿಯನ್ನು ಈ 'ಭಾರತೀಯ ಆಸ್ತಿ ಪುನರ್ ನಿರ್ಮಾಣ ಕಾರ್ಪೊರೇಷನ್‌ಗೆ ವರ್ಗಾಯಿಸಲಾಗುತ್ತದೆ.(ಇದನ್ನು ಸಂಕ್ಷಿಪ್ತವಾಗಿ ಎ.ಆರ್.ಸಿ ಎಂದು ಕರೆಯಲಾಗುತ್ತದೆ) ಈ ಎ.ಆರ್.ಸಿ. ಈ ಆಸ್ತಿಗಳನ್ನು ಶೇರುಗಳನ್ನಾಗಿ ಪರಿವರ್ತಿಸಿ ಜನರಿಗೆ ಮಾರಾಟ ಮಾಡುವ ಕೆಲಸ ಮಾಡುತ್ತದೆ.

ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಇದು ದೊಡ್ಡ ವಹಿವಾಟು. ಆದ್ದರಿಂದಲೇ ವಿಶ್ವಬ್ಯಾಂಕಿಗೆ ಭಾರತದಲ್ಲೂ ಇಂತಹ ಒಂದು ಕಂಪನಿ ಹುಟ್ಟುಹಾಕಿ ಅದನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವ ಬಯಕೆ.

ಸರ್ಕಾರಿ ವಲಯಗಳಲ್ಲೇ ತನ್ನ ಜನರನ್ನು ತುರುಕಿರುವ ವಿಶ್ವಬ್ಯಾಂಕಿಗೆ ಎ.ಆರ್.ಸಿ.ಯಲ್ಲಿ ತನ್ನವರನ್ನು ನೇಮಕಗೊಳಿಸುವುದು ಕಷ್ಟಕರವಲ್ಲ ಅಲ್ಲವೆ?

ಅದೂ ಅವರು ಹೇಳಿದಂತೆ ಕೇಳುವ ವಾಜಪೇಯಿ ಸರ್ಕಾರವಿರುವಾಗ.

ಸ್ವಾಯತ್ತತೆ ಕಳೆದುಕೊಂಡ ನಾಲ್ಕು ಸರ್ಕಾರಿ ಬ್ಯಾಂಕುಗಳು

ಸರ್ಕಾರಿ ವಲಯದ ನಾಲ್ಕು ಬ್ಯಾಂಕುಗಳು ಸ್ವಾಯತ್ತತೆ ಕಳೆದುಕೊಂಡಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ನೀತಿಯ ಪ್ರಕಾರ ಬ್ಯಾಂಕುಗಳ ಲಾಭ ಕಡಿಮೆಯಾಗಿ ಹಲವು ಮಾನದಂಡಗಳ ಪ್ರಕಾರ ಅವು ಕೆಳಮಟ್ಟದಲ್ಲಿದ್ದರೆ ಅವು ಸ್ವಾಯತ್ತತೆ ಕಳೆದುಕೊಳ್ಳುತ್ತವೆ. ಅಂದರೆ ಪ್ರತಿ ಮುಖ್ಯ ನಿರ್ಧಾರ ತೆಗೆದುಕೊಳ್ಳುವಾಗಲೂ ಈ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಪಡೆಯಬೇಕು.

ಈಗ ಸ್ವಾಯತ್ತತೆ ಕಳೆದುಕೊಂಡಿರುವ ಬ್ಯಾಂಕುಗಳೆಂದರೆ, ಅಲಹಾಬಾದ್ ಬ್ಯಾಂಕ್, ದೇನಾ ಬ್ಯಾಂಕ್, ಇಂಡಿಯನ್ ಬ್ಯಾಂಕ್ ಮತ್ತು ಪಂಜಾಬ್ ಮತ್ತು ಸಿಂಧ್ ಬ್ಯಾಂಕ್.

ದೊಡ್ಡ ಬಂಡವಾಳಿಗರಿಗೆ, ಆಡಳಿತದಲ್ಲಿರುವವರ ಪ್ರಭಾವದಿಂದಾಗಿ ನೀಡಿರುವ ಸಾಲಗಳು ವಾಪಸ್ ಬಾರದೇ ಬ್ಯಾಂಕುಗಳು ತಮ್ಮ ಲಾಭದಾಯಕತೆಯನ್ನು ಕಳೆದುಕೊಂಡಿವೆ. ಉದಾರೀಕರಣದ ನೀತಿಗಳು ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಿವೆ. ಈಗ ಈ ಬ್ಯಾಂಕುಗಳನ್ನೇ ತಪ್ಪಿತಸ್ಥರನ್ನಾಗಿ ಮಾಡಲಾಗಿದೆ. ಇದು ಉದಾರೀಕರಣದ ಬಿಗಿ ನೀತಿ.!

ಇದು ನಿಮಗೆ ಗೊತ್ತೆ?

ಮಹಿಳೆಯರಿಗೆ ಮತದಾನದ ಹಕ್ಕು ಕೊಟ್ಟ ಮೊದಲ ದೇಶ ಯಾವುದಿರಬಹುದು ಎಂದು ಊಹಿಸಬಲ್ಲಿರಾ? ಪ್ರಜಾಪ್ರಭುತ್ವದ ಕಂಟ್ರಾಕ್ಟರುಗಳು ಎನ್ನುವಂತೆ ಮಾತನಾಡುವ ಬ್ರಿಟನ್, ಅಮೆರಿಕ ಅಲ್ಲ. ಮಹಿಳೆಯರಿಗೆ ಮತದಾನ ಕೊಟ್ಟ ಮೊದಲ ದೇಶ ರಶ್ಯಾ. 1917 ರ ಕ್ರಾಂತಿಯ ನಂತರ ಪ್ರಜಾಪ್ರಭುತ್ವ ಸ್ಥಾಪನೆಯೊಂದಿಗೆ ಮಹಿಳೆಯರಿಗೆ ಮತದಾನದ ಹಕ್ಕು ಕೊಡಲಾಯಿತು. ಅಮೆರಿಕದಲ್ಲಿ 1920 ರಲ್ಲಿ, ಬ್ರಿಟನ್‌ನಲ್ಲಿ 1926 ರಲ್ಲಿ ಕೊಡಲಾಯಿತು. ಅದಕ್ಕಾಗಿ ಮಹಿಳೆಯರು ಚಳುವಳಿ ಹೂಡಬೇಕಾಯಿತು. 20 ರ ದಶಕದಲ್ಲಿ ಅದು ರಶ್ಯಾದಲ್ಲಿ ಕೊಟ್ಟಿದ್ದರಿಂದ ಉಂಟಾದ ಸಾರ್ವಜನಿಕ ಒತ್ತಡದಿಂದ, ಹೆಚ್ಚಿನ ಯುರೋಪಿನ ದೇಶಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ದೊರೆಯಿತು. ಅತ್ಯಂತ ಸಮೃದ್ಧ ದೇಶವಾದ ಸ್ವಿಜರ್‌ಲ್ಯಾಂಡ್ ಮಹಿಳೆಯರಿಗೆ ಮತದಾನದ ಹಕ್ಕು ಕೊಟ್ಟದ್ದು 1960 ರಲ್ಲಿ ಅಂದರೆ ಭಾರತ ಮುಂತಾದ ಮೂರನೇ ಜಗತ್ತಿನ ದೇಶಗಳ ನಂತರ.

ಮೇ 31 ರ ಮುಷ್ಕರ....

ಪುಟ 7 ರಿಂದ

ವಾಗುತ್ತಿತ್ತು. ಈಗ ಬೆಲೆಯೇರಿಕೆಯ ಪರಿಣಾಮ ವಾಗಿ 1965 ರ 1600 ರೂ.ನ ಮೌಲ್ಯ ಈಗಿನ ಬೆಲೆಗಳಲ್ಲಿ 32,000 ರೂ. ಗಳಿಗೇರಿದೆ. ಆದರೆ 13,500 ರೂ.ಗಿಂತ ಹೆಚ್ಚು ಸಂಬಳದ ಕಾರ್ಮಿಕರಿಗೆ ಬೋನಸ್ ಅನ್ವಯ ವಾಗುವುದಿಲ್ಲ ಎನ್ನುತ್ತದೆ ಬೋನಸ್ ಕಾಯಿದೆ. ಸಂಘಟಿತ ಉದ್ದಿಮೆಗಳಲ್ಲಿ ಬಹುಪಾಲು ಕಾರ್ಮಿಕರು ಈಗ ಬೋನಸ್ ಪಾವತಿ ಕಾಯ್ದೆಯ ವ್ಯಾಪ್ತಿಗೇ ಬರುವುದಿಲ್ಲ. ಆದರೂ ಮಾಲಕರು ಬೋನಸ್ಸನ್ನು ತಿಂಗಳಿಗೆ 2500 ರೂ. ಅಥವಾ 3000 ರೂ. ಲೆಕ್ಕದಲ್ಲಿ ಶೇ 20 ಕ್ಕೆ ಸೀಮಿತಗೊಳಿಸುತ್ತಿದ್ದಾರೆ. ಹೀಗೆ ಬದಲಾಗದ ಶಾಸನ ಲಾಭದಲ್ಲಿ ಪಾಲು ನೀಡಬೇಕೆಂಬ ಬೋನಸ್ಸಿನ ಪರಿಕಲ್ಪನೆಯನ್ನೇ ಸೊನ್ನೆಯಾಗಿಸಿದೆ.

ಮೇ 21 ರ ಮುಷ್ಕರ ಬೋನಸ್ ಕಾಯ್ದೆ ಹೇರಿದ ಮಿತಿಗಳನ್ನು ತೆಗೆಯಬೇಕು, ಅದನ್ನು ಎಲ್ಲಾ ಕಾರ್ಮಿಕರಿಗೂ ಅನ್ವಯಿಸಬೇಕು ಎಂದು ಒತ್ತಾಯಿಸುತ್ತದೆ.

ಭವಿಷ್ಯ ನಿಧಿಗೆ ಶೇ 10 ಬಡ್ಡಿ

ಭವಿಷ್ಯ ನಿಧಿ ಯೋಜನೆಯಲ್ಲಿ ಬಂದ ಹಣವನ್ನೆಲ್ಲಾ ಭಾರತ ಸರಕಾರದ ಬಾಂಡುಗಳಲ್ಲಿ ಹೂಡಲಾಗಿದೆ. ಸದ್ಯ ಭಾರತ ಸರ್ಕಾರ ನೌಕರರ ಭವಿಷ್ಯ ನಿಧಿ ಸಂಘಟನೆಗೆ 1 ಲಕ್ಷ 25 ಸಾವಿರ ಕೋಟಿ ರೂ. ಕೊಡಬೇಕಾಗಿದೆ. ಈ ಮೊತ್ತಕ್ಕೆ ಅದು ಶೇ 12 ಬಡ್ಡಿ ತೆರಬೇಕು. ಆದರೆ ಇದರಿಂದ ತಪ್ಪಿಸಿಕೊಳ್ಳಲು ಅದು ಪ್ರಯತ್ನಿಸುತ್ತಿದೆ. ಸದ್ಯಕ್ಕೆ ಭವಿಷ್ಯ ನಿಧಿ ಸಂಘಟನೆ ಬಡ್ಡಿ ದರವನ್ನು ಶೇ 9.5 ಕ್ಕೆ ಇಳಿಸಿದರೆ, ಶೇ 8.5 ಕ್ಕೆ ಇಳಿಸುವ ಸಾಧ್ಯತೆ ಯಿದೆ. ಭವಿಷ್ಯ ನಿಧಿಯ ಸಾಮಾಜಿಕ ಭದ್ರತಾ ಸ್ವರೂಪವನ್ನು ಕಾದುಕೊಳ್ಳಬೇಕಾದರೆ ಬಡ್ಡಿ ದರವನ್ನು ಮತ್ತೆ ಶೇ 12 ಕ್ಕೆ ಏರಿಸುವ ಬೇಡಿಕೆ ಅತ್ಯಗತ್ಯ.

ಪ್ರಮಾಣಾತ್ಮಕ ಮಿತಿಗಳು

ಡಬ್ಲ್ಯುಟಿಓ ವ್ಯವಸ್ಥೆ ಆಹಾರಬೆಳೆಗಳು ಮತ್ತು ಸಣ್ಣ ಉದ್ದಿಮೆಗಳ ಉತ್ಪನ್ನಗಳು ಸೇರಿದಂತೆ ಹಲವು ಸರಕುಗಳ ಪ್ರಮಾಣದ ಮೇಲಿನ ಮಿತಿಗಳನ್ನು ತೆಗೆದು ಹಾಕಿಸುವಲ್ಲಿ ಯಶಸ್ವಿಯಾಗಿದೆ. ಇದು ಗ್ರಾಮಾಂತರ ಪ್ರದೇಶವನ್ನು ಧ್ವಂಸಗೊಳಿಸುತ್ತಿದೆ. ಬೆಳೆ ನಷ್ಟಗಳು ಮತ್ತು ಸಾಲಗಳು ರೈತಾಪಿ ಜನಗಳ ವಿನಾಶಕ್ಕೆ ಕಾರಣವಾಗಿದೆ. ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಆದ್ದರಿಂದ ಪ್ರಮಾಣಾತ್ಮಕ ಮಿತಿಗಳನ್ನು ಮತ್ತೆ ಹಾಕಬೇಕು ಎಂದು ಮೇ 21 ರ ಮುಷ್ಕರ ಆಗ್ರಹಿಸುತ್ತಿದೆ.

ಒಟ್ಟಿನಲ್ಲಿ ದೇಶದ ಅಭಿವೃದ್ಧಿಯನ್ನು ವಿರೂಪಗೊಳಿಸಿದ ಧೋರಣೆಗಳನ್ನು ಹಿಂತೆಗೆದುಕೊಳ್ಳುವಂತೆ ಮತ್ತು ಜನಗಳಿಗೆ ಪ್ರಯೋಜನವಾಗುವ ಜನ-ಪರ ಧೋರಣೆಗಳನ್ನು ಅನುಸರಿಸುವಂತೆ ಮಾಡಲು ಮೇ 21 ರ ಸಾರ್ವತ್ರಿಕ ಮುಷ್ಕರ ಒಂದು ದೊಡ್ಡ ಯಶಸ್ಸನ್ನು ದಾಖಲಿಸುತ್ತದೆ.

ಜ್ಞಾನ ವಿಜ್ಞಾನ

ಮೊಬೈಲ್ ಫೋನಿಗೆ 30 ವರ್ಷ

ಪ್ರಪಂಚದಲ್ಲಿ ಮೊಬೈಲ್ ಕ್ರಾಂತಿ ಆಗಿ ಏಪ್ರಿಲ್ ತಿಂಗಳಿಗೆ 30 ವರ್ಷವಾಯಿತು. ಭಾರತದಲ್ಲಿ ಮೊಬೈಲ್ ಫೋನ್ ಉಪಯೋಗಿಸುವರ ಸಂಖ್ಯೆಯು ಒಂದು ಕೋಟಿಗೂ ಮಿಕ್ಕಿ ಇದೆ. 1973 ಏಪ್ರಿಲ್ 3ನೇ ತಾರೀಕಿನಂದು ಮೊಬೈಲ್ ಫೋನ್ ತಂತ್ರಜ್ಞಾನದ ಜನ ಮಾರ್ಟಿನ್ ಕೂಪರ್ ಪ್ರಪ್ರಥಮ ಮೊಬೈಲ್ ಸಂದೇ ಕಳುಹಿಸಿದರು. ಮೊಟರೋಲಾ ಕಂಪನಿಯ ಜನರಲ್ ಮ್ಯಾನೇಜರಾದ ಮಾರ್ಟಿನ್ ಕೂಪರ್ ನ್ಯೂಯಾರ್ಕಿನಲ್ಲಿರುವ ಹಿಲ್ಟನ್ ಹೋಟೆಲ್ ಹೊರಗಿನಿಂದ ಅಮೇರಿಕನ್ ಟೆಲಿಫೋನ್ AT& ಕಂಪನಿಗೆ ಮೊದಲ ಕರೆ ಮಾಡಿದರು. ಆ ಸಂದರ್ಭದ ಈ ಕಂಪನಿಯು ಮೊಬೈಲ್ ಫೋನ್ ತಂತ್ರಜ್ಞಾನವ ಕಂಡುಹಿಡಿಯುವ ಪ್ರಯತ್ನದಲ್ಲಿತ್ತಾದರಿಂದ ಕಂಪನಿ ಈ ಕರೆ ಆಘಾತ ತಂದಿತು.



ಪ್ರಸ್ತುತ 74 ವರ್ಷ ಪ್ರಾಯದ ಮಾರ್ಟಿನ್ ಕೂಪರ್ ಕ್ಯಾಲಿಫೋರ್ನಿಯಾದಲ್ಲಿರುವ ಅ ಕಮ್ಯುನಿಕೇಶನ್‌ನ ಮುಖ್ಯಸ್ಥರು. ಅರೆಕಮ್ಯುನಿಕೇಶ ಕಂಪನಿಯು 1992 ರಲ್ಲಿ ಸ್ಥಾಪನೆಯಾದ ಕಂಪ ಮೊಬೈಲ್ ಫೋನ್‌ಗಳಲ್ಲಿ ಸಾಮಾನ್ಯ ಸಮಸ್ಯೆಯಾಗ 'ಶಬ್ದ ವಿನಿಮಯ' ಸಮಸ್ಯೆಗೆ ಪರಿಹಾರವಾಗಿ ಐಬೆಸ ಸಾಧನವನ್ನು ಇತ್ತೀಚೆಗೆ ಈ ಕಂಪನಿಯೇ ಅಳವಡಿ ಸಮಸ್ಯೆಗೆ ಪರಿಹಾರ ಒದಗಿಸಿದೆ.

ಮಾರ್ಟಿನ್ ಕೂಪರ್ 30 ವರ್ಷದ ನಂತರ 20 ಏಪ್ರಿಲ್ 3ನೇ ತಾರೀಕು ತಾನು ಮೊದ ಮಾತನಾಡಿದ ಒಂದು ಕೆ.ಜಿ.ಭಾರವಿರುವ ಇಟ ರೂಪದಲ್ಲಿರುವ ದೊಡ್ಡ ಮೊಬೈಲ್‌ನಿಂದ ಕರೆ ಮಾ 30ನೇ ವಾರ್ಷಿಕೋತ್ಸವವನ್ನು ಆಚರಿಸಿದರು. ಈ ಮೊಬೈಲ್ ಫೋನಿನ ಭಾರ 70 ಗ್ರಾಂನಿಂದ 100 ಗ್ರಾ ಒಳಗೆ. ಅಮೇರಿಕನ್ ಕಂಪನಿ ಸೌಂಡ್ ಐಡಿಯ ಗ್ರಾಮ ತೂಕವಿರುವ ಫೋನ್ ಅತೀ ಕಡಿ ಭಾರವಿರುವ ಫೋನ್. ಇದನ್ನು ಕಿ ಸಿಕ್ಕಿಸಿಡಬಹುದು.

1973 ರಲ್ಲಿ ಮೊಬೈಲ್‌ಫೋನ್ ಕಂಡು ಹಿಡಿದ ಮಾರ್ಕೆಟ್‌ನಲ್ಲಿ ಬಂದಿರುವುದು 10 ವರ್ಷದ ನಂತ 80 ರಲ್ಲಿ ಒಂದು ಮೊಬೈಲ್ ಫೋನ್‌ಗೆ ಒಂದು ಲ ಎಪ್ಪತ್ತೈದು ಸಾವಿರ ಕ್ರಯವಿತ್ತು. ಈಗ 2 ಸಾವಿರದ ಮೂರು ಸಾವಿರದವರೆಗಿನ ಫೋನ್ ಇದೆ. ಗ್ಲೋಬ ಸರ್ವಿಸ್ ಮೊಬೈಲ್ (ಜಿ.ಎಸ್.ಎಂ) ಕೋ ಡಿವಿಜನ್ ಮಲ್ಟಿಪಲ್ ಎಕ್ಸೆಸ್ (CDMA) ಈ ಎ ತರದ ಸಾಂಕೇತಿಕ ತಂತ್ರಜ್ಞಾನವಿದೆ. 2 ಫೆಬ್ರವರಿಯಲ್ಲಿ ಸೆಲ್ಯೂಲರ್ ಆಪರೇಟರ್ ಲೆಕ್ಕ ಪ್ರ 1 ಕೋಟಿ 10 ಲಕ್ಷ ಟೆಲಿಫೋನ್ ಭಾರತದಲ್ಲಿ ಲ್ಯಾಂಡ್ ಫೋನ್ 4 ಕೋಟಿಗೂ ಮಿಕ್ಕಿ ಇದೆ. ಈ ರಂಗದಲ್ಲಿ 20 ಕಂಪನಿ ಸ್ಪರ್ಧೆಯಲ್ಲಿದೆ. ದೇಶದ 100 ಕೋಟಿ ಜನರಿಗೆ ಕೇವಲ 5.5 ಶೇ ದೂರಸಂಪರ್ಕ ಸೇವೆ ಲಭ್ಯವಿದೆ. ನಮ್ಮ ದೇಶ ದೂರ ಸಂಪರ್ಕ ಸೇವೆ ಅಭಿವೃದ್ಧಿಯ ಪಥದಲ್ಲಿ

ಸಂಗ್ರಹ : ಮುಕುಂ
ಕುಂದಾ

...ಮೆರಿಕನ್ ಆರ್ಥಿಕ ನೆರವಿಗೆ ಇಸ್ರೇಲಿ ಕಾರ್ಮಿಕರ ವಜಾ ಷರತ್ತು!

ಇಸ್ರೇಲಿನಲ್ಲಿ ಸಾರ್ವತ್ರಿಕ ಮುಷ್ಕರ

...ಪ್ರಿಲ್ 30 ರಂದು ಇಸ್ರೇಲಿನಲ್ಲಿ ಹತ್ತು ...ಕ್ಕೂ ಹೆಚ್ಚು ಸಾರ್ವಜನಿಕ ಸೇವೆಗಳ ...ಕರು, ಉದ್ಯೋಗಿಗಳು ಭಾರಿ ಸಾರ್ವತ್ರಿಕ ...ರ ನಡೆಸಿದರು. ಇದು ಇಸ್ರೇಲಿನ ಕಾರ್ಮಿಕರ ...ರು ಅರ್ಧದಷ್ಟು. ಏಪ್ರಿಲ್ 30 ರಿಂದ ...ಷ್ಟ ಮುಷ್ಕರ ಆರಂಭಿಸಿದ ಕಾರಣ ಇಡೀ ...ಸ್ 'ಬಂದ್' ಆದಂತಾಗಿತ್ತು. ರೈಲು, ಬಸ್ಸು, ...ನಯಾನ, ಪೋಸ್ಟ್, ಫೋನು ಮಂತಾದ ...ಸಾರ್ವಜನಿಕ ಸೇವೆಗಳ ಮೇಲೆ ಗಂಭೀರ ...ಮ ಬೀರಿತ್ತು. ಬ್ಯಾಂಕುಗಳು ಮತ್ತು ಶೇರು ...ಕಟ್ಟೆ ಹೆಸರಲ್ಲಿ ಕಾರ್ಮಿಕರ ಹೆಚ್ಚಿನ ...ತ್ತುಗಳನ್ನು ಕಡಿತ ಮಾಡುವ ಸರ್ಕಾರದ ಕ್ರಮದ ವಿರುದ್ಧ ಪ್ರತಿಭಟಿಸಿತ್ತು.

ಸಾವಿರಾರು ಸಾರ್ವಜನಿಕ ಸೇವೆಗಳ ನೌಕರರನ್ನು (1600 ಸ್ಕೂಲ್ ಟೀಚರ್‌ಗಳನ್ನು ಸೇರಿದಂತೆ) ಬರ್ಖಾಸ್ತು ಮಾಡುವುದು, ವೇತನ ಕಡಿತ, ಪೆನ್ಶನ್, ನಿರುದ್ಯೋಗ ವೇತನ, ಇನ್ಸೂರೆನ್ಸ್ ಮುಂತಾದ ಸಾಮಾಜಿಕ ವೆಚ್ಚಗಳಲ್ಲಿ ಭಾರಿ ಕಡಿತ ಸರ್ಕಾರದ ಮೊದಲ ಯೋಜನೆಗಳಲ್ಲಿ ಇತ್ತು. ಆದರೆ ಟ್ರೇಡ್ ಯೂನಿಯನ್‌ಗಳ ಬಲವಾದ ಪ್ರತಿರೋಧದಿಂದಾಗಿ ಸರ್ಕಾರ ಮಾತುಕತೆಗೆ ಮುಂದಾಗಿತ್ತು. ಹಲವು ವಾರಗಳ ಮಾತುಕತೆಗಳ ನಂತರ, ಸರ್ಕಾರ ಇದ್ದಕ್ಕಿದ್ದ ಹಾಗೆ ಈ ಯೋಜನೆಗಳನ್ನು ಕಾನೂನಿನಡಿ ಪಾರ್ಲಿಮೆಂಟಿನ ಮುಂದೆ ಇಟ್ಟಿತ್ತು. ಇಂತಹ ಸನ್ನಿವೇಶಕ್ಕೆ ಸನ್ನದ್ಧವಿದ್ದ ಕಾರ್ಮಿಕರು ಮಿಂಚಿನ ಮುಷ್ಕರ ನಡೆಸಿದ್ದರು. ತಮಾಷೆಯೆಂದರೆ ಇಸ್ರೇಲಿಗೆ ಅಮೆರಿಕ ಕೊಡಬೇಕೆಂದಿರುವ 10 ಶತಕೋಟಿ ಡಾಲರು ಸಹಾಯಧನ ಕಾರ್ಮಿಕರ ಸಂಖ್ಯೆ ಮತ್ತು ಸವಲತ್ತುಗಳಲ್ಲಿ ಕಡಿತ ಮಾಡಿದರೆ ಮಾತ್ರ ಎಂಬ ಷರತ್ತು ಇದೆಯಂತೆ. ಕೆಲವು ವಾರ ಹಿಂದೆ ಬಂದಿದ್ದ ಅಮೆರಿದ ರಕ್ಷಣಾ ಸಲಹೆಗಾರ ರೈಸ್ ಈ ಬೆದರಿಕೆ ಹಾಕಿದ್ದಾರಂತೆ. ಇದಕ್ಕಾಗಿ ಇಸ್ರೇಲಿನ ಪಾರ್ಲಿಮೆಂಟಿನಲ್ಲಿ ಈ ಕಾನೂನನ್ನು ಸರ್ಕಾರ ತರಾತುರಿಯಲ್ಲಿ ತಂದಿತ್ತು. ಆದರೆ ಕಾರ್ಮಿಕ ವರ್ಗದ ಪ್ರತಿರೋಧದಿಂದ ಸರ್ಕಾರದ ಮೊದಲಿದ್ದ ಹಲವು ಪ್ರಸ್ತಾವಗಳನ್ನು ಕೈಬಿಟ್ಟಿದೆ.

ಯುದ್ಧ-ವಿರೋಧಿಗಳಿಗೆ ಶಿಕ್ಷೆ : ಸ್ಪೈನ್ ಪ್ರಯತ್ನ

ಅತ್ಯಂತ ದೊಡ್ಡ ಯುದ್ಧ-ವಿರೋಧಿ ಪ್ರದರ್ಶನಗಳನ್ನು ಕಂಡ ಸ್ಪೈನ್‌ನಲ್ಲಿ ಅದರಲ್ಲೂ ಪಾಲುಗೊಂಡವರನ್ನು ಶಿಕ್ಷಿಸಲು ಸರ್ಕಾರ ತರಾತುರಿಯಲ್ಲಿ ಕಾನೂನು ತರಲು ಯೋಚಿಸುತ್ತಿದೆ ಸ್ಪೈನ್ ಸರ್ಕಾರ. ಅಮೆರಿಕದ ಸರ್ಕಾರದ ಇರಾಕ್ ಅತಿಕ್ರಮಣಕ್ಕೆ ಬೆಂಬಲ ಕೊಟ್ಟ ಕೆಲವೇ ಸರ್ಕಾರಗಳಲ್ಲಿ ಒಂದು. ಈ ಕಾನೂನಿನ ಪ್ರಕಾರ ಸ್ಪೈನ್ ಸರ್ಕಾರ ನಿರ್ಧರಿಸಿ ಭಾಗವಹಿಸುತ್ತಿರುವ ಅಂತರ್‌ರಾಷ್ಟ್ರೀಯ ಯುದ್ಧದ ವಿರುದ್ಧ ಪ್ರಚಾರ-ಪ್ರಕ್ಷೋಭೆ ಮಾಡುವುದು ಅಪರಾಧವಾಗುವುದು. ಆರು ವರ್ಷದ ವರೆಗೆ ಕಠಿಣ ಸಜೆಯಷ್ಟು ಶಿಕ್ಷೆ ವಿಧಿಸಲಾಗಿದೆ. ಸ್ಪೈನ್‌ನ 'ಸಹಚರ' ದೇಶಗಳು ಹೂಡುವ ಯುದ್ಧಕ್ಕೂ ಇದು ಅನ್ವಯಿಸುತ್ತದೆ.

ಸ್ಪಷ್ಟವಾಗಿಯೇ ಅಮೆರಿಕದ ಯುದ್ಧ ವಿರೋಧಿಸುವ ಬೃಹತ್ ಪ್ರತಿಭಟನೆಯನ್ನು ಮಟ್ಟ ಹಾಕಲು ಈ ಹುನ್ನಾರ. ■

...ಚಾರವೊಂದು ಹೊಳೆದರೆ ಬರೆದುಕೊಡಿ......!

...ೀವು ಪತ್ರಿಕೆ, ಓದುತ್ತೀರಿ, ಟಿ.ವಿ. ನೋಡುತ್ತೀರಿ.. ಅಥವಾ ಸುದ್ದಿ - ಸಂಗತಿ ...ವುದೇ ಮಿತಿಯಿಂದ ನಿಮ್ಮ ಮತ ಹೋಗಬಹುದು. ಆಗ ಮನದೊಳಗೆ ವಿಚಾರದ ...ಕು ಹೊಳೆಯಬಹುದು. ತಡವೇಕಿನು? ಕೂಡಲೇ ಅದನ್ನು ಅಕ್ಷರಕ್ಕೆ ಇಳಿಸಿ. ನಮಗೆ ...ಸಂವಾದ ನಡೆಸಿ.

ಈ ಅನಿಸಿಕೆಗಳನ್ನು ಓದಿದ್ದರೂ ಕೂಡ ಪ್ರತಿಕ್ರಿಯಿಸಬಹುದು. ನೀವೂ ಬರೆಯುತ್ತೀರಿ ತಾನೇ?

ಆದರೆ ಬರಹ ಸಂಕ್ಷಿಪ್ತವಿರಲಿ... ಆದಷ್ಟು ಪತ್ರಿಕೆಯ ಕಾಲು ಪುಟ ಅಥವಾ ಅರ್ಧ ಪುಟದ ಒಳಗೆ...

- ಸಂ

ಅಸ್ಪೃಶ್ಯತೆ ಮತ್ತು ಮಕ್ಕಳು

...ಾರತರತ್ನ ಬಿ.ಆರ್.ಅಂಬೇಡ್ಕರ್‌ರವರ ...ಜನ್ಮದಿನಾಚರಣೆಯನ್ನು ಆಚರಿಸುವ ...ರ್ಭದಲ್ಲಿ ದಲಿತ ಸಮುದಾಯವನ್ನು ...ಸುವ ಎರಡು ಪ್ರಮುಖ ವಿಷಯಗಳ ಕುರಿತು ...ಮಂತ್ರಿ ಎಸ್.ಎಂ.ಕೃಷ್ಣ ತಮ್ಮ ಅಭಿಪ್ರಾಯ ...ದ್ದಾರೆ. ಅಸ್ಪೃಶ್ಯತೆ ಆಚರಿಸುವ ಹೋಟೇಲುಗಳ ...ನಿಗೆ ರದ್ದುಗೊಳಿಸುವುದಾಗಿ ಹಾಗೂ ...ಉದ್ದಿಮೆಗಳಲ್ಲಿ ಮೀಸಲಾತಿ ತರಬೇಕೆಂದು ...ದ್ದಾರೆ.

...ರುದಿನ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ...ದಕ್ಕೆ ಇದು ಸರಿಯಾದ ಸುದ್ದಿ. ಆದರೆ ...ಕೆಯಲ್ಲಿ, ಜಾರಿಗೆ ತರುವುದರಲ್ಲಿ ಕಾಂಗ್ರೆಸ್ ...ತದಲ್ಲಿ ಸಾಧ್ಯವಿಲ್ಲ ಎಂದು ...ಮಂತ್ರಿಗಳು ಅರಿಯಬೇಕಾಗಿದೆ.

...ಸ್ಪೃಶ್ಯತೆ ಎನ್ನುವುದು ಈಗಾಗಲೇ ಕಾನೂನಿನ ...ಶಿಕ್ಷಾರ್ಹ ಅಪರಾಧ. ಯಾವುದೇ ...ಗಳಲ್ಲಿ ಅಸ್ಪೃಶ್ಯತೆ ಆಚರಿಸುವವರಿಗೆ ...ದೇ ಶಿಕ್ಷೆ ಆಗುತ್ತಿಲ್ಲ. ಇದಕ್ಕೆ ಸಿ.ಎಮ್ ...ಹುದು, 'ಯಾರೂ ಕಂಪ್ಲೆಂಟ್ ಮಾಡಿಲ್ಲ' ... ಇದು ಒಬ್ಬ ವ್ಯಕ್ತಿ ದೂರು ಕೊಟ್ಟು ...ಗುವ ಕ್ರಿಯೆ ಅಲ್ಲ. ಕೊಡುವ ಧೈರ್ಯವೂ ... ಬದಲಾಗಿ ಸಾಮಾಜಿಕ ಚಳುವಳಿಯೇ ...ಬೇಕು.

...ದು ಪ್ರದೇಶ ಕಾಂಗ್ರೆಸ್ ಸಮಿತಿಯ ...ಯಲ್ಲಿ ನಡೆದ ಸಭೆಯಲ್ಲಿ, 'ಕಾನೂನಿನ ...ನಲ್ಲಿ ಶಿಕ್ಷೆ ವಿಧಿಸಬೇಕು' ಎಂದು ಹೇಳಿದ ..., ಇದರ ವಿರುದ್ಧ ಸಾಮಾಜಿಕ ಚಳುವಳಿ ...ಬೇಕು ಎಂದು ಅವರ ಕಾರ್ಯಕರ್ತ...ಲೀ ಮುಖಂಡರುಗಳಿಗಾಗಲಿ ಕರೆ ನೀಡಿಲ್ಲ. ...ರೆ ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆ ...ವ ಬಹುಸಂಖ್ಯಾತರು ಕಾಂಗ್ರೆಸ್ ಪಕ್ಷದ ...ರ್ತರು ಸಹ ಪ್ರಮುಖರು ಆಗಿದ್ದಾರೆ. ...ಖ್ಯಮಂತ್ರಿಯವರ ಜಿಲ್ಲೆಯಾದ ಮಂಡ್ಯದ ...ಯಲ್ಲಿ ಕೆರೆಯ ನೀರನ್ನು ಮುಟ್ಟಲು ...ದಾಗ, ಏನು ಗತಿಯಾಯ್ತು? ರಾಜ್ಯದ ...ಿಯ ಮಗ್ಗುಲಲ್ಲಿರುವ ಹೊಸಕೋಟೆ ತಾಲೂಕಿನ ಸಾದಪ್ಪನ ಹಳ್ಳಿಯಲ್ಲಿ ಸ್ಮಶಾನಕ್ಕೆ ಹೋಗುವ ದಾರಿಯನ್ನು ಒತ್ತುವರಿ ಮಾಡಿ ಕೊಂಡಿದ್ದರ ವಿರುದ್ಧ ದಲಿತರು ದನಿ ಎತ್ತಿದಾಗ ಅವರ ಗುಡಿಸಲುಗಳು ಉರಿದುಹೋದವು. ಆಗ ಕರ್ನಾಟಕ ಪ್ರಾಂತ ರೈತ ಸಂಘ ದಲಿತರ ಪರ ನಿಂತಿತೇ ಹೊರತು ಹೈಟೆಕ್ ಸರಕಾರ ಬರಲಿಲ್ಲ. ವಿದ್ಯಾವಂತ, ನೌಕರಿ ಹೊಂದಿದ ದಲಿತರು ನಗರ ಪ್ರದೇಶಗಳಲ್ಲಿ ಅಸ್ಪೃಶ್ಯರಲ್ಲದೆ ಇರಬಹುದು. (ಮನೆ ಬಾಡಿಗೆ ಪಡೆದುಕೊಳ್ಳುವ ಸಂದರ್ಭದಲ್ಲಿ ಇಲ್ಲಿಯೂ ಅಸ್ಪೃಶ್ಯತೆ ಕಾಣಬಹುದು? ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಅವರು ಇಂದಿಗೂ ಅಸ್ಪೃಶ್ಯರೇ.


1927 ಮಾರ್ಚ್ ತಿಂಗಳ 20 ರಂದು ಮಹಾರಾಷ್ಟ್ರದ ಕೊಂಕಣ ಪ್ರದೇಶದ ಮಹಾಟ್ ಎಂಬ ಪ್ರದೇಶದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಕಮ್ಯುನಿಸ್ಟ್ ಚಳುವಳಿಯ ನೇತಾರ ಆರ್.ಬಿ. ಮೋರೆ ನೇತೃತ್ವದಲ್ಲಿ ಕೆರೆಯ ನೀರನ್ನು ಮುಟ್ಟುವ ಚಳುವಳಿ ನಡೆಯಿತು. ಈ ಚಳುವಳಿ ನಡೆದ 20 ವರ್ಷದ ನಂತರ ನಮ್ಮದೇಶಕ್ಕೆ ಸ್ವತಂತ್ರ ಬಂದಿತ್ತು. ಅನಂತರ 55-56 ವರ್ಷಗಳು ಸಂದಿವೆ. ಹೆಚ್ಚು ಸಮಯ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರವೇ ಇತ್ತು. ಆದರೆ ಹೋಟೇಲು, ರಸ್ತೆ, ಕೆರೆ, ಕುಡಿಯುವ ನೀರು, ಆಟದ ಬಯಲು, ಕ್ಷೌರದ ಅಂಗಡಿ- ಯಾವುದರಲ್ಲೂ ಸಾಮಾಜಿಕ ಸಮಾನತೆ ಬರಲಿಲ್ಲ, ಆರ್ಥಿಕ ಸಮಾನತೆ ದೂರದ ಮಾತು.

ಮುಖ್ಯಮಂತ್ರಿಗಳಾಗಲಿ, ಪ್ರಧಾನ ಮಂತ್ರಿಗಳಾಗಲಿ, ಸಮಾರಂಭದಲ್ಲಿ ಹೇಳಿದಾಕ್ಷಣ, ಮಾಧ್ಯಮಗಳಲ್ಲಿ ಪ್ರಮುಖ ಸುದ್ದಿಯಾದ ತಕ್ಷಣ, ಮೂಲಭೂತ ಬದಲಾವಣೆಯಾಗಲು ಸಾಧ್ಯವಿಲ್ಲ. ಸಾಮೂಹಿಕ ಚಳುವಳಿ ನಡೆಯಬೇಕಾಗಿದೆ. ಭೂಸುಧಾರಣೆಯಾಗಿ ದಲಿತರ ಕೈಗೆ ಭೂಮಿ ಬಂದಾಗ, ಆರ್ಥಿಕವಾಗಿ ಮುಂದುವರಿದಾಗ, ಅಸ್ಪೃಶ್ಯತೆ ವಿರುದ್ಧ ಸಮರ ಸಾರಿದಾಗ ದೂರಾಗಬಹುದು. ಅದಕ್ಕೆ ನೇತೃತ್ವ ನೀಡಲು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ರವರು ತಯಾರಿದ್ದಾರೆಯೇ ಎಂದು ಪ್ರಶ್ನಿಸಬೇಕಾಗಿದೆ.

- ಬಾಲಕೃಷ್ಣ ಶೆಟ್ಟಿ, ಬೆಂಗಳೂರು

ದಕ್ಷಿಣ ಆಫ್ರಿಕಾ ವಿಮೋಚನಾ ಹೋರಾಟಗಾರ

ವಾಲ್ಟರ್ ಸಿಸುಲು ಲಾಲ್‌ಸಲಾಂ !!



ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದದ ವಿರುದ್ಧ ವಿಮೋಚನಾ ಹೋರಾಟದ ಅಪ್ರತಿಮ ನಾಯಕರಲ್ಲೊಬ್ಬರಾದ ವಾಲ್ಟರ್ ಸಿಸುಲು ನಿಧನ ಹೊಂದಿದ್ದಾರೆ. 90 ವಯಸ್ಸಿನ ಸಿಸುಲು ಪ್ರಸಿದ್ಧ ನೆಲ್ಸನ್ ಮಂಡೇಲಾರನ್ನೇ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್‌ಗೆ ಸೇರುವಂತೆ ಪ್ರೇರೇಪಿಸಿದ ಹೆಗ್ಗಳಿಕೆ ಹೊಂದಿದವರು. ಎಎನ್‌ಸಿ ಹುಟ್ಟಿದ ವರ್ಷವೇ ಹುಟ್ಟಿದ ಸಿಸುಲು, 1949 ರಿಂದ 1954 ರ ವರೆಗೆ ಅದರ ಮಹಾ ಕಾರ್ಯದರ್ಶಿ ಯಾಗಿದ್ದರು. ಆಮೇಲೆ ಉಪಾಧ್ಯಕ್ಷರಾಗಿದ್ದರು. 1944 ರಲ್ಲಿ ಎಎನ್‌ಸಿ ಯುವ ಲೀಗ್‌ನ ಸ್ಥಾಪಕರೂ ಆಗಿದ್ದರು ಸಿಸುಲು. 50 ಮತ್ತು 60 ದಶಕದಲ್ಲಿ ಎಎನ್‌ಸಿಯನ್ನು ಸಾಮೂಹಿಕ ಚಳುವಳಿ ಯಾಗಿಸುವಲ್ಲಿ ಮತ್ತು ಆ ಮೇಲೆ ಭೂಗತವಾಗಿ ಸಶಸ್ತ್ರ ಹೋರಾಟದ ಮೂಲಕ ವರ್ಣಭೇದಕ್ಕೆ ಪ್ರತಿರೋಧ ಒಡ್ಡುವ ವ್ಯೂಹ ರಚಿಸುವಲ್ಲಿ ಸಿಸುಲು ಪಾತ್ರ ದೊಡ್ಡದು. 1963 ರಲ್ಲಿ ಸಿಸುಲು ರವರನ್ನು ಬಂಧಿಸಿ ವಿಚಾರಣೆ ಗೊಳಪಡಿಸಿ, ಜೀವಾವಧಿ ಶಿಕ್ಷೆಗೆ ಗುರಿ ಪಡಿಸಲಾಯಿತು. 26 ವರ್ಷಗಳ ಕಾಲ ಮಂಡೇಲಾ ಮತ್ತು ಹಲವು ನಾಯಕರು, ಕಾರ್ಯಕರ್ತರ ಜತೆ ಅವರು ರೊಬೆನ್ ದ್ವೀಪದ ಕಾರಾಗೃಹದಲ್ಲಿ ಕಾಲ ಕಳೆಯಬೇಕಾಯಿತು.


ಕರಿಯ ತಾಯಿ, ಬಿಳಿಯ ತಂದೆಯ ಮಗನಾಗಿ ಹುಟ್ಟಿದ ಸಿಸುಲು ರವರ ಶಿಕ್ಷಣ ನಾಲ್ಕನೇ ಕ್ಲಾಸಿನವರೆಗಷ್ಟೆ. ಬೇಕರಿ, ಗಣಿ, ಹೊಟೆಲ್, ದೂತ-ಈ ರೀತಿ ಹಲವು ಕೆಲಸಗಳನ್ನು ಮಾಡಿದ ಸಿಸುಲು ಜೀವನದ ಶಾಲೆಯಲ್ಲಿ ಕಲಿತು ಎಎನ್‌ಸಿಯ ಎತ್ತರದ ನಾಯಕರಾಗಿದ್ದವರು. ಸಿಸುಲು ಎಲ್ಲಾ ರೀತಿಯಲ್ಲಿ ನಿವೃತ್ತರಾಗಿದ್ದು ತಮ್ಮ 60 ವರ್ಷದ ಹಳೆಯ ಮನೆಯಲ್ಲೇ ಸರಳವಾಗಿ ಜೀವಿಸುತ್ತಿದ್ದರು. ಅವರು ಸರ್ಕಾರದಲ್ಲಿ ಪದವಿ ಹೊಂದಿರದಿದ್ದರೂ ದಕ್ಷಿಣ ಆಫ್ರಿಕಾದ ಸರ್ಕಾರ ಅವರಿಗೆ ಸರ್ಕಾರಿ ಮರ್ಯಾದೆಗಳೊಡನೆ ಶವಸಂಸ್ಕಾರ ಮಾಡಲು ನಿರ್ಧರಿಸಿದೆ.

ಲಾಲ್ ಸಲಾಮ್ ವಾಲ್ಟರ್ ಸಿಸುಲು!!

'ನನ್ನೊಳಗಿನ ಭಾಗ' - ಮಂಡೇಲಾ ಕಂಬನಿ

ಮಂಡೇಲಾರವರು ಸಂಗಾತಿ ಸಿಸುಲುರವರ ನಿಧನಕ್ಕೆ ಕಂಬನಿ ಮಿಡಿಯುತ್ತಾ "ನನ್ನೊಳಗಿನ ಒಂದು ಭಾಗವೇ ಇಲ್ಲದ ಹಾಗಾಗಿದೆ" ಎಂದಿದ್ದಾರೆ. ನನ್ನನ್ನು ವರ್ಣಭೇದ-ವಿರೋಧಿ ಚಳುವಳಿ ಮತ್ತು ಎಎನ್‌ಸಿಗೆ ತಂದ ಗುರು ಸಮಾನ ಸಿಸುಲು ಕಳೆದ 62 ವರ್ಷಗಳಲ್ಲಿ ನನ್ನ ಸತತ ಸಂಗಾತಿಯಾಗಿದ್ದರು. ಅವರು ಎಎನ್‌ಸಿ ಅಧ್ಯಕ್ಷರಾಗಲಿಲ್ಲ. ದೇಶದ ಒಳಗಾಗಲೀ ಹೊರಗಾಗಲೀ ಪ್ರಸಿದ್ಧರಾಗಲಿಲ್ಲ. ನೊಬೆಲ್ ಶಾಂತಿ ಪ್ರಶಸ್ತಿ ಅವರಿಗೆ ಬರಲಿಲ್ಲ. ಆದರೆ ಅವರು ನಮ್ಮೆಲ್ಲರಿಗಿಂತಲೂ ಎತ್ತರದ ವ್ಯಕ್ತಿ. ಮುಂದೆ ಇದ್ದು ಕಾಣುತ್ತಿದ್ದ ನಮ್ಮೆಲ್ಲರ ಹಿಂದಿದ್ದ ಶಕ್ತಿ. ಸಿಸುಲು ಸರಳತೆ, ನಮ್ರತೆ ಅನುಕರಣೀಯ ಎಂದಿದ್ದಾರೆ ಮಂಡೇಲಾ.





ಮೇ ಕೆಂಪಿಗೆ ಕುರುಡಾದ ಪತ್ರಿಕೆಗಳು

ನೂರ್ಮಡಿ ಉತ್ಸಾಹದಿಂದ ಜಗದಾದ್ಯಂತ ಆಚರಿಸಿದ ಮೇ ದಿನಾಚರಣೆಯನ್ನು ಬಹುತೇಕ ಪತ್ರಿಕಾಮಾಧ್ಯಮಗಳು. ಕಡೆಗಣಿಸಿದರು. ಜಾಗತೀಕರಣ, ಅಮೇರಿಕಾದ ಅಧಿಪತ್ಯದೆದುರು ಮಂಡಿಯೂರಿದವೇ?

ದುಡಿಯುವ ಜನರ ಹೃದಯಕ್ಕೆ ಹತ್ತಿರವಾದುದು ಮೇ ದಿನ. ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಸೌಹಾರ್ದ ದಿನದ ಮಹತ್ವದ ಬಗ್ಗೆ ಚರ್ಚಿಸುವುದು ಖಂಡಿತ ಈ ಅಂಕಣ ಬರಹದ ಉದ್ದೇಶವಲ್ಲ ಆದರೆ, ಎಂದಿನಂತಲ್ಲದ 2003 ರ ಮೇ ದಿನಾಚರಣೆಯನ್ನು ಕರ್ನಾಟಕದ ಪತ್ರಿಕೆಗಳು ಹೇಗೆ ಕಂಡವು; ಅಲ್ಲಲ್ಲಿ - ಕಂಡವು ಅನ್ನುವುದಕ್ಕಿಂತ ನಿರ್ಲಕ್ಷಿಸಿದವು ಎನ್ನುವುದೇ ಹೆಚ್ಚು ಸೂಕ್ತ ಎಂಬುದರತ್ತ ಒಂದು ಕಿರುನೋಟ ಬೀರುವುದು ಮುಖ್ಯ ಉದ್ದೇಶ.

ವಿವಿಧ ಪತ್ರಿಕೆಗಳ ಮೇ 2 ರ ಬೆಂಗಳೂರು ಆವೃತ್ತಿಯನ್ನು ಆಧಾರವಾಗಿಟ್ಟು ಈ ಟಿಪ್ಪಣಿಯನ್ನು ಸಿದ್ಧಪಡಿಲಾಗಿದೆ. ಬೆಂಗಳೂರಿನಲ್ಲಿ ಇತ್ತೀಚಿನ ವರ್ಷಗಳಲ್ಲೇ ಅತ್ಯಂತ ದೊಡ್ಡ ಮೇ ದಿನಾಚರಣೆ ರ್‍ಯಾಲಿ ನಡೆಯಿತು. ನಾನಾ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಇದನ್ನು ಏರ್ಪಡಿಸಿದ್ದವು. ಇದರಲ್ಲಿ ಸಿಐಟಿಯು ಪಾತ್ರ ಬಹಳ ದೊಡ್ಡದಿತ್ತು. ಆದರೆ, ರಾಜ್ಯ-ಜಗತ್ತಿನಾದ್ಯಂತ ಸಂಭ್ರಮ- ಸಂಘರ್ಷದ ಕೆಚ್ಚಿನೊಂದಿಗೆ ನಡೆದ ಮೇ ದಿನದ ಕಾರ್ಯಕ್ರಮಗಳನ್ನು ಒತ್ತಟ್ಟಿಗಿಡಿ, ಇಲ್ಲೆ ರಾಜಧಾನಿ ನಗರದಲ್ಲಿ ನಡೆದ ಮೇ ದಿನಾಚರಣೆ ಕಾರ್ಯಕ್ರಮಗಳು ಇಲ್ಲಿನ ಪತ್ರಿಕೆಗಳಲ್ಲಿ ಸೂಕ್ತ ಸ್ಥಾನ ಪಡೆಯಲಿಲ್ಲ ಎನ್ನುವುದು ಮೇ 2 ರ ಪತ್ರಿಕೆಗಳನ್ನು ತಿರುವಿ ಹಾಕಿದಾಗ ಎದ್ದುಕಾಣುತ್ತದೆ.

'ಪ್ರಜಾವಾಣಿ'ಯ ಮುಖಪುಟದ ಎಡಗಡೆ ಸಿಂಗಲ್ ಕಾಲಂ ಬಾಕ್ಸ್‌ನಲ್ಲಿ ಒಂದು ಫೋಟೋ. ಇದು ದೆಹಲಿಯಲ್ಲಿ ಮೇ ದಿನದ ರ್‍ಯಾಲಿಯಲ್ಲಿ ಬಾಲಕನೊಬ್ಬ ಆಹಾರ ಮಾರುತ್ತಿರುವುದರ ಭಾವಚಿತ್ರವಾಗಿತ್ತು. ಅದನ್ನು ಬಿಟ್ಟರೆ ನವದೆಹಲಿ ಡೇಟ್‌ಲೈನ್‌ನಲ್ಲಿ ಎರಡು ಪ್ಯಾರಾದ ಸುದ್ದಿಯೊಂದು ಈ ಪತ್ರಿಕೆಯಲ್ಲಿ ಪ್ರಕಟ. ಪುಟ 3 ರಲ್ಲಿ ಜನತಾದಳ (ಜಾತ್ಯಾತೀತ) ಪಕ್ಷ ಏರ್ಪಡಿಸಿದ್ದ ಸಮಾರಂಭದ 3 ಕಾಲಂ ವರದಿಯೊಂದು ಪ್ರಕಟವಾಯಿತು.

'ವಿಜಯ ಕರ್ನಾಟಕ' ಮುಖಪುಟದಲ್ಲಿ ಬೆಂಗಳೂರು ರ್‍ಯಾಲಿಯ 3 ಕಾಲಂ ಫೋಟೊ ಹಾಕಿ ...ನೇ ಪುಟದಲ್ಲಿ ವಿಸ್ತ್ರತ ವರದಿಯನ್ನು ಪ್ರಕಟಿಸಿತು. ಈ ಪತ್ರಿಕೆಯ 3ನೇ ಪುಟದಲ್ಲಿ ಮೇ ದಿನಕ್ಕೆ ಸಂಬಂಧಿಸಿದ ಇನ್ನು ಎರಡು ಸುದ್ದಿಗಳು. ಒಂದು ಸಂಯುಕ್ತ ಜನತಾದಳ (ಜೆಡಿಯು), ಮತ್ತೊಂದು ಕಾಂಗ್ರೆಸ್‌ನದ್ದು. ಜೆಡಿಯು ಸಭೆಯಲ್ಲಿ ಯು.ಆರ್ ಅನಂತಮೂರ್ತಿ ಭಾಷಣ, ಕಾಂಗ್ರೆಸ್ ಕಾರ್ಮಿಕ ವಿಭಾಗದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಜನಾರ್ಧನ ಪೂಜಾರಿ ಮಾಡಿದ ಭಾಷಣ. ಈ ಎರಡೂ ಭಾಷಣಗಳು ಆಯಾ ಪಕ್ಷಗಳ ಆಂತರಿಕ ರಾಜಕೀಯಕ್ಕೆ ಸಂಬಂಧಿಸಿದ ವಿಚಾರಗಳಿಂದ ಕೂಡಿದ್ದು ಇದನ್ನೇ ದೊಡ್ಡ ಶೀರ್ಷಿಕೆಗಳಲ್ಲಿ ಪ್ರಕಟಿಸಲಾಗಿತ್ತು.

ಬೆಂಗಳೂರು ರ್‍ಯಾಲಿಯ 3 ಕಾಲಂ ಫೋಟೊ ಹೊತ್ತು ತಂದಿತ್ತು 'ಉದಯವಾಣಿ' ಜತೆಯಲ್ಲಿ ಕಾರ್ಮಿಕರ 'ಕಲ್ಯಾಣ'ಕ್ಕೆ ಸರಕಾರ ಘೋಷಿಸಿದ ಯೋಜನೆಗಳ 2 ಕಾಲಂ ಸುದ್ದಿಯಿತ್ತು. ಈ ಪತ್ರಿಕೆಯಲ್ಲಿ ಕೂಡ 'ತಾತ್ವಿಕ ನೆಲೆಗಟ್ಟಿನಲ್ಲಿ ದಳ ಪುನಶ್ಚೇತನಕ್ಕೆ' ಅನಂತಮೂರ್ತಿ ಸಲಹೆ. ಸಚಿವ ಕಾಗೋಡು ತಿಮ್ಮಪ್ಪ ಮಾಡಿದ ಭಾಷಣವನ್ನು ಪ್ರಧಾನವಾಗಿ ಬಿಂಬಿಸಲಾಗಿತ್ತು. ಅದೇ ರೀತಿ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಜನಾರ್ಧನ ಪೂಜಾರಿ ಎನ್.ಡಿ.ಎ ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ಮೇಲೆ ಟೀಕಾ ಪ್ರಹಾರ ಮಾಡಿದ್ದು 4 ಕಾಲಂ ಸುದ್ದಿ ಹಾಗೂ 3 ಕಾಲಂ ಭಾವಚಿತ್ರ ಪ್ರಕಟಗೊಂಡಿತ್ತು.

'ಕನ್ನಡಪ್ರಭ' ಮೇಲೆ ಕಣ್ಣಾಡಿಸಿದಾಗ ಮುಖಪುಟದಲ್ಲಿ ದರ್ಶನವಾಗಿದ್ದು ಕೇವಲ ಸಿಂಗಲ್ ಕಾಲಂ ಸುದ್ದಿ. ರಾಷ್ಟ್ರಮಟ್ಟದ ಮೇ ದಿನಾಚರಣೆಗೆ ಸಂಬಂಧಿಸಿದ್ದು. ಬೆಂಗಳೂರಿನ ಬೃಹತ್ ರ್‍ಯಾಲಿಗೆ ಈ ಪತ್ರಿಕೆಯಲ್ಲಿ ಜಾಗ ಸಿಕ್ಕಿ ಕೇವಲ ಸಿಂಗಲ್ ಕಾಲಂ'

ಇಂಗ್ಲೀಷ್ ಪತ್ರಿಕೆಗಳ 'ಕುರುಡು'



ಕನ್ನಡ ಪತ್ರಿಕೆಗಳ ಕವರೇಜು ಪರಿ ಇದಾದರೆ ಇಂಗ್ಲಿಷ್ ವೃತ್ತಪತ್ರಿಕೆಗಳ ಸ್ಥಿತಿಯನ್ನು ಬೇರೆ ಹೇಳಲೇಬೇಕಾಗುವುದಿಲ್ಲ.

ನಂ.1 ಕನ್ನಡ ದಿನಪತ್ರಿಕೆ ಎಂದು ಹೇಳಿಕೊಳ್ಳುವ ಪತ್ರಿಕೆ ಸಮೂಹದ 'ವಿಜಯ್ ಟೈಮ್ಸ್'ನಲ್ಲಿ ಮುಖಪುಟದಲ್ಲಿ 'ಮೇ ದಿನ' ವೇ ಮಂಗಮಾಯ!

'ದ ಹಿಂದೂ' ದೈನಿಕ ಕೂಡ ಬೆಂಗಳೂರು ರ್‍ಯಾಲಿಯನ್ನು ಪೂರ್ಣವಾಗಿ ನಿರ್ಲಕ್ಷಿಸಿತು. ಕಾಂಗ್ರೆಸ್ ಹಾಗೂ ಸರಕಾರಿ ಸಮಾರಂಭಗಳ ವರದಿ ಮಹತ್ವದ ಸ್ಥಾನ ಪಡೆದಿದ್ದವು.



ಮುಖಪುಟದಲ್ಲಿ ಕುಡುಗೋಲು - ಸುತ್ತಿಗೆ; ಆದರೆ.....

ಪ್ರಮುಖ ಆಂಗ್ಲ ದೈನಿಕಗಳಲ್ಲಿ ಒಂದಾದ 'ಟೈಮ್ಸ್ ಆಫ್ ಇಂಡಿಯಾ' ಮೇ ಒಂದರ ತನ್ನ ಸಂಚಿಕೆಯಲ್ಲಿ ಪತ್ರಿಕೆಯ ಶೀರ್ಷಿಕೆಯಲ್ಲೆ (mast-head) 'ಈ' ಸ್ಥಾನದಲ್ಲಿ ಕುಡುಗೋಲು ಸುತ್ತಿಗೆಯನ್ನು ಕೆಂಪು ಬಣ್ಣದಲ್ಲಿ ಮುದ್ರಿಸಿತ್ತು. ಓಹ್, ಈ ಪತ್ರಿಕೆ ಮೇ ದಿನಕ್ಕೆ ಅದೆಷ್ಟು ಮಹತ್ವ ಕೊಟ್ಟಿದೆ ಎಂದು ಇದನ್ನು ಕಂಡ ಯಾರಾದರೂ ಭಾವಿಸಲೇಬೇಕು. ಆದರೆ ಇದು ಕೇವಲ 'ಗಿಮಿಕ್' ಎನ್ನುವುದು ಮರುದಿನದ ಪತ್ರಿಕೆ ನೋಡಿದಾಗ ತಿಳಿಯಿತು. ಮೇ ದಿನಾಚರಣೆ ಸಂಬಂಧಿಸಿ ಯಾವೊಂದು ಫೋಟೋ ಆಗಲಿ ಮಹತ್ವದ ಸುದ್ದಿಯಾಗಲಿ ಈ ಪತ್ರಿಕೆಯಲ್ಲಿ ಸ್ಥಾನ ಪಡೆಯಲಿಲ್ಲ. ಆದರೆ ಸಾರ್ಸ್ ಭೀತಿಯಿಂದಾಗಿ ಜಗತ್ತಿನ ಹಲವೆಡೆ ಮೇ ದಿನ ಕಾರ್ಯಕ್ರಮಗಳು ರದ್ದಾದವು ಎಂಬ ಶೀರ್ಷಿಕೆಯೊಂದಿಗೆ ಒಳಪುಟದಲ್ಲಿ ಸ್ವಶೋಧನೆಯ ದೊಡ್ಡ ಸುದ್ದಿಯೊಂದನ್ನು ಅದು ಪ್ರಕಟಿಸಿತು!

ಈ ರೀತಿಯಾಗಿ ಮುದ್ರಣ ಮಾಧ್ಯಮವನ್ನು ಗಮನಿಸಿದಾಗ ಮೇ ದಿನದ ಆಚರಣೆಗೆ ಸಲ್ಲಬೇಕಾದ ಸ್ಥಾನವನ್ನು ಅದು ಕಲ್ಪಿಸದಿರುವುದು ಮೇಲ್ನೋಟಕ್ಕೆ ಎದ್ದು ಕಾಣುತ್ತದೆ. ವಾಸ್ತವವಾಗಿ ಈ ಬಾರಿಯ ಮೇ ದಿನದ ಸಂದೇಶವಂತೂ ಬಹಳ ಮಹತ್ವದ್ದಾಗಿತ್ತು. ದುಡಿಯುವ ವರ್ಗದ ಅಸ್ತಿತ್ವಕ್ಕೆ ಮಾರಕವಾದ ನೀತಿಗಳ ವಿರುದ್ಧ ಮೇ 21ರಂದು ಭಾರತದ ಶ್ರಮಿಕ ಜನತೆ ಸಂಘರ್ಷಕ್ಕೆ ಇಳಿಯುವ... ಮಹತ್ವದ ಕಾರ್ಯಾಚರಣೆಯ ಹಿನ್ನೆಲೆ ಈ ... ದಿನಕ್ಕಿತ್ತು. ಸಾಮ್ರಾಜ್ಯಶಾಹಿಗಳ ಯುದ್ಧಕೋ... ನೀತಿಗೆ, ವಿರುದ್ಧವಾಗಿ ಶಾಂತಿಯ ದನಿಯ... ಆದರೆ ಮುಖ್ಯವಾಗಿ ಬಂಡವಾಳಶಾಹಿ... ಹಿಡಿತದಲ್ಲಿರುವ ಪತ್ರಿಕೆಗಳು ಸಹಜವಾಗಿ... 'ಜಾಣ ಕುರುಡನ್ನು' ಪ್ರದರ್ಶಿಸಿವೆ. ಮೇ ... ಸಂದೇಶಕ್ಕೆ ಯಾವ ರೀತಿಯ... ಸಂಬಂಧಪಡದಂಥ 'ದಳಪರಿವಾರದ' ಆ... ವಿಚಾರಕ್ಕೆ ಒತ್ತುಕೊಟ್ಟು ಮಹತ್ವವನ್ನು ಕಡೆಗಣಿಸಿ... ಬಹುಶಃ ಇದರಲ್ಲಿ ಆಯಾ ಪತ್ರಿಕೆಗಳ ವರದಿಗಾ... ಪಾತ್ರವೂ ಇದ್ದೀತು. 'ಬಗ್ಗಿ ಎಂದರೆ ತೆವಳಿದ... ಎನ್ನುವ ಮಾತು ಬಹುಶಃ ಇವರಿಗೆ ಸೂಕ್ತ... ಅನ್ವಯವಾಗುತ್ತದೆ.

ಜಾಗತೀಕರಣದ ದುಷ್ಪರಿಣಾಮ ಭಾರತದ... ದೇಶವನ್ನು ಹೇಗೆ ಹಿಂಡಿ ಹಿಪ್ಪೆ ಮಾಡು... ಎಂಬುದನ್ನು ನಮ್ಮ ಮಾಧ್ಯಮಗಳ ಮಿತ್ರರು ... ಸರಿಯಾಗಿ ಅರ್ಥ ಮಾಡಿಕೊಂಡಂತೆ ಕಾಣು... ಮೇ 21 ರ ಸಾರ್ವತ್ರಿಕ ಮುಷ್ಕರಕ್ಕೆ ಸಂಬಂ... ಸಿಐಟಿಯು ಅಧ್ಯಕ್ಷ ಹಾಗೂ ಮಾಜಿ ಸಂ... ಸದಸ್ಯ ಕಾಂ.ಇ.ಬಾಲಾನಂದನ್ ಮೇ 3 ರ... ಬೆಂಗಳೂರಿನಲ್ಲಿ ನಡೆಸಿದ ಮಾಧ್ಯಮಗೋ... ಸಿಕ್ಕಿದ ಪ್ರಚಾರ ಈ 'ದುರಂತ' ಸ್ಥಿತಿಗೆ ವ್ಯಾ... ಹೇಳುತ್ತದೆ. ಕಾಂ.ಇ.ಬಾಲಾನಂದ... ಮಾಧ್ಯಮಗೋಷ್ಠಿಗೆ ಎರಡು- ಮೂ... ಪ್ಯಾರಾಗಿಂತ ಹೆಚ್ಚು ಸ್ಥಾನವನ್ನು ಯಾ... ಪತ್ರಿಕೆಗಳೂ ಕಲ್ಪಿಸಲಿಲ್ಲ.

ಏನೇ ಇರಲಿ! ಪತ್ರಿಕೆಗಳಲ್ಲಿ, ಟಿವಿಗಳಲ್ಲಿ... ಬರಲಿ, ಬರದೆ ಇರಲಿ, ದುಡಿಯುವ ವ... ಸಮರ ಮಾಧ್ಯಮಗಳ ಪ್ರಚಾರವನ್ನು ಖಂಡಿ... ಅವಲಂಬಿಸಿಲ್ಲ. ಈ ಸಂಘರ್ಷ ನ... ನಡೆದಿರುತ್ತದೆ. ಇಂದಿಗೂ ಎಂದೆಂದಿಗೂ...

● ವಿಶ್ವಾ...

PRB DECR 319-79/79 AIKYARANGA WEEKLY Reg. No. 17015/64 CPM(G) / KA /BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH